ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ

ಸಂಪುಟ 25 ಸಂಚಿಕೆ 50

ಡಿಸೆಂಬರ್ 14, 2003 ಬೆಲೆ ರೂ. 3.00




ನಕ್ಸಲ್‌ವಾದ ಮತ್ತು ಎನ್‌ಕೌಂಟರ್‌ಗಳು



ನೆಲಕಚ್ಚಿದ ಕಾಂಗ್ರೆಸ್ ಪಾಠ ಕಲಿತೀತೇ ?




ವೃತ್ತಿ ಶಿಕ್ಷಣ : ಕುರುಡು ಕಾಂಚಾಣದ ಕ್ರೂರ ನರ್ತನ



ಕ್ರೈಂ ಧಾರಾವಾಹಿ ವಿಕಾರಗಳ ವಿಜೃಂಭಣೆ

ವಿಮೋಚನಾ ಸಮರದಲ್ಲಿ....

ಮೇಜರ್ ಜಯಪಾಲ್ ಸಿಂಗ್



ಆತ್ಮಕಥನ

54



ಕಳೆದ ಸಂಚಿಕೆಯಲ್ಲಿ ಬೆಟ್ಟಗುಡ್ಡಗಳು ಕ್ರಾಂತಿಕಾರಿ ಹಿರೋಯಿಸಂನ ಪವಿತ್ರ ಮಂದಿರಗಳಾಗಿದ್ದು, ನರಪೇತಲ ಜೀವಿಗಳಲ್ಲಿ ವಿಶಿಷ್ಟ ಕಿರಣ ಹೊಮ್ಮಿಸಿದ ಕ್ರಾಂತಿಕಾರಿಗಳು, ನಾವು ಸ್ವಾತಂತ್ರ್ಯದ ರುಚಿಯನ್ನು ಸವಿದಿದ್ದೇವೆ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ರೈತರು ಸಂಜೆ ಐದು ಘಂಟೆ ನಂತರ ಹೊಲ, ಬೆಟ್ಟಗಳನ್ನು ಬಿಡುವಂತೆ ರೈತರಿಗೆ, ಕುರುಬರಿಗೆ ಆದೇಶ ನೀಡದ ನೆಹರು ಸರ್ಕಾರ ಮತ್ತು ಕಮ್ಯುನಿಸ್ಟ್‌ರನ್ನು ಹುಡುಕುವ ನೆಪದಲ್ಲಿ ರಾತ್ರಿಯಿಡಿ ರೈತರ ಮನೆಯಲ್ಲೇ ಉಳಿದು ಅವರ ಆಹಾರ ತಿಂದು ಮಹಿಳೆಯರ ಮೇಲೆ ಅತ್ಯಾಚಾರವೆಸಗುತ್ತಿದ್ದ ಸರ್ದಾರ ಪಟೇಲರ ಸೈನಿಕರ ಬಗ್ಗೆ ಓದಿರುವಿರಿ ಮುಂದೆ.............

ಕನ್ನಡಕ್ಕೆ: ವಿಶ್ವ ಕುಂದಾಪುರ

ಕಳಂಕರಹಿತ ವರ್ತನೆ

ಕ್ರಾಂತಿಕಾರಿ ಘನತೆ

ಮಹಿಳೆಯರ ಕುರಿತು ಸಾಮಾಜಿಕ ವ್ಯವಸ್ಥೆಯಲ್ಲೇ ಅಂತರ್ಗತವಾಗಿರುವ ಅಗೌರವ ಮತ್ತು ಅವಮಾನವನ್ನು ಮರೆಮಾಚಲು ಈ ಗೌರವದ ಮುಖವಾಡ ತೊಟ್ಟಿರುವುದು ಯಾರಿಗೆ ತಾನೇ ಗೊತ್ತಿಲ್ಲ. ಮಹಿಳೆಯರನ್ನು ಘೋರ ರೀತಿಯ ಅಗೌರವ ಹಾಗೂ ಅವಮಾನಕ್ಕೆ ಗುರಿಪಡಿಸುವ ಅಸಹ್ಯ ದೃಶ್ಯಗಳನ್ನು, ಅವರ ಸ್ನಾನಗೃಹಗಳನ್ನು ಮತ್ತು ಕತ್ತಲ ಟಾನ್‌ಗಳನ್ನು ನಾನು ನೋಡಿದ್ದೇನೆ. ದುಡಿಯುವ ವರ್ಗದ ಪರಿಕಲ್ಪನೆ ಹಾಗೂ ಜಾಗತಿಕ ಕಣ್ಣೋಟದ ನೆರವಿನಿಂದಾಗಿ, ಈ ದಬ್ಬಾಳಿಕೆಗಳಿಂದ ಜನರು ಹಾಗೂ ಅವರು ಮಹಿಳಾ ಸಮುದಾಯಕ್ಕೆ ಎಷ್ಟು ಹಾನಿಯಾದೀತೆಂದು ಅರ್ಥ ಮಾಡಿಕೊಳ್ಳಲು ಸಮರ್ಥನಾಗಿದ್ದೆ. ಮಹಿಳೆಯರು ಅಥವಾ ಮಕ್ಕಳಿಗೆ ಅವರ ಸಾಮಾಜಿಕ ಪರಿಕಲ್ಪನೆಯ ಗೌರವವನ್ನು ತೋರುವಂತೆ ಮನವಿ ಮಾಡಿಕೊಳ್ಳುವುದು ವ್ಯರ್ಥವೆಂದು ನನಗೆ ಗೊತ್ತು, ಯಾಕೆಂದರೆ ಅವರ ಕ್ರೂರ ಪದ್ಧತಿ ಇದಕ್ಕೆ ತದ್ವಿರುದ್ಧವಾದ ಪರಿಕಲ್ಪನೆಯನ್ನು ಅವರಿಗೆ ಕೊಟ್ಟಿತ್ತು. ಅಂಥ ಸಾಮಾಜಿಕ ಪ್ರಜ್ಞೆ ಅವರಿಗೆ ಇಲ್ಲವೆಂದು ನನಗೆ ಗೊತ್ತು. ಆದರೆ ಸಿನಿಕತನ, ನೆಹರೂ ಆಡಳಿತವನ್ನು ಫ್ಯಾಸಿಸ್ಟ್ ಎಂದು ಕರೆದು ತೃಪ್ತರಾಗುವ ರಾಜಕೀಯ ಸಿದ್ಧಾಂತಗಳು, ಪಕ್ಷದಲ್ಲಿ ಆ ಕ್ಷಣದಲ್ಲಿ ಕಂಡುಬಂದ ಹೃದಯ ಶೂನ್ಯ ಚರ್ಚೆಗಳು ನನ್ನನ್ನು ತುಂಬಾ ಘಾಸಿಗೊಳಿಸಿದವು. ತೆಲಂಗಾಣದ ಗ್ರಾಮೀಣ ಭಾಗಗಳಲ್ಲಿ ನಮ್ಮ ಜನರು ಎಂಥ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆಂಬುದು ನಮಗೆ ನಿಜವಾಗಿಯೂ ಜಾಸ್ತಿ ವಿಚಾರ ಗೊತ್ತಿರಲಿಲ್ಲ. ನಾವು ಆ ಬಗ್ಗೆ ತಿಳಿದುಕೊಂಡಿದ್ದು ತುಂಬಾ ಕಡಿಮೆಯೆ.

ನಾನು ಒಂದೆಡೆ ನೋವು ಸಂಕಟವನ್ನು ಮತ್ತು ಭಯಭೀತಗೊಂಡ ರೈತರನ್ನು ನೋಡಿದೆ. ಹೋರಾಟದ ಹಾಗೂ ಪ್ರತಿರೋಧಿಸುವವರನ್ನೂ ನಾನು ಕಂಡೆ. ಅವರು ತಮ್ಮ ಉತ್ತಮ ಪುತ್ರ-ಪುತ್ರಿಯರನ್ನು ಗೆರಿಲ್ಲಾ ಪಡೆಗಳಿಗೆ ಸೇರಿ ಶತ್ರುಗಳ ವಿರುದ್ಧ ಸೆಣಸಲು ಬೆಟ್ಟಗುಡ್ಡಗಳಿಗೆ ಕಳಿಸಿಕೊಟ್ಟರು. ಅವರು ತಮ್ಮ ಸ್ವಂತ ಗ್ರಾಮಗಳಲ್ಲಿ ತಮ್ಮನ್ನು ರಕ್ಷಿಸಿಕೊಳ್ಳುವ ತಮ್ಮದೇ ಆದ ಕಾರ್ಯಸಾಧುವಾದ ಹಾಗೂ ಪರಿಣಾಮಕಾರಿ ಯಾದ ಮಾರ್ಗಗಳನ್ನು ಅವರು ರೂಪಿಸಿಕೊಂಡಿದ್ದರು.

> ತೆಲಂಗಾಣದ ಕ್ರಾಂತಿಕಾರಿ ಹೋರಾಟವೂ ಈ ಕಳಂಕರಹಿತ ದಾಖಲೆ, ಪರಂಪರೆಯನ್ನು ಮುಂದುವರಿಸಿದೆ, ಎತ್ತಿ ಹಿಡಿದಿದೆ. ಏನಾದರೂ ಅಹಿತಕರ ಪ್ರಕರಣಗಳು ನಡೆದಿದ್ದರೆ ಕ್ರಾಂತಿಕಾರಿ ಜನರ ನಡುವೆ ನುಸುಳಿದ ದುಷ್ಕರ್ಮಿಗಳ ಕುಕೃತ್ಯಗಳಾಗಿವೆ ಅಷ್ಟೆ. ಆದರೆ ಹೋರಾಟನಿರತ ಜನರ ಸ್ಥೈರ್ಯವನ್ನು ಕುಗ್ಗಿಸಲು ವೈರಿಗಳು ಅತ್ಯಾಚಾರ, ಲೂಟಿ, ಧ್ವಂಸ ಮತ್ತು ಸಾಮೂಹಿಕ ಹತ್ಯೆಯ ಕ್ರೂರ ಮಾರ್ಗಗಳನ್ನು ಬಳಸುವುದಕ್ಕೆ ಏನೆನ್ನುತ್ತೀರಿ?

ಮುಸ್ಸಂಜೆಯಿಂದ ಮುಂಜಾನೆವರೆಗಿನ ಕರ್ಫ್ಯೂ ಗ್ರಾಮಸ್ಥರನ್ನು ಆವರಿಸಿದ್ದಾಗ, ಫ್ಯಾಸಿಸ್ಟ್ ಪುಂಡರು ಗ್ರಾಮದ ಹಳ್ಳಿಗಳಲ್ಲಿ ಅಡ್ಡಾಡುತ್ತಿದ್ದಾಗ ಸಾವಿರಾರು ಮೈಲುಗಳುದ್ದದ ಹೆದ್ದಾರಿಯಲ್ಲಿನ ಸಂಚಾರ ಸ್ಥಗಿತಗೊಂಡಿದ್ದಾಗ ಗೆರಿಲ್ಲಾಗಳು ಕ್ರಿಯಾಶೀಲ ರಾಗುತ್ತಿದ್ದರು. ಕಗ್ಗತ್ತಲನ್ನು ಸೀಳಿಕೊಂಡು, ಬಂಡೆಗಳಿಗೆ ಎಡತಾಕಿ ಮುಳ್ಳುಕಂಟಿಗಳ ಪೊದೆಗಳನ್ನು ಕಡಿದುಕೊಂಡು, ಆಳವಾದ ಬಿರುಸಿನ ನದಿಗಳನ್ನು ದಾಟಿ, ಕಡಿದಾದ ಬೆಟ್ಟಗುಡ್ಡ ಹತ್ತಿ, ಕೆಸರು ಗದ್ದೆಗಳನ್ನು ದಾಟಿ ಸಾಗಿದ ಈ ಗೆರಿಲ್ಲಾಗಳ ಕಾಲುಗಳು ಸೀಳಿಹೋಗಿ ರಕ್ತ ಸುರಿಯುತ್ತಿತ್ತು. ಕೈಗಳು ಪರಚಿಹೋಗುತ್ತಿದ್ದವು. ತೆವಳಿಕೊಂಡು ಹೋಗಿದ್ದರಿಂದ ಕೈಗಳು ಗಾಯಗಳಿಂದ ಕೂಡಿರುತ್ತಿದ್ದವು, ಗಾಯಗಳಿಂದ ಕೀವು ಸುರಿಯುತ್ತಿತ್ತು. ಹೀಗೆಲ್ಲಾ ಸಂಕಟಗಳಿದ್ದರೂ ಅವರು ಮೈಲುಗಟ್ಟಲೆ ದಾರಿ ಸವೆಸಿ ವೈರಿ ಶಿಬಿರಗಳ ಮೇಲೆ ಆಕ್ರಮಣ ಮಾಡುತ್ತಿದ್ದರು. ಶತ್ರುಗಳು ಹಳ್ಳಿಗಳ ದಾರಿಗಳಲ್ಲಿ ದಾಳಿ ಎರಗಲು ಸಜ್ಜಾಗುತ್ತಿದ್ದರು. ತನ್ನದೆ ಜನರ ರಕ್ತದಿಂದ ಕೈಗಳಿಗೆ ಬಣ್ಣ ಮೆತ್ತಿಕೊಂಡಿದ್ದ ವೈರಿ ಏಜೆಂಟರ ಮೇಲೆ ಗೆರಿಲ್ಲಾಗಳು ಎರಗುತ್ತಿದ್ದರು. ಕರ್ಫ್ಯೂಬಾಧಿತ ರಾತ್ರಿಯ ನೀರವ ಮೌನವನ್ನು ಗೆರಿಲ್ಲಾಗಳು ಮತ್ತು ಶತ್ರುಗಳ ನಡುವಿನ ಗುಂಡಿನ ಚಕಮಕಿಯ ಸದ್ದು ಬೇಧಿಸುತ್ತಿತ್ತು.

ಕ್ರೂರ ದಬ್ಬಾಳಿಕೆಗೆ ಒಳಗಾದ ರೈತರ, ಅತ್ಯಾಚಾರವಾಗುತ್ತಿರುವ ಮಹಿಳೆಯರ ಆಕ್ರಂದನದ ಜೊತೆಗೆ ಗೆರಿಲ್ಲಾಗಳ ವಶವಾದ ಸೈನಿಕನ ದೈನ್ಯತೆಯ ದನಿಯೂ ಸೇರುತ್ತಿತ್ತು. ಗೆರಿಲ್ಲಾಗಳನ್ನು ನೋಡುತ್ತಿದ್ದಂತೆಯೇ ಶತ್ರು ಸೈನಿಕರು ಮಾನ ಮರ್ಯಾದೆ ಬಿಟ್ಟು ಮೊಣಕಾಲೂರಿ ಎರಡೂ ಕೈಜೋಡಿಸಿ ದಯಾ ಭಿಕ್ಷೆ ಬೇಡುತ್ತಿದ್ದರು. ಗಾಯ ಗೊಂಡ ನಾಯಿಯಂತೆ ಕುಂಯ್‌ಗುಡುತ್ತಿದ್ದರು. ಜನರ ದಿಟ್ಟತನದ ಎದುರು ಬಾಡಿಗೆ ಬಂಟರ ಸತ್ವಹೀನ, ಗೌರವಹೀನ ವ್ಯಕ್ತಿತ್ವ ನಗ್ನವಾಗಿ ಎದ್ದುಕಾಣುತ್ತಿತ್ತು.

ಕಳಂಕರಹಿತ ದಾಖಲೆ

ಭೂಮಾಲಿಕರ ಮನೆ ಅಥವಾ ಪೊಲೀಸ್ ಶಿಬಿರಗಳ ಮೇಲೆ ದಾಳಿ ಮಾಡಿದಾಗ ಶತ್ರು ಪಕ್ಷದ ಮಹಿಳೆಯರು ಕೈವಶವಾದಾಗ ದುಡಿಯುವ ವರ್ಗದ ವೈಚಾರಿಕತೆ ಹಾಗೂ ವಿವೇಕವನ್ನು ತೋರ್ಪಡಿಸುವುದು ನಿಜವಾಗಿಯೂ ಕಷ್ಟದ ಕೆಲಸ. ಈ ಫ್ಯಾಸಿಸ್ಟ್ ಗೂಂಡಾಗಳು ನಮ್ಮ ಸಂಗಾತಿಗಳು ಮತ್ತು ಜನರಿಗೆ ಎಂಥ ಕಷ್ಟ ಕೊಡುತ್ತಾರೆ ಎಂದು ಕಲ್ಪಿಸಿ ಕೊಳ್ಳುವುದು ಸುಲಭ. ಆದರೆ ಎಲ್ಲ ಮಹಿಳೆಯರ ಬಗೆಗೆ ಜನರು ಹೊಂದಿರುವ ಗೌರವ ಹಾಗೂ ಆತ್ಮೀಯ ಭಾವನೆ ಮತ್ತು ಗೆರಿಲ್ಲಾ ಪಡೆಗಳ ದುಡಿಯುವವರ್ಗದ ಶಿಸ್ತು ಇವುಗಳು ಶತ್ರು ಸ್ತ್ರೀಯರ ಬಗ್ಗೆ ಗೌರವದ ವರ್ತನೆಯನ್ನು ತೋರುವಂತೆ ಮಾಡಿತ್ತು. ಈ ಕ್ರಾಂತಿಕಾರಿ ಘನತೆ ಹಾಗೂ ಮಹಿಳೆಯ ಬಗೆಗಿನ ವರ್ತನೆ ಪರಿಶುದ್ಧವಾಗಿತ್ತು ಹಾಗೂ ಶ್ಲಾಘನೀಯವಾಗಿತ್ತು.

ತೀಕ್ಷ್ಣ ಹೋರಾಟದ ಸುದೀರ್ಘ ಅವಧಿಯುದ್ದಕ್ಕೂ ಗೆರಿಲ್ಲಾಗಳಾಗಲೀ ಜನರಾಗಲೀ ಶತ್ರು ಮಹಿಳೆಯರ ಮೇಲೆ ಅತ್ಯಾಚಾರಗೈದ ಒಂದೇ ಒಂದು ಉದಾಹರಣೆಯಿಲ್ಲ. ಕೇವಲ ಎರಡು ಪ್ರಕರಣಗಳಲ್ಲಿ ಒಬ್ಬ ಭೂಮಾಲಿಕ ಹಾಗೂ ಒಬ್ಬ ಪೊಲೀಸ್ ಅಧಿಕಾರಿಯ ಹೆಂಡತಿಯರನ್ನು ಗುಂಡಿಟ್ಟು ಕೊಲ್ಲಲಾಗಿತ್ತು. ಅದಕ್ಕಾಗಿ ನಾವು ವಿಷಾದಿಸುತ್ತೇವೆ. ಈ ಮಹಿಳೆಯರ ಹತ್ಯೆಗೆ ಕಾರಣವಾದ ಸಂಗಾತಿಗಳನ್ನು ತೀಕ್ಷ್ಣವಾಗಿ ಟೀಕಿಸಲಾಗಿತ್ತು. ಆ ಸಂಗಾತಿಗಳಿದ್ದ ತಂಡದ ಕಮಾಂಡರ್‌ಗಳನ್ನು ತೆಗೆದುಹಾಕಲಾಗಿತ್ತು. ಈ ಇಬ್ಬರು ಮಹಿಳೆಯರ ಸಾವಿಗಾಗಿ ವೈರಿಗಳು ಎಷ್ಟೊಂದು ಮರುಗಿದರು, ಎಷ್ಟೊಂದು ಆಕ್ರೋಶ ವ್ಯಕ್ತಪಡಿಸಿದರು. ಆದರೆ ತಲೆಬೋಳಿಸಿದ, ಘಾಸಿಗೊಂಡ ಸ್ತನಗಳ ಹಾಗೂ ಗಾಯಗೊಂಡ ಮರ್ಮಾಂಗಗಳ ಆ ಸಾವಿರಾರು ಮಹಿಳೆಯರ ಪರಿಸ್ಥಿತಿಯೇನೆಂದು ಇವರು ಕಿಂಚಿತ್ತಾದರೂ ಯೋಚಿಸಿದ್ದಾರೆಯೇ? ಹತ್ತಾರು ದುರುಳರು ಅತ್ಯಾಚಾರ ಮಾಡುವಾಗ ಮೃತಪಟ್ಟ ಮಹಿಳೆಯರ ಬಗ್ಗೆ ಏನೆನ್ನುತ್ತಾರೆ? ಸ್ವತಃ ತಮ್ಮ ಮನೆಗಳಲ್ಲೇ ಮಾನ ಕಳೆದುಕೊಂಡ ಸ್ತ್ರೀಯರ ಸ್ಥಿತಿ ಏನು? ಏನಿದ್ದರೂ ಈ ಕ್ರೂರ ಮೃಗಗಳು ಅದನ್ನೆಲ್ಲ ಅರ್ಥ ಮಾಡಿಕೊಳ್ಳುವುದಿಲ್ಲ ಎಂದು ಪ್ರಾದೇಶಿಕ ಕಾರ್ಯದರ್ಶಿ ತುಂಬಾ ನೊಂದ ಮನಸ್ಸಿನಿಂದ ವಿವರಿಸಿದರು.

ಶೋಷಿತ ಜನತೆ ಆಕ್ರೋಶ ಹಠಾತ್ತನೆ ಸ್ಫೋಟಗೊಂಡಾಗ ಹಾಗೂ ಅಂಥ ಕ್ರಾಂತಿಕಾರಿ ವಿದ್ಯಮಾನಗಳಿಗೆ ದುಡಿಯುವ ವರ್ಗದ ನಾಯಕತ್ವ ಸಿಗದಿದ್ದಾಗ ಕ್ರಾಂತಿಕಾರಿ ಘರ್ಷಣೆಗಳ ಸಮಯದಲ್ಲಿ ಶತ್ರು ಮಹಿಳೆಯರ ಮೇಲೆ ದೌರ್ಜನ್ಯ ನಡೆಯುವುದು ನಿಜ. ಈ ಶತಮಾನದಲ್ಲಿ ಸಂಭವಿಸಿದ, ಕ್ರಾಂತಿಕಾರಿ ಉತ್ಪಾತಕ್ಕೆ ದುಡಿಯುವ ವರ್ಗದ ನಾಯಕತ್ವ ದೊರೆತ ಎಲ್ಲ ಐತಿಹಾಸಿಕ ಕ್ರಾಂತಿಗಳಲ್ಲಿ ಮಹಿಳೆಯರ ಮೇಲೆ ದಬ್ಬಾಳಿಕೆ ನಡೆದಿರುವುದು ಕೆಲವು ದುಷ್ಕರ್ಮಿಗಳಿಂದಲೇ ಹೊರತು ಅದು ಜನತೆಯ ಸಂಘಟಿತ ಸಿಟ್ಟಿನ ಪರಿಣಾಮ ಅಲ್ಲವೇ ಅಲ್ಲ.

ತೆಲಂಗಾಣದ ಕ್ರಾಂತಿಕಾರಿ ಹೋರಾಟವೂ ಈ ಕಳಂಕರಹಿತ ದಾಖಲೆ, ಪರಂಪರೆಯನ್ನು ಮುಂದುವರಿಸಿದೆ, ಎತ್ತಿ ಹಿಡಿದಿದೆ. ಏನಾದರೂ ಅಹಿತಕರ ಪ್ರಕರಣಗಳು ನಡೆದಿದ್ದರೆ ಕ್ರಾಂತಿಕಾರಿ ಜನರ ನಡುವೆ ನುಸುಳಿದ ದುಷ್ಕರ್ಮಿಗಳ ಕುಕೃತ್ಯಗಳಾಗಿವೆ ಅಷ್ಟೆ. ಆದರೆ ಹೋರಾಟನಿರತ ಜನರ ಸ್ಥೈರ್ಯವನ್ನು ಕುಗ್ಗಿಸಲು ವೈರಿಗಳು ಅತ್ಯಾಚಾರ, ಲೂಟಿ, ಧ್ವಂಸ ಮತ್ತು ಸಾಮೂಹಿಕ ಹತ್ಯೆಯ ಕ್ರೂರ ಮಾರ್ಗಗಳನ್ನು ಬಳಸುವುದಕ್ಕೆ ಏನೆನ್ನುತ್ತೀರಿ?

ನಾನು ಶತ್ರುಗಳನ್ನು ಉದ್ದೇಶಿಸಿಯೇ ಈ ಮಾತುಗಳನ್ನು ಹೇಳುತ್ತಿಲ್ಲ. ಹುಚ್ಚುಮೃಗಕ್ಕೆ ಸಾಮಾಜಿಕ ಮತ್ತು ಉದಾತ್ತ ಬಾವನೆಗಳ ಬಗ್ಗೆ ಹೇಳುವುದರಿಂದ ಪ್ರಯೋಜನವಿಲ್ಲ. ಆದರೆ, ತೆಲಂಗಾಣದಲ್ಲಿ ನಮ್ಮ ಸಂಗಾತಿಗಳ ಪ್ರಚೋದನೆಯೇ ಶತ್ರುಗಳು ಈರೀತಿ ಬರ್ಬರವಾಗಿ ನಡೆದುಕೊಳ್ಳಲು ಕಾರಣ ಎಂದು ವೈರಿಗಳು ಹರಡುವ ಅಪಪ್ರಚಾರವನ್ನು ನಂಬುವ ತೆಲಂಗಾಣ ಹಾಗೂ ಆಂಧ್ರದ ಹೊರಗಿನ ನಮ್ಮ ಸಂಗಾತಿಗಳನ್ನುದ್ದೇಶಿಸಿ ಈ ಮಾತುಗಳನ್ನು ಹೇಳುತ್ತಿದ್ದೇನೆ.

(ಮುಂದುವರಿಯುವುದು)

ಏನಂತೀರಿ?

ಕಳೆದೊಂದು ವರುಷದಿಂದಲೂ ನಿರಂತರವಾಗಿ 'ವಿಮೋಚನಾ ಸಮರದಲ್ಲಿ....' ಆತ್ಮಕಥನವನ್ನು ಓದುತ್ತಾ ಬಂದಿದ್ದೀರಿ. ಪ್ರತೀವಾರವೂ ಕಾತುರದಿಂದ, ಕೆಚ್ಚಿದೆಯ ಅನುಭವಗಳನ್ನು ಅರಿವ ತವಕದಲ್ಲಿ ಓದುಗರು ಕಾದಿದ್ದು ಪ್ರತೀವಾರವೂ ನಮಗೆ ಬಂದ ಪ್ರತಿಕ್ರಿಯೆಗಳಿಂದ ಕಂಡಿದೆ.

52 ಕಂತುಗಳಲ್ಲಿ ಈಗಾಗಲೇ ತೆರೆದುಕೊಂಡ ಆತ್ಮಕಥನ ಇನ್ನೇನು ಎರಡು ವಾರದಲ್ಲಿ ಮುಕ್ತಾಯಗೊಳ್ಳಲಿದೆ. ಎಲ್ಲರಲ್ಲೂ ಹೋರಾಟದ ಕಿಚ್ಚು ಹಚ್ಚಿದ, ಚಿಂತನೆ ಬೆಳೆಸಿದ ಈ ಧಾರವಾಹಿಯ ಬಗ್ಗೆ ನಿಮ್ಮ ಅನಿಸಿಕೆಗಳಿಗೆ ಸ್ವಾಗತ. ತಪ್ಪದೇ ಅಭಿಪ್ರಾಯಗಳನ್ನು ಬರೆದು ಕಳಿಸಿ. ಅವುಗಳನ್ನು ದಾಖಲಿಸೋಣ. ಪತ್ರಗಳು ಡಿಸೆಂಬರ್ 10 ರೊಳಗೆ ನಮಗೆ ತಲುಪಲಿ.


- ಸಂ.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಡಿಸೆಂಬರ್ 7, 8-2003**
  ಕೋಮುವಾದಿಗಳ ವಿರುದ್ಧ ಸಾಮರಸ್ಯಕ್ಕಾಗಿ ಸೌಹಾರ್ದತಾ ಸಮಾವೇಶ, ಚಿಕ್ಕಮಗಳೂರು
- **ಡಿಸೆಂಬರ್ 7, 14 -2003**
  ಬೆಂಗಳೂರು ಹಬ್ಬದ ಪ್ರಯುಕ್ತ ವಿವಿದ ಕಾರ್ಯಕ್ರಮಗಳು. ಡಿಸೆಂಬರ್ 9,- ಬಸವಲಿಂಗಯ್ಯ ಅವರಿಂದ **'ಅಗ್ನಿ ಮತ್ತು ಮಳೆ'** ನಾಟಕ ಡಿಸೆಂಬರ್ 10, ಪ್ರಸನ್ನ ಅವರ ನಿರ್ದೇಶನದಲ್ಲಿ **'ಹ್ಯಾಮ್ಲೆಟ್'**
- **ಡಿಸೆಂಬರ್ 9 ರಿಂದ 13,2003**
  ಸಿಐಟಿಯು ಅಖಿಲ ಭಾರತ ಸಮ್ಮೇಳನ ರಾಮಲಕ್ಷ್ಮಿ ಪ್ಯಾರಡೈಸ್, ನಂ.174, ಜಿ.ಎನ್.ಟಿ.ರಸ್ತೆ, ಮಾಧವರಾಮ್, ಚೆನ್ನೈ-600 010
- **ಡಿಸೆಂಬರ್ 9 ರಿಂದ 13, 2003**
  ಸಿಐಟಿಯು ಅಖಿಲ ಭಾರತ ಸಮ್ಮೇಳನ, ರಾಮಲಕ್ಷ್ಮಿ ಪ್ಯಾರಡೈಸ್, ನಂ. 174, ಜಿ.ಎನ್.ಟಿ. ರಸ್ತೆ, ಮಾಧವರಾಮ್, ಚೆನ್ನೈ-600 010.
- **ಡಿಸೆಂಬರ್ 11,2003**
  ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ಶುಲ್ಕ ಮತ್ತು ಪ್ರವೇಶವನ್ನು ಕ್ರಮಬದ್ಧಗೊಳಿಸಲು ಕೇಂದ್ರ ಶಾಸನಕ್ಕೆ ಆಗ್ರಹಿಸಿ ವಿದ್ಯಾರ್ಥಿಗಳ ಪ್ರಾಜಾಪ್ರಭುತ್ವ ಹಕ್ಕುಗಳಿಗೆ ಒತ್ತಾಯಿಸಿ ಅಖಿಲ ಭಾರತ ವಿದ್ಯಾರ್ಥಿ ಮುಷ್ಕರ
- **ಡಿಸೆಂಬರ್ 19,20-2003**
  ಜೀವ ವಿಮಾ(ಎಲ್‌ಐಸಿ) ಏಜೆಂಟ್ಸ್ ಅಖಿಲ ಭಾರತ ಸಮ್ಮೇಳನ, ತಿರುವನಂತಪುರ
- **ಡಿಸೆಂಬರ್ 28-30-2003**
  64ನೇ ಭಾರತ ಇತಿಹಾಸ ಕಾಂಗ್ರೆಸ್ ಮೈಸೂರು ವಿಶ್ವವಿದ್ಯಾಲಯ, ಮೈಸೂರು

ವಿಧಾನ ಪರಿಷತ್‌ಗೆ ಚುನಾವಣೆ : ಕಾಂಗ್ರೆಸ್ ಸಾಧನೆಗೆ ಸಿಕ್ಕ ಪುರಸ್ಕಾರವೇ?

ಕರ್ನಾಟಕದ ವಿಧಾನಪರಿಷತ್‌ಗೆ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆದ ಚುನಾವಣಾ ಫಲಿತಾಂಶಗಳಿಂದ ಬೀಗುತ್ತಿದ್ದ ಕರ್ನಾಟಕದ ಕಾಂಗ್ರೆಸ್ಸಿಗರ ಮುಖದಲ್ಲೀಗ 'ಮ್ಲಾನತೆ' ಆವರಿಸಿದೆ. ಮುಂಜಾನೆಗಿದ್ದ ಸಂತೋಷ ಸಂಜೆಗಿಲ್ಲ. ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸ್‌ಗಡ - ರಾಜ್ಯಗಳಲ್ಲಿ ಕಾಂಗ್ರೆಸ್ ಪರಾಭವಗೊಂಡು ನೆಲಕಚ್ಚಿದೆ. ಕಾಂಗ್ರೆಸ್ಸಿಗರಲ್ಲಿ ನಡುಕ ಹುಟ್ಟಿಸಿದೆ. ವಿಧಾನಸಭಾ ಸ್ಥಾನಗಳ ಫಲಿತಾಂಶ 'ತಮ್ಮ ಸರ್ಕಾರದ ಸಾಧನೆಗಳಿಗೆ ಸಿಕ್ಕ ಪುರಸ್ಕಾರ', 'ಕಾಂಗ್ರೆಸ್ಸಿಗಿರುವ ಜನ ಬೆಂಬಲದ ಪ್ರತೀಕ' ವೆಂದೆಲ್ಲಾ ಹೇಳಿಕೊಂಡ ಮುಖ್ಯಮಂತ್ರಿ ಕೃಷ್ಣ, ಗೃಹ ಸಚಿವ ಖರ್ಗೆಯವರೂ ತಣ್ಣಗಾಗಿದ್ದಾರೆ. ಉತ್ತರ ಭಾರತದ ರಾಜ್ಯಗಳ ಈ ಫಲಿತಾಂಶದ ಪರಿಣಾಮ ಅಂದಾಜಿಸಲು ತುರ್ತು ಸಭೆಯನ್ನು ಕೃಷ್ಣರವರು ಕರೆದಿದ್ದಾರೆ. ಇಂತಹ ಸೋಲು-ಸಂದರ್ಭಗಳಲ್ಲಿ ಕಾಂಗ್ರೆಸ್ಸಿಗರು ಆತ್ಮ ವಿಮರ್ಶೆಗೆ ಒಡ್ಡಿಕೊಳ್ಳುವುದಿಲ್ಲ. ಆತ್ಮವಿಶ್ವಾಸ ತುಂಬಿಸಿಕೊಳ್ಳಲು ಸೋಲಿನ ಪ್ರಧಾನ ವಿಷಯಗಳನ್ನು ಜನರಿಂದ ಮರೆಸಲು, ಹಲವು ವ್ಯಾಖ್ಯಾನಗಳು ಸಿದ್ಧಗೊಳ್ಳುತ್ತವೆ. ಇದೇನು ಹೊಸದಲ್ಲ! ಸ್ಥಳೀಯ ಸಂಸ್ಥೆಗಳಲ್ಲಿ 25 ರಲ್ಲಿ 20 ಶಾಸಕರನ್ನು ಆರಿಸಿಕೊಂಡರೂ ಉತ್ತರ ರಾಜ್ಯಗಳ ಫಲಿತಾಂಶ ಕೃಷ್ಣರನ್ನು ಕಾಡದೇ ಬಿಡದು. ಈ ರಾಜ್ಯಗಳಲ್ಲಿ ಕಾಂಗ್ರೆಸ್ ಪುನರಾಯ್ಕೆ ಆಗಿದ್ದರೆ ದೇಶದಲ್ಲಿ ತಾವೇ ಪರ್ಯಾಯವೆಂದು ತೋರಿಸಲು ಒಂದು ಸಂದರ್ಭ ಸಿಗುತ್ತಿತ್ತೆಂದು ಕಾದಿದ್ದರು. ಹಾಗೆಯೇ ಎರಡನೇ ಅವಧಿಗೆ ಆಯ್ಕೆಯಾಗಿದ್ದ ಮಧ್ಯಪ್ರದೇಶದ ದಿಗ್ವಿಜಯಸಿಂಗ್ ಸರ್ಕಾರದ ಆಡಳಿತ ತಂತ್ರ (9) ಅನುಸರಿಸಿದರೆ, ಜಾಗತೀಕರಣ-ಖಾಸಗೀಕರಣಗಳ ನೀತಿ ಅನುಸರಿಸಿಯೂ ಕೃಷ್ಣರ ಸರ್ಕಾರವೂ ಮತ್ತೆ ಅಧಿಕಾರಕ್ಕೆ ಮರಳುವುದು ಖಚಿತವೆಂದು ಭಾವಿಸಿದ್ದರು. ಹೀಗಾಗಿ ಅಲ್ಲಿನ ಸೋಲಿನ ಸುಂಟರಗಾಳಿ ಇಲ್ಲಿಗೂ ತಿರುಗಿದರೆ? ಎಂಬ ಚಿಂತೆ. ಈ ರಾಜ್ಯಗಳಲ್ಲಿ ಜನತೆ ಕಾಂಗ್ರೆಸ್‌ಗೆ ಬಿಜೆಪಿಯನ್ನು ಪರ್ಯಾಯವಾಗಿ ಆರಿಸಿ ಗೆಲ್ಲಿಸಿರುವುದು ಬಿಜೆಪಿ ವಲಯದಲ್ಲಿ ಅಬ್ಬರಿಸಲು ಅನುಕೂಲವಾದರೂ ಕರ್ನಾಟಕದಲ್ಲಿ ಅದು ಅಧಿಕಾರದ ಗದ್ದುಗೆಯ ಸಮೀಪಕ್ಕೂ ಸುಳಿಯದು ಎಂಬ ಗಟ್ಟಿ ವಿಶ್ವಾಸ ಮುಖ್ಯಮಂತ್ರಿ ಕೃಷ್ಣರದು. ಈಚೆಗೆ ಸಿಪಿಐ(ಎಂ), ಜನತಾದಳ(ಎಸ್), ಸಿಪಿಐ ಪಕ್ಷಗಳ ನಿಯೋಗ ಬಾಬಾ ಬುಡನ್‌ಗಿರಿ ಹಾಗೂ ಹೆಚ್ಚುತ್ತಿರುವ



ಕೋಮುಗಲಭೆಗಳ ಕುರಿತಾಗಿ ಚರ್ಚಿಸುವಾಗ ಕೋಮುವಾದೀ ಬಿಜೆಪಿ ರಾಜಕಾರಣಕ್ಕೆ ಜನ ಮಣೆ ಹಾಕಲಾರರು, ಇನ್ನು ಅಧಿಕಾರ ಹಿಡಿಯುವುದು ಹಗಲಗನಸು ಎಂದೇ ಕೃಷ್ಣ ನುಡಿದಿದ್ದರು.

ಯಾಕೆ ಅಂತಂಕ ಪರಿಸ್ಥಿತಿ ಹೀಗಿದ್ದರೂ ಕೃಷ್ಣರಿಗೆ ಆತಂಕವೇಕೆ? ಹಾಗೆ ಆತಂಕಿಸಲು ಕಾರಣವಿದೆ. ಕಾಂಗ್ರೆಸ್‌ಗೆ ಕರ್ನಾಟಕದಲ್ಲೂ ಜನತಾದಳ(ಎಸ್) ಪರ್ಯಾಯವಾಗಿ ಬಂದೀತೆಂದು ಭಯ. ಈ ಸ್ಥಳೀಯ ಸಂಸ್ಥೆಗಳಿಂದ ನಡೆದ ಎಂ.ಎಲ್.ಸಿ.

ಈವಾರ ಕರ್ನಾಟಕ
ಒಂದು ನೋಟ
ಎಸ್.ವೈ.ಗುರುಶಾಂತ್

ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬಹುತೇಕ ಜಿಲ್ಲೆಗಳಲ್ಲಿ ಎರಡನೇ ಸ್ಥಾನದಲ್ಲಿರುವುದೇ ಜನತಾದಳ(ಎಸ್), ಕಾಂಗ್ರೆಸ್‌ಗೆ 20 ಸ್ಥಾನ ಬಿಟ್ಟರೆ ಉಳಿದ 4 ಸ್ಥಾನಗಳು ಜನತಾದಳ ಬಣಗಳದ್ದೇ. ಇನ್ನೊಂದು ಬೆಂಬಲಿತವೇ. ಕಾಂಗ್ರೆಸ್ ಈ ಎಂಎಲ್‌ಸಿ ಚುನಾವಣೆಗಳಲ್ಲಿ 20 ಸ್ಥಾನ ಗಳಿಸಿರುವುದು ವಿಶೇಷವೇನಲ್ಲ. ಅವರು ಹೇಳಿಕೊಂಡಂತೆ ಸಾಧನೆಗೂ ಸಿಕ್ಕ ಪುರಸ್ಕಾರವೂ ಅಲ್ಲ. ಆಡಳಿತದ ಅಂಗೀಕಾರವೇನಲ್ಲ.

ಪಂಚಾಯತ್, ಪುರಸಭೆ ಮುಂತಾದ ಈ ಸ್ಥಳೀಯ ಸಂಸ್ಥೆಗಳು ಆಯ್ಕೆಯಾದದ್ದು ನಾಲ್ಕು ವರುಷಗಳ ಹಿಂದೆ. ಆಗಿನ್ನೂ ಅಪಾರ ಆಸೆ ಹೊತ್ತು ಕಾಂಗ್ರೆಸ್ಸನ್ನೇ ಅಧಿಕಾರಕ್ಕೆ ಆರಿಸಿದ್ದರು ಜನ. ಭಾರಿ ಬಹುಮತವನ್ನೇ ಕೊಟ್ಟಿದ್ದರು. ಈ ಅಧಿಕಾರ ನೀಡಿದ ಜನತೆಗೆ ಈಗ ಸರ್ಕಾರದ ಚಾಟಿಯೇಟುಗಳು ಬೆನ್ನ ಮೇಲೆ ಬಾಸುಂಡೆ ಮೂಡಿಸಿವೆ. ಗಂಟಲೊಳಗೆ ನೀರು ಇಳಿಯದ ಸ್ಥಿತಿ ತಲುಪಿದೆ. ಹೀಗೆ ಅಧಿಕಾರದ, ಸರ್ಕಾರದ ನೀತಿಗಳ ಆಘಾತ ಅನುಭವಿಸುತ್ತಿರುವ ಜನಸಾಮಾನ್ಯರು ಇಲ್ಲಿ ಮತದಾರರೇನಲ್ಲ. ಏನಿದ್ದರೂ ಹಿಂದೆ ಆರಿಸಲ್ಪಟ್ಟವರು. ಹೆಚ್ಚೆಂದರೆ ಕಾಂಗ್ರೆಸ್ ಏನಿದ್ದರೂ ತನ್ನ ಸದಸ್ಯರ ಜೊತೆ ಸಂಬಂಧ ಉಳಿಸಿಕೊಂಡಿದೆ ಎಂದು ಹೇಳಬಹುದಷ್ಟೇ?

ಜನಸಮೂಹದತ್ತ ಜನತಾದಳ ಸಾಗುವುದೇ?

ಜನತಾದಳದ ಬಣಗಳೂ ಎರಡೆರಡು ಸ್ಥಾನ ಗಳಿಸಿರುವುದು ನಿರೀಕ್ಷಿತವೇ. ಆದರೆ ಒಂದು ಹಂತದಲ್ಲಿ ಅತ್ಯಧಿಕ ಸ್ಥಾನ ಗೆಲ್ಲುವ ಅತಿ ವಿಶ್ವಾಸ ಜನತಾದಳ(ಎಸ್) ನಾಯಕರಲ್ಲಿತ್ತು. ಒಂದು ಹಂತದಲ್ಲಂತೂ ಜನತಾದಳ(ಎಸ್) ಅಥವಾ ಅ.ಭಾ. ಪ್ರಗತಿಪರ ಜನತಾದಳಗಳಲ್ಲಿ ಯಾರದು ನಿಜಕ್ಕೂ ಹೆಚ್ಚಿನ ಶಕ್ತಿ ಎಂದು ಪ್ರದರ್ಶನ ಆಗಿಯೇ ಬಿಡಲಿ ಎಂದು ಬಹಿರಂಗ ಹೇಳಿಕೆಗಳು ಹೊರಬಿದ್ದವು. ಈ ಫಲಿತಾಂಶ ಜನತಾದಳದ ಬಣಗಳು ಅದರಲ್ಲೂ ಜನತಾದಳ(ಎಸ್) ಜನಪ್ರತಿನಿಧಿಗಳ ನಡುವೆ ಹೆಚ್ಚಿನ ಶಕ್ತಿ ಇದೆಯೆಂದು ತೋರಿಸಿಕೊಂಡಿದೆ. ಆದರೆ ಇಷ್ಟಕ್ಕೆ ತೃಪ್ತಿ ಪಡಬೇಕೇ? ನಿಜಕ್ಕೂ ಜನತಾದಳ(ಎಸ್) ಗಮನಹರಿಸಬೇಕಾದದ್ದು ಬಾಧಿತ ಜನ ಸಮೂಹದ ನಡುವೆಯೇ. ಆ ಸಮೂಹದ ಜ್ವಲಂತ ಪ್ರಶ್ನೆಗಳನ್ನೆತ್ತಿ, ಸಂಕಟದಲ್ಲಿ ತಾನೂ ಸಹಭಾಗಿ, ಅದರ ನಿವಾರಣೆಗೆ ಹೋರಾಟ ರೂಪಿಸಲು ಮುಂದಾದರೆ, ಜನಸಮೂಹದ ನಡುವೆ ಸಂಬಂಧ ಗಾಢಗೊಳ್ಳುವುದಷ್ಟೇ ಅಲ್ಲ, ಹೊಸ ಬದಲಾವಣೆಗೆ ಮೂಲ ಅಂಶವಾಗುತ್ತದೆ. ಇದರತ್ತ ಗಮನ ಅಗತ್ಯ.

ಹೊರಬಿದ್ದ ಒಳಜಗಳದ ಹೂರಣ

ಈ ಚುನಾವಣೆಯಲ್ಲಿ ಕಾಂಗ್ರೆಸ್ ಒಳಗಿನ ಒಳಜಗಳ ಹೊರಬಿದ್ದಿದೆ. ಬೀದರ್-ಕೊಡಗುಗಳಲ್ಲಿ ಬಂಡಾಯ ಸ್ಫೋಟಗೊಂಡಿತು. ಬೀದರ್‌ನಲ್ಲಿ ಹಿರಿಯ ನಾಯಕ ಭೀಮಣ್ಣ ಖಂಡ್ರೆಯನ್ನು ಉಚ್ಚಾಟಿಸಲಾಗಿದೆ. ಕೊಡಗಿನಲ್ಲಿ ಸಚಿವ ಟಿ.ಜಾನ್ ಸೋತು ಮುಖಭಂಗಕ್ಕೀಡಾಗಿದ್ದಾರೆ. ಬಂಡಾಯ ಹೂಡಿದ್ದ ಅರುಣ್ ಮಾಚಯ್ಯ ಸಿಪಿಐ(ಎಂ), ಜನತಾದಳ(ಎಸ್) ಬೆಂಬಲದಿಂದ ಗೆದ್ದಿದ್ದಾರೆ. ಇದರ ಪರಿಣಾಮ 3 ಮಂತ್ರಿಗಳಿರುವ ಕೊಡಗಿನ ಕಾಂಗ್ರೆಸ್‌ನಲ್ಲಿ ವಿವಾದಗಳು, ಪರಸ್ಪರ ದೋಷಾರೋಪಣೆ ನಡೆದಿದೆ. ಇದು ಎಲ್ಲಿಗೆ ತಲುಪುವುದೋ ನೋಡಬೇಕು.

ನೆಲಕಚ್ಚಿದ ಬಿಜೆಪಿ

ಒಟ್ಟಾರೆ ಕರ್ನಾಟಕದಲ್ಲಿ ಬಿಜೆಪಿ ನೆಲಕಚ್ಚಿರುವುದು ಸತತವಾಗಿ ಸೋಲು ಅನುಭವಿಸುತ್ತಾ ಬಂದ, ಮತ್ತು ಅದು ಏನೇ ಅಬ್ಬರಿಸಿಕೊಂಡರೂ ಅದರ ಶಕ್ತಿ ಇಷ್ಟೇ ಎಂದು ತೋರಿಸಿದ ಫಲಿತಾಂಶ. ಇಂತಹ ಸಂದರ್ಭದಲ್ಲಿ ಜನತಾದಳ (ಎಸ್), ಎಡ ಪಕ್ಷಗಳು ಜನತೆ ಪ್ರಶ್ನೆಗಳಿಗೆ ಆಂದೋಲನಕ್ಕಿಳಿಯುವುದು ಈ ಸಂದರ್ಭದ ಒತ್ತಾಯ.

ಬಾಬಾ ಬುಡನ್‌ಗಿರಿ
ಸಾಮರಸ್ಯ ರಕ್ಷಿಸುವ ಕೃಷ್ಣರ ಪರಿ

ಬಾಬಾ ಬುಡನ್ ಗಿರಿಯಲ್ಲಿನ ಕೋಮು ಸಾಮರಸ್ಯ, ಸಹಬಾಳ್ವೆಯ ಪ್ರತೀಕವಾಗಿರುವ ಬಾಬಾಬುಡನ್ ಸ್ವಾಮಿ ದತ್ತ ಪೀಠದ ಗುಹೆಯ ಸುತ್ತಮುತ್ತ ಬೆಳೆಸಲಾಗುತ್ತಿರುವ ವಿವಾದ ಮತ್ತು ರಾಜ್ಯದಲ್ಲಿ ಹುಟ್ಟುಹಾಕುತ್ತಿರುವ ಕೋಮುಗಲಭೆಗಳ ಬಗ್ಗೆ ಬಗ್ಗೆ ಮುಖ್ಯ ಮಂತ್ರಿ ಕೃಷ್ಣರೊಂದಿಗೆ ಚರ್ಚಿಸಬಯಸಿದ ಮೂರು ಪಕ್ಷಗಳ ನಿಯೋಗಕ್ಕೆ ನವೆಂ 29ರ ಮಧ್ಯಾಹ್ನ 12.15ಕ್ಕೆ ಅವಕಾಶ ನೀಡಲಾಗಿತ್ತು. ಸ್ಥಳ ತಲುಪುತ್ತಿರುವಾಗ ಮುಖ್ಯಮಂತ್ರಿಗಳು ಬೇರೊಂದು ಕಾರ್ಯಕ್ರಮದಲ್ಲಿದ್ದು ಈಗ ಸಾಧ್ಯವಿಲ್ಲವೆಂದು ಅವರ ಆಪ್ತ ಕಾರ್ಯದರ್ಶಿ ತಿಳಿಸಿದರು. ಅವರ ಬರುವಿಕೆ ಕಾಯುವುದಾಗಿ ಹೇಳಿದಾಗ ಪ್ರಿನ್ಸಿಪಲ್ ಸೆಕ್ರೆಟರಿಯವರಿಗೆ ಮನವಿ ಕೊಟ್ಟು ಮಾತನಾಡಿ ಎಂಬ ಅಮೋಘ ಆಹ್ವಾನವನ್ನು 'ಅಪ್ಪರು' ನೀಡಿದರು. ನಾವೇನೋ ಅನುದಾನ ಅರಸಿ ಬಂದ ಸಂತ್ರಸ್ತರೆಂದು ಆತ ಭಾವಿಸಿರಬಹುದು ನಾವು ಮೂರೂ ರಾಜಕೀಯ ಪಕ್ಷಗಳು ನೋಡಬಯಸಿರುವುದು ಮುಖ್ಯಮಂತ್ರಿಗಳನ್ನು ಗುಮಾಸ್ತರನ್ನಲ್ಲ, ಸ್ಪಷ್ಟಮಾತುಗಳಲ್ಲಿ ಕಾಂ. ಜಿ.ಎನ್. ನಾಗರಾಜ್ ನಿರಾಕರಿಸಿದರು. ಕೊನೆಗೆ ಸಚಿವ ಅಲ್ಲಂ ವೀರಭದ್ರಪ್ಪನವರು ಮನವಿ ಸ್ವೀಕರಿಸುವರೆಂದೂ ಮುಖ್ಯಮಂತ್ರಿ ಪರ ಬಂದಿದ್ದಕ್ಕೆ ನಿರಾಕರಿಸೋದು ಬೇಡವೆಂದು ಅಲ್ಲಿಗೆ ಹೋದಾಗ ಕೃಷ್ಣರವರೇ ಕೆಲವು ನಿಮಿಷಗಳಲ್ಲಿ ಖುದ್ದಾಗಿ ಮನವಿ ಸ್ವೀಕರಿಸಲು ಬಂದರು.

ಕರ್ನಾಟಕದಲ್ಲಿನ ವಿದ್ಯಮಾನಗಳು - ಬಾಬಾಬುಡನ್ ಗಿರಿಯಲ್ಲಿನ ಪರಿಸ್ಥಿತಿ ಕೋಮುವಾದಿಗಳ ಮುಂದಿನ ಹಂತದ ರಾಜಕೀಯ ಕಾರ್ಯಸೂಚಿಯನ್ನು ವಿವರಿಸಿದಾಗ ಕೃಷ್ಣರವರು ಸಹಮತ ವ್ಯಕ್ತಪಡಿಸಿದರು. 'ಕೋಮುವಾದಿಗಳ ಆಟಕ್ಕೆ ಕರ್ನಾಟಕದಲ್ಲಿ ಅವಕಾಶವಿಲ್ಲವೆಂದೂ, ಕರ್ನಾಟಕವನ್ನು ಗುಜರಾತ್ ಮಾಡಲು ಬಿಡೋದಿಲ್ಲ ಮಾತ್ರವಲ್ಲ ಅಂತಹವರು ಗುಜರಾತ್‌ನಲ್ಲಿ ಆಶ್ರಯಪಡೆಯಬೇಕಾಗುತ್ತದೆ' ಎಂದು ಉತ್ಸಾಹದಲ್ಲಿ ಹೇಳಿದರು. ಕರ್ನಾಟಕದಲ್ಲಿ ಕೋಮುಗಲಭೆಗಳನ್ನು ಸಂಘಪರಿವಾರ ಹಬ್ಬಿಸಿ ಅಪಾರ ಆಸ್ತಿ - ಜೀವಹಾನಿ ಉಂಟುಮಾಡುತ್ತಿರುವಾಗ 'ಆಡಳಿತ' ಮೌನವಾಗಿರುತ್ತದೆ, ದೃಢವಾಗಿ ಕ್ರಮ ಜರುಗುತ್ತಿಲ್ಲ.



ಕರ್ನಾಟಕವನ್ನು ಗುಜರಾತನ್ನಾಗಿಸುವುದಾಗಿ ಬೆದರಿಕೆ ಒಡ್ಡಿದ ವಿಶ್ವಹಿಂದೂ ಪರಿಷತ್ತಿನ ಪ್ರವೀಣ್ ತೊಗಾಡಿಯಾ ಬೆಂಗಳೂರಿಗೆ ಹಿಂದೂ ಸಮಾಜೋತ್ಸವಕ್ಕಾಗಿ ಆಗಮಿಸುತ್ತಿರುವುದನ್ನು ಪ್ರತಿಭಟಿಸಿ ಬೆಂಗಳೂರಿನ ಟೌನ್ ಹಾಲ್ ಎದುರಿನಲ್ಲಿ ಡಿವೈಎಫ್ಐ, ಎಸ್.ಎಫ್.ಐ, ಜೆ.ಎಂ.ಎಸ್., ಹಾಗೂ ಎಲ್ಲಾ ಪ್ರಗತಿಪರ ಸಂಘಟನೆಗಳಿಂದ ಭಾರಿ ಪ್ರತಿಭಟನೆ. ತೊಗಾಡಿಯ ವಾಪಸ್ಸೋಗು, ಕೋಮು ಸೌಹಾರ್ದತೆ ಶಾಂತಿ ಚಿರಾಯುವಾಗಲಿ ಎಂಬುದು ಎಲ್ಲರ ಘೋಷಣೆ. ಖ್ಯಾತ ನಿರ್ದೇಶಕ ಗಿರೀಶ್ ಕಾರ್ನಾಡ್, ಖ್ಯಾತ ಕವಿ ಜಿ.ಎಸ್. ಶಿವರುದ್ರಪ್ಪ, ರಾಮಚಂದ್ರಶರ್ಮ, ಗೌರಿ ಲಂಕೇಶ್, ಜಿ. ರಾಮಕೃಷ್ಣ ಮತ್ತು ಸಿ.ಪಿ.ಐ(ಎಂ), ಸಿಪಿಐ, ಜನತಾದಳ(ಎಸ್), ಡಿ.ಎಸ್.ಎಸ್. ಇತರರು ಭಾಗವಹಿಸಿದ್ದರು.

ಪುಟ 5 ಕ್ಕೆ....

ಐಕ್ಯರಂಗ
4 ದಶಕಗಳ ಹಿಂದೆ

1964 ನವೆಂಬರ್ 15

ಕಾರ್ಮಿಕರ ರೈತರ ಪ್ರತಿನಿಧಿಗಳು ನಾವು, ಚೀನಾ ರಶ್ಯಾಗಳೆರಡರ ಏಜೆಂಟರೂ ಅಲ್ಲ

ಕಮ್ಯುನಿಸ್ಟ್ ಪಾರ್ಟಿ 7ನೇ ಕಾಂಗ್ರೆಸ್ಸಿನ ಮುಕ್ತಾಯ ಸಭೆಯಲ್ಲಿ ಕಾಂ. ಬಸವಪುನ್ನಯ್ಯರ ಘೋಷಣೆ

ನಾವು ಚೀನದ ಏಜೆಂಟರೂ ಅಲ್ಲ - ರಶ್ಯಾದ ಏಜೆಂಟರೂ ಅಲ್ಲ, ನಾವು ಭಾರತದ ಮಜೂರರ ಮತ್ತು ರೈತರ ಪ್ರತಿನಿಧಿಗಳು - ಎಂದು ಕಲ್ಕತ್ತಾದಲ್ಲಿ ಸೇರಿದ ಭಾರತ ಕಮ್ಯುನಿಸ್ಟ್ ಪಾರ್ಟಿಯ ಸಭೆಯಲ್ಲಿ ಕಾಂ. ಬಸವಪುನ್ನಯ್ಯನವರು ಸ್ಪಷ್ಟವಾಗಿ ಸಾರಿದ್ದಾರೆ.

ಕಾಂ. ಸುಂದರಯ್ಯ ಪ್ರಧಾನ ಕಾರ್ಯದರ್ಶಿ

ಭಾರತ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಪ್ರಥಮ ಸಭೆಯು ತಾ. 8 ರಂದು [illegible] ಸೇರಿ, ಆಂಧ್ರದ ಕಾಂ. ಪಿ.ಸುಂದರಯ್ಯನವರನ್ನು ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಿದೆ.

★

ಕೇಂದ್ರ, ರಾಜ್ಯ ಸರ್ಕಾರಗಳ ಅಸಡ್ಡೆಯಿಂದ ಕೇರಳದ ಜನತೆ ಉಪವಾಸದ ಅಂಚಿನಲ್ಲಿ

ಶಾಲಾ-ಕಾಲೇಜು ಬಂದ್, ಹೋಟೇಲು, ಹಾಸ್ಟೆಲ್ ಬಂದ್

ಮೊದಲೇ ಒಪ್ಪೊತ್ತಿನ ಊಟಕ್ಕೂ ತತ್ವಾರವಾಗಿದ್ದ ಕೇರಳದ ಜನತೆಯಿಂದ ಕಾಡಿನಲ್ಲಿ ಸಿಗುವ ಸೊಪ್ಪು, ಗಡ್ಡೆಗಳನ್ನು ತಿಂದು ಜೀವಿಸಬೇಕಾದ ಪರಿಸ್ಥಿತಿಗೆ ಮುಟ್ಟಿದೆ.

★

ಭಜನಾ ಮಂದಿರಕ್ಕೆ ಬೀಗಮುದ್ರೆ

ಬಂಟ್ವಾಳ ತಾಲೂಕಿನ ಓಮುದ ಪದವಿನಲ್ಲಿರುವ ಶ್ರೀ ವೀರವಿಠಲ ಭಜನಾ ಮಂದಿರದಲ್ಲಿ 40 ಮುಡಿ ಅಕ್ಕಿ ಮತ್ತು ಭತ್ತದ ದಾಸ್ತಾನಿದೆಯೆಂದು ಯಾರೋ ತಿಳಿಸಿದ ಮೇರೆಗೆ ತಪಾಸಣೆ ನಡೆಸಲು ತಹಶೀಲ್ದಾರರು ಹೋದಾಗ ಮಂದಿರದ ವ್ಯವಸ್ಥಾಪಕರು ಅಲ್ಲಿರಲಿಲ್ಲವೆಂದೂ ಆದುದರಿಂದ ಬೀಗಕ್ಕೆ ಸೀಲು ಮಾಡಲಾಯಿತೆಂದೂ ತಿಳಿದುಬರುತ್ತದೆ.

★

ಬಾಬಾ ಬುಡನ್ ಗಿರಿಯಲ್ಲಿ ಕೋಮು ಸಾಮರಸ್ಯದ ಪರಂಪರೆ ರಕ್ಷಿಸಲು ಆಗ್ರಹಿಸಿ ರಾಜ್ಯಾದ್ಯಂತ ಧರಣಿ ಸತ್ಯಾಗ್ರಹ

ಚಿಕ್ಕಮಗಳೂರಿನ ಬಾಬಾಬುಡನ್ ಸ್ವಾಮಿ ದತ್ತ ಪೀಠದಲ್ಲಿ ಭಜರಂಗದಳ, ವಿಶ್ವ ಹಿಂದೂ ಪರಿಷತ್ ಮುಂತಾದ ಸಂಘಟನೆಗಳು ಆಚರಿಸಲೊರಟಿರುವ ದತ್ತ ಜಯಂತಿ, ದತ್ತಮಾಲೆ, ದತ್ತಪೂಜೆಗಳು ಅಲ್ಲಿನ ಪರಂಪರೆಗೆ ವಿರುದ್ಧವಾದುದಾಗಿದೆ, ಕಾನೂನುಬಾಹಿರವಾಗಿದೆ. ಶೋಭಾ ಯಾತ್ರೆ, ಸಭೆಗಳ ಮೂಲಕ ಕೋಮುದ್ವೇಷ ಹಬ್ಬಿಸಲಾಗುತ್ತಿದೆ. ಈಚೆಗೆ ಆಚರಿಸಲಾಗು ತ್ತಿರುವ 'ದತ್ತ ಜಯಂತಿ' ಧಾರ್ಮಿಕತೆ ಹೆಸರಲ್ಲಿ ರಾಜಕೀಯ ಸಂಘಟನೆಗಳು ನಡೆ ಸುತ್ತಿರುವ ರಾಜಕೀಯ ಕಾರ್ಯಕ್ರಮವಾಗಿದೆ.

ಈ ನಾಡಿನ ಸಾಮರಸ್ಯ-ಶಾಂತಿ-ಸೌಹಾರ್ದತೆ ಕಲಕಿ, ರಾಜ್ಯದಲ್ಲಿ ಸುಮಾರು 40 ಯೋಜಿತ ಕೋಮು ಗಲಭೆಗಳು ಸಂಭವಿಸಿವೆ. ಕರ್ನಾಟಕವನ್ನು ಗುಜರಾತ್ ಮಾಡುವ, ಬಾಬಾಬುಡನ್ ಗಿರಿಯನ್ನು ಅಯೋಧ್ಯೆಯನ್ನಾಗಿಸುವ ಸಂಘ ಪರಿವಾರ ಮತ್ತು ಬಿಜೆಪಿ ತಂತ್ರಗಳನ್ನು ಜನತೆಗೆ ವಿವರಿ ಸಲು, ಮತೀಯ ವಿಭಜನೆ ಎದುರಿಸಿ, ಬಾಬಾ ಬುಡನ್‌ಗಿರಿಯ ಸೂಫಿ ಸಂತರ ದರ್ಗಾದ ಸ್ವರೂಪವನ್ನು ಯಥಾ ರೀತಿ ಕಾಪಾಡಲು ಒತ್ತಾಯಿಸಿ ಜಿಲ್ಲಾ ಕೇಂದ್ರ ಗಳಲ್ಲಿ ಧರಣಿ ಸತ್ಯಾಗ್ರಹಕ್ಕೆ ಸಿಪಿಐ(ಎಂ) ಕರೆ ನೀಡಿತ್ತು. ಆ ಕರೆಯ ಭಾಗವಾಗಿ ಡಿಸೆಂಬರ್ 2 ರಂದು ರಾಜ್ಯದ ವಿವಿಧೆಡೆ ನಡೆದ ಧರಣಿ ಸತ್ಯಾಗ್ರಹಗಳ ವರದಿ.

ಚಿಕ್ಕಮಗಳೂರು : ಸಿಪಿಐ(ಎಂ) ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಛೇರಿ ಎದುರು ದರಣಿ ನಡೆಯಿತು. ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್ ಭಾಗವಹಿಸಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಸುಕುಮಾರ್, ದಮೇಶ, ನದೀಮ್ ಸಿಪಿಐ ಮುಖಂಡರಾದ ಅಮ್ಜದ್, ಲೋಕೇಶ್, ಸಾತಿ ಸುಂದರೇಶ್, ಜೆ.ಡಿ.(ಎಸ್)ನ ದೇವರಾಜ್ ದರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದರು. ನೂರಾರು ಜನರು ಈ ಕಾರ್ಯಕ್ರಮದಲ್ಲಿ ಬಾಗವಹಿಸಿದ ನಂತರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯ್ತು.

ಮೈಸೂರು: ಸಿಪಿಐ(ಎಂ), ಸಿಪಿಐ ಮತ್ತು ಜನತಾದಳ(ಎಸ್) ಪಕ್ಷಗಳ 200 ಕ್ಕೂ ಹೆಚ್ಚು ಕಾರ್ಯಕರ್ತರು ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ ನಡೆಸಿದರು. ಧರಣಿ ಉದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಮುಖಂಡರಾದ ಬಸವರಾಜ್, ಸಿಪಿಐನ ವೆಂಕಟರಾಮಯ್ಯ, ಜಾತ್ಯಾತೀತ ಜನತಾದಳದ ಅಧ್ಯಕ್ಷ ಅನಂತು, ಮಾಜಿ ಮೇಯರ್ ನಾರಾಯಣ, ಪ್ರೊ. ಕೆ.ರಾಮ ದಾಸ್, ವಿಕ್ರಾಂತ್ ಕಾರ್ಮಿಕ ಮುಖಂಡ ಕೃಷ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎನ್.ಎಸ್.ಪ್ರಭಾಕರ್, ಸಿಐಟಿಯು ಅಧ್ಯಕ್ಷ ಜಿ.ಜಯರಾಂ, ಕಾರ್ಯದರ್ಶಿ ಜಗದೀಶ್, ಮೈಸೂರು ನಗರಪಾಲಿಕೆಯ ಹಲವು ಸದಸ್ಯರುಗಳು ಭಾಗವಹಿಸಿದ್ದರು. ದತ್ತ ಜಯಂತಿ ನಿಷೇಧಿಸಿ, ಕೋಮು ಸೌಹಾದ ಪರಂಪರೆ ಯನ್ನು ಉಳಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ರಾಯಚೂರು : ತಾಲ್ಲೂಕು ಸಿಪಿಐ(ಎಂ), ದಸಂಸ, ಜನತಾದಳ (ಎಸ್) ಪಕ್ಷಗಳ ಕಾರ್ಯಕರ್ತರು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ನಡೆಸಿದರು. ಧರಣಿಯಲ್ಲಿ ಸಿಪಿಐ(ಎಂ)ನ ತಿಪ್ಪಣ್ಣ, ರಸೂಲ್ ಅಹ್ಮದ್, ಜಿ.ಎಸ್. ವೀರಭದ್ರೇಗೌಡ, ವೈ.ಈರಣ್ಣ, ನಾರಾಯಣ ಖಾಜ ಹುಸೇನ್, ರಾಜೇಶ್ ಕೆ. ಶ್ಯಾಮಸುಂದರ್, ಗೋಪಾಲ ನಾಯಕ್, ನಾಗೇಂದ್ರ ಅಚ್ಚೊಳ್ಳಿ, ದೇವಪ್ಪ ಕಲ್ಮಾಲ, ನಾಗರಾಜ ಅಚ್ಚೊಳ್ಳಿ, ಶರಣ ಬಸಪ್ಪ ಅಚ್ಚೊಳ್ಳಿ, ಮಹಾಲ ಪೂಜಾರಿ ಮೊದಲಾದವರು ನೇತೃತ್ವವಹಿಸಿ ಭಾಗವಹಿಸಿದ್ದರು. ಧರಣಿ ಬೆಂಬಲಿಸಿ ದಸಂಸದ ಶರಣಪ್ಪ ದಿನ್ನಿ, ಹಮಾಲರ ಸಂಘದ ಎಸ್.ಪರಸಪ್ಪ, ಸುಭಾಷ್ ಘಾಟೆ, ಆಂಜನೇಯ ಹೊಸುಗಲ್ಲು, ಲಿಂಗಸೂರು ಶಾಸಕ ಅಮರೇಗೌಡ ಬಯ್ಯಾಪುರ, ಜೆಡಿಎಸ್ ಅಧ್ಯಕ್ಷ ಶೇಖ್ ರಿಜ್ವಾನ್, ಜಗನ್ನಾಥ್ ಸುಂಕಾರಿ ಭಾಗವಹಿಸಿದ್ದರು.

ಗಂಗಾವತಿ : ಸಿಪಿಐ(ಎಂ) ಪಕ್ಷದ ನೂರಾರು ಕಾರ್ಯಕರ್ತರು ತಾಲ್ಲೂಕು ಕಛೇರಿ ಎದುರು ಧರಣಿ ನಡೆಸಿದರು. ಧರಣಿ ಉದ್ದೇಶಿಸಿ ಸಿಪಿಐ(ಎಂ)ನ ಮುಖಂಡರಾದ ಬಾಲಪ್ಪ, ಚಂದ್ರಪ್ಪ ಹೊಸ್ಕೇರಾ, ಗಂಗಾಧರ ಸ್ವಾಮಿ, ವಿ. ಹುಲುಗಪ್ಪ, ಲಿಂಗಪ್ಪ ಹನವಾಳ, ಎಸ್‌ಎಫ್‌ಐ ಮುಖಂಡರಾದ ನಿರುಪಾದಿ, ಹುಲ್ಲೇಶ್, ವೆಂಕಟೇಶ್, ಕೃಷ್ಣ, ಡಿವೈಎಫ್‌ಐನ ಮೆಹಬೂಬ್, ಜಾಫರ್ ಮೊದಲಾದವರು ಮಾತನಾಡಿ ದರು. ನಂತರ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಮಂಗಳೂರು : ಸಿಪಿಐ(ಎಂ), ಸಿಪಿಐ, ಜನತಾದಳ ಎಸ್, ಜನತಾದಳ (ಪ್ರ) ಪಕ್ಷಗಳ ಇನ್ನೂರಕ್ಕೂ ಹೆಚ್ಚು ಕಾರ್ಯಕರ್ತರು ಜಿಲ್ಲಾಧಿಕಾರಿ ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು. ಧರಣಿ ಉದ್ದೇಶಿಸಿ ಕೆ.ಆರ್.ಶ್ರೀಯಾನ್, ಬಿ.ಮಾಧವ ಅಲ್ಲದೇ ಆಯಾ ಪಕ್ಷಗಳ ಜಿಲ್ಲಾ ಮುಖಂಡರು ಮಾತನಾಡಿದರು.

ಉಡುಪಿ: ಸಿಪಿಐ(ಎಂ)ನ ನೂರಕ್ಕೂ ಹೆಚ್ಚು ಕಾರ್ಯಕರ್ತರು ಜಿಲ್ಲಾಧಿಕಾರಿ ಕಛೇರಿ ಎದುರು ಧರಣಿ ನಡೆಸಿದರು. ಧರಣಿಯಲ್ಲಿ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್, ತಾಲ್ಲೂಕು ಕಾರ್ಯದರ್ಶಿ ವಿಶ್ವನಾಥ ರೈ ಮೊದಲಾದವರು ಮಾತನಾಡಿದರು. ನಂತರ ಮನವಿ ಸಲ್ಲಿಸಲಾಯಿತು.



ಧಾರವಾಡದಲ್ಲಿ

ಬೆಂಗಳೂರು: ಸಿಪಿಐ(ಎಂ)ನ ನೂರಾರು ಕಾರ್ಯಕರ್ತರು ಜಿಲ್ಲಾಧಿಕಾರಿ ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು. ಧರಣಿ ಉದ್ದೇಶಿಸಿ ರಾಜ್ಯ ಮುಖಂಡರಾದ ಜಿ.ಸಿ.ಬಯ್ಯಾರೆಡ್ಡಿ, ಎಸ್.ವೈ.ಗುರುಶಾಂತ್, ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಎನ್.ಪ್ರಭಾ ಮೊದಲಾದವರು ಮಾತನಾಡಿದರು.

ಪಕ್ಷದ ಜಿಲ್ಲಾ ಮುಖಂಡರಾದ ಗೋಪಾಲಗೌಡ, ಗೋಪಾಲಕೃಷ್ಣ, ಇ.ಕೆ.ಎನ್. ರಾಜನ್, ಪಿ.ಕೆ. ಸುಭಾಹ್ಮಣಿ ಮುಂತಾದವರು ಅಲ್ಲದೇ ವಕೀಲರು, ಮಹಿಳೆಯರು ಪಾಲ್ಗೊಂಡಿದ್ದರು. ನಂತರ ಜಿಲ್ಲಾಧಿಕಾರಿಗಳಿಗೆ ಮನವಿಸಲ್ಲಿಸಲಾಯಿತು.

ಧಾರವಾಡ: ಅಂಬೇಡ್ಕರ್ ಪ್ರತಿಮೆ ಎದುರು ಸಿಪಿಐ(ಎಂ) ನ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಸಿಪಿಐ(ಎಂ) ಮುಖಂಡರಾದ ನಿತ್ಯಾನಂದಸ್ವಾಮಿ ಆರ್.ಹೆಚ್.ಆಯಿ, ಉಪ ಮೇಯರ್ ಜನತಾದಳ ದಳದ ದಾನಪ್ಪ ಕಬ್ಬೇರ್, ಡಾ। ಗೋಪಾಲ ದಾಬಡೆ ಪ್ರೊ। ಶಿವಾನಂದ ಶೆಟ್ಟರ ರಮೇಶ್ ರಾಠೋಡ ಮೊದಲಾದವರು ಮಾತನಾಡಿದರು.

ಗುಲ್ಬರ್ಗಾ : ಗುಲ್ಬರ್ಗಾ ಸಿಪಿಐ(ಎಂ) ಜಿಲ್ಲಾಸಮಿತಿ ನೇತೃತ್ವದಲ್ಲಿ ಜಿಲ್ಲಾದಿಕಾರಿ ಕಛೇರಿ ಎದುರು ಧರಣಿ ನಡೆಸಲಾಯ್ತು. ಇದರಲ್ಲಿ 113 ಜನ ಭಾಗವಹಿಸಿದ್ದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ನೀಲಾ ಮಾತನಾಡಿದರು. ಜನತಾದಳ (ಜಾತ್ಯಾತೀತ) ಮುಖಂಡರಾದ ಮಾಜಿ ಸಭಾಪತಿ ಬಿ.ಆರ್.ಪಾಟೀಲ್ ಹಾಗೂ ಮಾಜಿ ಸಚಿವ ಎಸ್.ಕೆ.ಕಾಂತಾ ಧರಣಿಯಲ್ಲಿ ಪಾಲ್ಗೊಂಡು ಜನತೆಯನ್ನು ಉದ್ದೇಶಿಸಿ ಮಾತನಾಡಿದರು. ನಂತರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯ್ತು.

ಕೊಡಗು : ಜಿಲ್ಲೆಯಲ್ಲಿ ಸಿಪಿಐ(ಎಂ) ಜಿಲ್ಲಾ ಸಂಘಟನಾಸಮಿತಿ ನೇತೃತ್ವದಲ್ಲಿ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯ್ತು.

ಕೋಲಾರ: ಸಿಪಿಐ(ಎಂ) ಜಿಲ್ಲಾಸಮಿತಿ ನೇತೃತ್ವದಲ್ಲಿ ಗಾಂಧಿ ಪ್ರತಿಮೆ ಬಳಿ ಧರಣಿ ನಡೆಸಲಾಯ್ತು. ಬೆಳಿಗ್ಗೆಯಿಂದ ಸಂಜೆಯವರೆಗೆ ನಡೆದ ಈ ಕಾರ್ಯಕ್ರಮದಲ್ಲಿ) ಎಲ್ಲಾ ವಿಭಾಗಗಳಿಂದ 60 ಕ್ಕೂ ಅಧಿಕ ಜನ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಗಾಂಧಿನಗರ ನಾರಾಯಣಸ್ವಾಮಿ ಎಸ್.ಎಫ್.ಐ.ನ ಮುಖಂಡರಾದ ಗೀತಾ, ಎ.ವಿ.ವೆಂಕಟರಮಣ ಹಾಗೂ ಅಫ್ಜಲ್ ಪಾಶಾ ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದರು.

ಬೀದರ್: ಸಿಪಿಐ(ಎಂ) ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಛೇರಿ ಎದುರು ಧರಣಿ ನಡೆಸಿ ಜಿಲ್ಲಾಧಿಕಾರಿಗೆ ಮನವಿಪತ್ರ ಸಲ್ಲಿಸಲಾಯ್ತು. ಜನತಾದಳ ಜಾತ್ಯಾತೀತ, ದಲಿತ ಸಂಘರ್ಷ ಸಮಿತಿ, ರಾಜ್ಯ ರೈತ ಸಂಘದ ಸ್ಥಳೀಯ ಮುಖಂಡರು ಕಾರ್ಯಕರ್ತರೂ ಇದರಲ್ಲಿ ಭಾಗವಹಿಸಿದ್ದರು. 50 ಕ್ಕೂ ಹೆಚ್ಚು ಜನ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಿಪಿಐ(ಎಂ) ಮುಖಂಡ ಸಂಗ್ರಾಮಪ್ಪ ಜನತೆಯನ್ನು ಉದ್ದೇಶಿಸಿ ಮಾತನಾಡಿದರು.


ಬೆಂಗಳೂರಿನಲ್ಲಿ

ಕಾಂ. ನಾಯನಾರ್ ಚೇತರಿಕೆ.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರೂ, ಕೇರಳದ ಮಾಜಿ ಮುಖ್ಯಮಂತ್ರಿಗಳಾದ ಕಾಂ। ಇ.ಕೆ. ನಾಯನಾರ್‌ರವರು ಈಗ ಚೇತರಿಸಿಕೊಂಡಿದ್ದಾರೆ. ಹೃದಯಕ್ಕೆ ಸಂಬಂದಿಸಿದ ಹಳೇ ಖಾಯಿಲೆ ಉಲ್ಬಣಗೊಂಡು ಚಿಕಿತ್ಸೆ ಪಡೆಯಲು ನವೆಂಬರ್ 25 ರಂದು ದೆಹಲಿಯ ಎಸ್‌ಕಾರ್ಟ್ ಆಸ್ಪತ್ರೆಗೆ ಕಾಂ। ನಾಯನಾರ್ ದಾಖಲಾಗಿದ್ದರು. ಈಗ ಅವರನ್ನ ತುರ್ತು ನಿಗಾ ಘಟಕದಿಂದ ಸ್ಥಳಾಂತರಿಸಲಾಗಿದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾ। ಸುರ್ಜಿತ್, ಪೊಲಿಟ್ ಬ್ಯೂರೋ ಸದಸ್ಯ ಕಾಂ। ಪ್ರಕಾಶ್ ಕಾರಟ್, ಸಿಪಿಐ ನ ಕಾಂ. ಎ.ಬಿ. ಬರ್ದನ್, ಕಾಂ। ಡಿ. ರಾಜ ಆಸ್ಪತ್ರೆಗೆ ಭೇಟಿ ನೀಡಿ ಕುಶಲ ವಿಚಾರಿಸಿದರು. ಹಿರಿಯ ಕಾಂಗ್ರೆಸ್‌ನಾಯಕ ಕೆ. ಕರುಣಾಕರರವರು ದೂರವಾಣಿ ಮೂಲಕ ಆರೋಗ್ಯದ ಬಗ್ಗೆ ವಿಚಾರಿಸಿದರು.

ವಿಧಾನಸಭಾ ಚುನಾವಣಾ ಫಲಿತಾಂಶಗಳು

ಕಾಂಗ್ರೆಸ್ ಪಾಠ ಕಲಿಯಬಲ್ಲುದೇ?

ಈಚೆಗೆ ನಡೆದ ನಾಲ್ಕು ವಿಧಾನಸಭಾ ಚುನಾವಣೆಗಳಲ್ಲಿ ಮೂರು ರಾಜ್ಯಗಳಲ್ಲಿ ನೆಲಕಚ್ಚಿದ ಕಾಂಗ್ರೆಸ್ ತನ್ನ ಸೋಲಿನ ಕಾರಣಗಳನ್ನೆ ಸರಿಯಾಗಿ ವಿಶ್ಲೇಷಿಸೀತೆ? ಅದರಿಂದ ಪಾಠ ಕಲಿತೀತೇ? ಎಂಬುದು ಗಹನವಾದ ಪ್ರಶ್ನೆ. ಈ ಚುನಾವಣೆಯಲ್ಲಿ ಭಾರಿ ಪರಾಬವ ಅನುಭವಿಸಿದ್ದೇಕೆ, ಎಂಬುದರ ವಸ್ತು ವಿಶ್ಲೇಷಣೆ ಇಲ್ಲಿದೆ.

ದಿಲ್ಲಿ, ಮಿಝೋರಾಂ ಬಿಟ್ಟು ಆಳುವ ಪಕ್ಷ (ಇಲ್ಲಿ ಕಾಂಗ್ರೆಸ್) ಮಧ್ಯಪ್ರದೇಶ, ರಾಜಸ್ತಾನ, ಛತ್ತೀಸ್‌ಗಡದಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಅಧಿಕಾರ ಕಳಕೊಂಡಿದೆ. ಈ ಪ್ರಕ್ರಿಯೆಯಲ್ಲಿ ಬಿಜೆಪಿ ಈ ಮೂರು ರಾಜ್ಯಗಳಲ್ಲಿ ತನ್ನ ಅತ್ಯುತ್ತಮ ವಿಜಯ ದಾಖಲಿಸಿದೆ.

ಅಧಿಕಾರಸ್ಥ ಪಕ್ಷದ ವಿರುದ್ಧದ ಭಾವನೆ ಇಲ್ಲಿ ಬೃಹತ್ ಪ್ರಮಾಣದಲ್ಲಿ ಕೆಲಸ ಮಾಡಿದೆ ಎಂಬುದು ಸ್ಪಷ್ಟ. ದಿಲ್ಲಿ ರಾಜ್ಯ ಸರಕಾರದ ಭಾಗಶಃ ಅಧಿಕಾರಗಳಿದ್ದು ಕಾನೂನು-ವ್ಯವಸ್ಥೆ ಕೂಡಾ ಕೇಂದ್ರ ಸರಕಾರದ ಅಡಿ ಇರುವುದರಿಂದ ಇಲ್ಲಿ ಅಧಿಕಾರಸ್ಥರ ವಿರುದ್ಧದ ಭಾವನೆ ಕಾಂಗ್ರೆಸ್ ಪರವಾಗಿ ಕೆಲಸ ಮಾಡಿದೆ. ಕಾಂಗ್ರೆಸ್ ಜನರ ಸಮಸ್ಯೆಗಳ ಬಗ್ಗೆ ತೋರುವ ನಿರ್ಲಕ್ಷ್ಯ ಮತ್ತು ಜನಪರ ನೀತಿಗಳನ್ನು ಅನುಸರಿಸಲಾಗದ ಅದರ ಅಸಮರ್ಥತೆ ಆ ಪಕ್ಷ ಕೋಮುವಾದಿ ಶಕ್ತಿಗಳಿಗೆ ಒಂದು ನಿಜವಾದ ಮತ್ತು ಸಂಪೂರ್ಣ ಪರ್ಯಾಯ ವಾಗಲಾರದು ಎಂದು ಮಾತ್ತೊಮ್ಮೆ ಸ್ಪಷ್ಟಪಟ್ಟಿದೆ. ಸಿಪಿಐ(ಎಂ) ಈಗಾಗಲೇ ಹಲವು ಬಾರಿ ಹೇಳಿರುವಂತೆ ಕೋಮುವಾದಿ ಶಕ್ತಿಗಳೊಡನೆ ಕೆಲವೊಮ್ಮೆ ಅತ್ಯಂತ ಎದ್ದು ಕಾಣುವಂತೆ ರಾಜಿಮಾಡಿಕೊಳ್ಳುವ ಅದರ ನಿಲುವು ಮತ್ತು ಅದು ಅನುಸರಿಸುವ ಜನ-ವಿರೋಧಿ ಆರ್ಥಿಕ ನೀತಿಗಳು ಕೋಮುವಾದಿ ಶಕ್ತಿಗಳು ಬೆಳೆಯಲು ಅನುಕೂಲವಾದ ಪರಿಸ್ಥಿತಿಗಳನ್ನು, ಅವಕಾಶಗಳನ್ನು ಒದಗಿಸುತ್ತದೆ.

ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ಇದನ್ನೀಗ ಎತ್ತಿತೋರಿವೆ. ಕೋಮುವಾದಿ ಶಕ್ತಿಗಳು ತಮ್ಮ ಈ ವಿಜಯದ ಪ್ರಯೋಜನ ಪಡೆದು ತಮ್ಮ ಅಜೆಂಡಾವನ್ನು ಇನ್ನೂ ಉನ್ಮತ್ತರಾಗಿ ಅನುಸರಿಸುತ್ತಾರೆಂಬುದು ದೇಶದ ಮತ್ತು ಜನತೆಯ ದುರದೃಷ್ಟ.

ಯಾವುದೇ ಜನ-ಪರ ಪರ್ಯಾಯವನ್ನು ಕೊಡಲಾರದ ಕಾಂಗ್ರೆಸ್ ಸೋಲಿಗೆ ಇತರ ಕಾರಣಗಳೂ ಇವೆ. ಕೋಮುವಾದಿ ಶಕ್ತಿಗಳನ್ನು ಕುರಿತಂತೆ ಅದರ ರಾಜಿ ನಿಲುವು ಮಧ್ಯಪ್ರದೇಶದಲ್ಲಿ ಕಣ್ಣಿಗೆ ಕಟ್ಟುವಂತಿತ್ತು. ಇದರಿಂದ ಜನರಿಗೆ ಹಿಂದುತ್ವದ ಪ್ರತಿಪಾದಕರು ಮತ್ತು 'ಮೃದು ಹಿಂದುತ್ವ' ದ ಕಾಂಗ್ರೆಸ್ ನಡುವೆ ಆಯ್ಕೆ ಎಂಬುದೇನಿರಲಿಲ್ಲ.

ಪರ್ಯಾಯ ಆರ್ಥಿಕ ನೀತಿಗಳನ್ನು ಅನುಸರಿಸುವುದಿರಲಿ ಕಾಂಗ್ರೆಸ್ ಸರಕಾರಗಳು, ಅದರಲ್ಲೂ ಮಧ್ಯಪ್ರದೇಶದ ಸರಕಾರ ಕೇಂದ್ರ ಸರಕಾರ ಅನುಸರಿಸುತ್ತಿರುವ ನೀತಿಗಳನ್ನೇ ಅನುಸರಿಸಿತು. ಬಹುರಾಷ್ಟ್ರೀಯ ಕಂಪೆನಿಗಳಿಗೆ ನೀಡಿದ



ಕೃಪೆ: ದಿ ಹಿಂದೂ

ಕಾಂಟ್ರಾಕ್ಟುಗಳು ಫಲನೀಡಲಿಲ್ಲ, ಇದಕ್ಕೆ ಕಾರಣ ಎನ್ರೋನ್‌ಗೊಂದಲ, ಇದರಿಂದಾಗಿ ಮಧ್ಯ ಪ್ರದೇಶದಲ್ಲಿ ತೀವ್ರ ವಿದ್ಯುತ್ ಬಿಕ್ಕಟ್ಟಾಯಿತು ಎಂದು ಹೇಳಿದ್ದರು ಆ ರಾಜ್ಯದ ಆಗಿನ ಕಾಂಗ್ರೆಸ್ ಮುಖ್ಯಮಂತ್ರಿ! ಇಂತಹ ಲಂಗುಲಗಾಮಿಲ್ಲದ ಖಾಸಗೀಕರಣದ ಭರವೇ ರಾಜ್ಯದಲ್ಲಿ ಸಾಕಷ್ಟು ವಿದ್ಯುತ್ ಉತ್ಪಾದನೆ, ವಿತರಣೆಯಾಗದಿರಲು ಕಾರಣ ಎಂಬುದನ್ನು ಅರಿಯುವ ಬದಲು ಕಾಂಗ್ರೆಸ್ ಅದೇ ನೀತಿಗಳನ್ನು ಮುಂದುವರೆಸಿತು. ಛತ್ತೀಸ್‌ಗಡ ಕಳೆದ ಚುನಾವಣೆಗಳಲ್ಲಿ ಮಧ್ಯಪ್ರದೇಶದ ಭಾಗವಾಗಿತ್ತು ಎಂಬುದನ್ನೂ ಗಮನಿಸಬೇಕು. ಆದ್ದರಿಂದ ಕಾಂಗ್ರೆಸ್ - ವಿರೋಧಿ ಅಲೆ ಅಲ್ಲಿಯೂ ಪ್ರತಿಫಲನಗೊಂಡಿತು.

ಕಾರ್ಮಿಕವರ್ಗ ಮತ್ತು ನೌಕರರನ್ನು ಈ ಸರಕಾರಗಳು ನಡೆಸಿಕೊಂಡ ರೀತಿಯಲ್ಲಿ ಅವರಲ್ಲಿ ದೊಡ್ಡ ವಿಭಾಗ ಕಾಂಗ್ರೆಸ್‌ನಿಂದ ದೂರ ಹೋಗುವಂತೆ ಮಾಡಿತು. ಇದು ಚುನಾವಣಾ ಪ್ರಕ್ರಿಯೆಯಲ್ಲಿ ಒಂದು ನಿರ್ಣಾಯಕ ವಿಭಾಗ ಮಧ್ಯಪ್ರದೇಶದಲ್ಲಿ 33 ಸಾವಿರ ತಾತ್ಕಾಲಿಕ ಸರಕಾರಿ ನೌಕರರನ್ನು ಕೆಲಸದಿಂದ ತೆಗೆದುಹಾಕಲಾಯಿತು. ರಾಜಸ್ತಾನದಲ್ಲೂ ರಾಜ್ಯ ಸರಕಾರೀ ನೌಕರರು ಕಾಂಗ್ರೆಸ್‌ಗೆ ಬಹಿರಂಗ ವಿರೋಧ ಘೋಷಿಸಿದರು.

ಈ ಚುನಾವಣೆ ಸಂದರ್ಭದಲ್ಲಿ ಮುಖ್ಯ ವಿಷಯವಾಗಿದ್ದದ್ದು ಅಭಿವೃದ್ಧಿ ಮತ್ತು ಆಡಳಿತ, ಇದರಿಂದ ಬಿಜೆಪಿ ಗೆದ್ದಿತು, ಕೋಮುವಾದ ಈ ಪ್ರಚಾರದಲ್ಲಿ ಕಂಡುಬರಲಿಲ್ಲ ಎನ್ನುವುದು ಸಂಪೂರ್ಣ ತಪ್ಪು. ಪ್ರಧಾನಮಂತ್ರಿಗಳ ನೇತೃತ್ವದ ಮುಖಂಡತ್ವ ಈ ಲೈನನ್ನು ಅನುಸರಿಸುತ್ತಾರೆ. ಆದರೆ ಇದು ಚುನಾವಣೆಯ ಅವಧಿಯಾದ್ಯಂತ ಆರ್.ಎಸ್.ಎಸ್. ಮತ್ತು ವಿಶ್ವ ಹಿಂದೂ ಪರಿಷತ್ ನಡೆಸಿದ ಉನ್ಮತ್ತ ಕೋಮುವಾದಿ ಪ್ರಸಾರವನ್ನು ಮರೆಮಾಡುವ ಒಂದು ಪ್ರಯತ್ನ.

ಈ ಚಟುವಟಿಕೆಗಳನ್ನು ಸುಮಾರಾಗಿ ತಡೆಯಲೇ ಇಲ್ಲ. ರಾಜಸ್ತಾನದಲ್ಲಿ ಮಾತ್ರ ತ್ರಿಶೂಲ ವಿತರಣೆಯನ್ನು ತಡೆಯಲಾಯಿತು. ಅದರ ಮುಖಂಡರನ್ನು ಬಂಧಿಸಲಾಯಿತು. ಗುಜರಾತ್ ಗಡಿ ಬಳಿ ಇರುವ ಪ್ರದೇಶಗಳಲ್ಲಿ ಮುಖ್ಯವಾಗಿಬುಡಕಟ್ಟು ಪ್ರದೇಶಗಳಲ್ಲಿ ಬಿಜೆಪಿ ಗೆದ್ದದ್ದು ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸಿದ್ದರಿಂದ ಮಧ್ಯ ಪ್ರದೇಶ, ಛತ್ತೀಸ್‌ಗಡದಲ್ಲೂ ಆರ್.ಎಸ್.ಎಸ್. ಬುಡಕಟ್ಟು ಪ್ರದೇಶಗಳನ್ನು ಕೋಮುಗ್ರಸ್ತ ಗೊಳಿಸುತ್ತಾ ಬಂದಿದೆ. ಈ ವಿಜಯಗಳೊಂದಿಗೆ ಈ ಶಕ್ತಿಗಳಿಗೆ ತಮ್ಮ ಚಟುವಟಿಕೆಗಳನ್ನು ಇನ್ನೂ ಆಕ್ರಮಿಕ ರೀತಿಯಲ್ಲಿ ಮುಂದುವರೆಸುವ ಧೈರ್ಯ ಬರುತ್ತದೆ.

ರಾಜಸ್ತಾನ ನಂತಹ ಕಡೆ ಕಾಂಗ್ರೆಸನ್ನು ಸಂಪೂರ್ಣವಾಗಿ ನಕಾರಾತ್ಮಕವಾಗಿ ಕಾಣದಿದ್ದರೂ ಅದು ಸೋಲಿತು. ಇದಕ್ಕೆ ಬಿಜೆಪಿ ಜಾತಿ ಆಧಾರದ ಪ್ರಚಾರವನ್ನು 'ದಕ್ಷತೆ' ಯಿಂದ ನಡೆಸಿದ್ದು ಕಾರಣ. ಒಟ್ಟಿನಲ್ಲಿ ಈ ಚುನಾವಣೆಗಳಲ್ಲಿ ಎಲ್ಲಾ ವಿಷಯಗಳಲ್ಲಿ ಕಾರ್ಯತಂತ್ರದಲ್ಲಾಗಲೀ, ಪ್ರಚಾರದಲ್ಲಾಗಲೀ ಮತ್ತು 'ಸಾಮಾಜಿಕ ಇಂಜಿನಿಯರಿಂಗ್ ನಲ್ಲಾಗಲೀ ಬಿಜೆಪಿ ಬಹಳ 'ದಕ್ಷ' ವಾಗಿತ್ತು ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಕಾಂಗ್ರೆಸ್, ಅದಕ್ಕೆ ಸಾಧ್ಯವಿದ್ದರೆ ಈ ಫಲಿತಾಂಶಗಳಿಂದ ಪಾಠ ಕಲಿಯಬೇಕು. ಜನಗಳ ಜೀವನೋಪಾಯವನ್ನು ಜನಕಲ್ಯಾಣವನ್ನು ಕೇಂದ್ರವನ್ನಾಗಿ ಮಾಡಿಕೊಂಡ ಒಂದು ಪರ್ಯಾಯ ಆರ್ಥಿಕ ನೀತಿಯನ್ನು ಮುಂದಿಡದಿದ್ದರೆ ಕಾಂಗ್ರೆಸ್ ಒಂದು ವಿಶ್ವಾಸಾರ್ಹ ಪರ್ಯಾಯವಾಗಿ ಮೂಡಿಬರುವುದು ಸಾಧ್ಯವಿಲ್ಲ. ಅಲ್ಲದೆ ಕೋಮುವಾದ ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟವನ್ನು ಯಾವುದೇ ರಾಜಿಯಿಲ್ಲದೆ ಮಾಡಬೇಕು. ಆದರೆ ದುರದೃಷ್ಟವಶಾತ್, ಹಿಂದಿನ ಅನುಭವಗಳನ್ನು ನೋಡಿದರೆ ಕಾಂಗ್ರೆಸ್ ಇಂತಹ ಪಾಠಗಳನ್ನು ಕಲಿಯಲು ಸಿದ್ಧವಿಲ್ಲ.

ಇದು ಕೋಮುವಾದಿ ಶಕ್ತಿಗಳಿಗೆ ಹೊಸ ಜೀವ ನೀಡುತ್ತದಲ್ಲದೆ ತಮ್ಮ ಅಜೆಂಡಾವನ್ನು ಇನ್ನಷ್ಟು ಆಕ್ರಮಣಕಾರಿಯಾಗಿ ಅನುಸರಿಸುವ ಧೈರ್ಯವನ್ನು ಅದಕ್ಕೆ ನೀಡುತ್ತದೆ. ಇದು ಭಾರತದ ಗಣತಂತ್ರದ ಧರ್ಮನಿರಪೇಕ್ಷ, ಪ್ರಜಾಪ್ರಭುತ್ವ ಸತ್ವವನ್ನು ಗಂಬೀರವಾಗಿ ಬುಡಮೇಲು ಮಾಡುವುದರಿಂದ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಗಂಭೀರ ಅಪಾಯ ಒಡ್ಡುತ್ತದೆ.

ನಾವೀಗ ತಿಳಿದಿರುವ ಗಣತಂತ್ರ, ಧರ್ಮನಿರಪೇಕ್ಷ ಪ್ರಜಾಪ್ರಭುತ್ವವಾದಿ ಅಡಿಗಲ್ಲಿನ ಮೇಲೆನಿಂತಿರುವ ಭಾರತದ ಗಣತಂತ್ರ ಬದುಕುಳಿಯಬೇಕಾದರೆ ಆರ್.ಎಸ್.ಎಸ್. ನೇತೃತ್ವದ ಕೋಮುವಾದಿ ಶಕ್ತಿಗಳ ಈ ಆಟ ಯಶಸ್ವಿಯಾಗಲು ಬಿಡಬಾರದು. ದೇಶಪ್ರೇಮಿಗಳೆಲ್ಲಾ ಈ ಅಪಾಯವನ್ನು ಅರಿಯಬೇಕು, ನಮ್ಮ ಗಣತಂತ್ರವನ್ನು ರಕ್ಷಿಸಬೇಕು.

ದೆಹಲಿ		
ಒಟ್ಟು ಸ್ಥಾನಗಳು 70		
ಕಾಂಗ್ರೆಸ್	-	47
ಬಿಜೆಪಿ	-	20
ಜನತಾದಳ (ಎಸ್)	-	01
ಎನ್.ಸಿ.ಪಿ	-	01
ಪಕ್ಷೇತರ	-	01

ಮಧ್ಯಪ್ರವೇಶ		
ಒಟ್ಟು ಸ್ಥಾನಗಳು - 230		
ಬಿಜೆಪಿ	-	172
ಕಾಂಗ್ರೆಸ್	-	39
ಎಸ್.ಪಿ	-	07
ಬಿಎಸ್‌ಪಿ	-	02
ಎನ್.ಸಿ.ಪಿ	-	01
ಇತರೆ	-	09

ರಾಜಸ್ಥಾನ		
ಒಟ್ಟು ಸ್ಥಾನಗಳು -200		
ಬಿಜೆಪಿ	-	110
ಕಾಂಗ್ರೆಸ್	-	56
ಭಾರತೀಯ ಲೋಕದಳ	-	03
ಬಿಎಸಪಿ	-	02
ಸಿಪಿಐ(ಎಂ)	-	01
ಇತರೆ	-	18


ಛತ್ತಿಸ್‌ಗಡ		
ಒಟ್ಟು ಸ್ಥಾನಗಳು - 90		
ಬಿಜೆಪಿ	-	50
ಕಾಂಗ್ರೆಸ್	-	36
ಎಸ್.ಪಿ	-	02
ಎನ್‌ಸಿಪಿ	-	01
ಇತರೆ	-	01

ಪುಟ 30ರಿಂದ....

ವಹಿಸಬೇಕು ಎಂದಾಗ 'ಸ್ವಲ್ಪ ಕಾಯುತ್ತಿದ್ದೇವೆ, ದೃಢವಾಗಿ ಕ್ರಮವಹಿಸುತ್ತಿದ್ದೇವೆ' ಎಂದರು. ಬಾಬಾಬುಡನ್‌ಗಿರಿಯ ಬೆಳವಣಿಗೆಗಳಿಗೆ ಸ್ಪಂದಿಸಿ 'ಸ್ವಲ್ಪ ಕಾಯಬೇಕು' ಎಂದರು. ಸನ್ನಿವೇಶದ ಬೆಳವಣಿಗೆ ಗಮನಿಸಿ ಕ್ರಮವಹಿಸುವುದಾಗಿ ಭರವಸೆ ನೀಡಿದರು. ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ನಡೆದ ಈ ಚರ್ಚೆ ಸೌಹಾರ್ದಯುತವಾಗಿತ್ತು. ಆಗಲೇ ನಿಯೋಗವು 7-8 ರ ಪ್ರಗತಿಪರ ಸಂಘಟನೆಗಳ ಕಾರ್ಯಕ್ರಮಕ್ಕೆ ಅವಕಾಶ ನೀಡಬೇಕೆಂದು ಕೇಳಿದಾಗ ಪರಿಗಣಿಸುವುದಾಗಿ ಹೇಳಿದ್ದರು.

ಇಂದು (ಸಂಚಿಕೆ ಮುದ್ರಣಕ್ಕೆ ಹೋಗುತ್ತಿರುವಾಗ) ಡಿಸೆಂಬರ್ 6, ಹಾಸನದಲ್ಲಿ ಡಿ.ವೈ.ಎಫ್.ಐ, ಎಸ್.ಎಫ್.ಐ ರಾಜ್ಯ ರೈತಸಂಘ, ಸಿಪಿಐ(ಎಂ), ದಲಿತಸಂಘರ್ಷ ಸಮಿತಿ ಅಲ್ಲದೇ ಜ.ಹೋ.ನಾ, ಬಾನುಮುಷ್ತಾಕ್, ಮುಂತಾದವರಿದ್ದ ಪ್ರಗತಿಪರರ 'ಸೌಹಾರ್ದತಾ ಸಭೆ' ಮುಗಿಸಿ ಚಿಕ್ಕಮಗಳೂರಿಗೆ ಸೌಹರ್ದತೆಯೆಡೆಗೆ ನಮ್ಮ ನಡಿಗೆ ಆರಂಭಿಸುತ್ತಿದ್ದಂತೆ ಪೊಲೀಸರು ಎಲ್ಲರನ್ನು ಬಂಧಿಸಿದ್ದಾರೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಡಿ.ವೈ.ಎಫ್.ಐ ಕಾರ್ಯದರ್ಶಿ ಮಹಾಂತೇಶ್, ಭಾನು, ಜ.ಹೋ.ನಾ, ಧರ್ವೇಶ್, ರೈತಸಂಘದ ಕೊಟ್ಟೂರು ಶ್ರೀನಿವಾಸ ಮುಂತಾದ 100 ಜನರನ್ನು ಬಂಧಿಸಿದ್ದಾರೆ. ಶಿವಮೊಗ್ಗದಲ್ಲಿ ಡಾ.ರಾಜೇಂದ್ರ ಚೆನ್ನಿ ಮತ್ತು ಇತರರು, ಚಿಕ್ಕಮಗಳೂರಿನಲ್ಲಿ ಹೀಗೆ ಬಂಧನಸತ್ರ ಆರಂಭವಾಗಿದೆ. ಇದಕ್ಕೆ ಮೊದಲ ಹಾಸನದಲ್ಲಿ ಒಂದೆಡೆ ಬಜರಗದಳದ ಪುಂಡರ ತಂಡ ಡಿ.ವೈ.ಎಫ್.ಐ ಇರುವ ಕಾಲೋನಿಗಳಿಗೆ ತೆರಳಿ ಪಾದಯಾತ್ರೆಗೆ ಹೋಗಬಾರದೆಂದು ಜನರಿಗೆ ಹೇಳುತ್ತಾ, ಡಿ.ವೈ.ಎಫ್.ಐ.ನ ಕಾರ್ಯಕರ್ತರಿಗೆ ಬೆದರಿಕೆ ಹಾಕಿದ್ದಾರೆ. ಇನ್ನೊಂದೆಡೆ ಸರ್ಕಾರದ ಆಡಳಿತಗಾರರಾದ ಪೊಲೀಸರು, ಸ್ವತಃ ಎಸ್.ಪಿ.ಯವರೆ ಸಂಘಟಕರ ಮೇಲೆ ವಿಪರೀತ ಒತ್ತಡ, ಬಂಧನದ ಬೆದರಿಕೆ ಹಾಕಿದ್ದಾರೆ.

ಚಿಕ್ಕಮಗಳೂರಿನತ್ತ ಮುಖಮಾಡಿ ನಡೆಯಲು ಬಿಡಬಾರದು ಎಂಬುದು ಸರ್ಕಾರದ ಆದೇಶ ಎಂದು ವಿಧಾನಸೌಧದತ್ತ ತೋರಿಸಿದ್ದಾರೆ. ಮೊನ್ನೆ ಚಿಕ್ಕಮಗಳೂರಿನಲ್ಲಿ 'ಸೌಹಾರ್ದತಾ ಸಮಾವೇಶ'ದ ಬ್ಯಾನರ್ ಕಟ್ಟುತ್ತಿದ್ದ ಎ.ಐ.ಯು.ಎಫ್.ನ ಕಾರ್ಯಕರ್ತರ ಮೇಲೆ ಬಜರಂಗದಳದವರು ಹಲ್ಲೆ ಮಾಡಿದ್ದಾರೆ. ಅದರ ರಾಜ್ಯ ಅಧ್ಯಕ್ಷ ಸಾಲೆಸುಂದರೇಶ್‌ನೊಂದಿಗೆ ಕಾಲುಕೆದರಿ ಜಗಳ ತೆಗೆದು 'ತಮ್ಮನ್ನು ಕೊಲ್ಲಲು ಬಂದಿದ್ದಾರೆ' ಎಂದು ಕ್ರಿಮಿನಲ್ ದೂರು ಕೊಟ್ಟಿದ್ದಾರೆ. ಇದರ ಹಿಂದೆ-ಮುಂದೆ ಸತ್ರ ಪರಿಶೀಲಿಸದ ಪೊಲೀಸರು ಕ್ರಿಮಿನಲ್ ಕೇಸ್ ಹಾಕಿ ಪ್ರಥಮ ಮಾಹಿತಿ ವರದಿ ಹರಡಿದ್ದಾರೆ. ಚಿಕ್ಕಮಗಳೂರಿನ ಸೌಹಾರ್ದತಾ ಸಮಾವೇಶವನ್ನು ನಿಷೇಧಿಸಿ ಡಿ.ಸಿ.ಸಾಹೇಬರು -ಫರ್ಮಾನು ಹೊರಡಿಸಿದ್ದಾರೆ. ಇವರು ಹೇಳುವುದು 'ಸರ್ಕಾರದ ಆಜ್ಞೆ' ಆದ್ದರಿಂದ ಪ್ರಗತಿಪರರು ಕಾರ್ಯಕ್ರಮ ರದ್ದುಗೊಳಿಸಿ' ಎಂದು ಉಪದೇಶ ಬೇರೆ ಆದರೆ.... ಕಾನೂನುಬಾಹಿರವಾದ, ನಾಡಿನ ಸಂಸತಿ-ಪರಂಪರೆಗೆ ಮಸಿಬಳೆಯುವ ವಿನಾಶಕಾರಿ ದತ್ತಜಯಂತಿ ಆಚರಣೆ, ಶೋಭಾಯಾತ್ರೆಯೆಂಬ ರಾಜಕೀಯ ಸಭೆಗೆ ಮುಕ್ತವಾದ ಪರವಾನಗಿಯನ್ನು ಖಾವೀ ಪಡೆಗಳಿಗೆ ನೀಡಿದ್ದಾರೆ. ಈ ಪರವಾನಗಿ ಹಿಡಿದ ಕಿರಾತಕರು ಬಾಯಿಬಂದಂತೆ ಪ್ರಗತಿಪರರನ್ನು, ಅಲ್ಪಸಂಖ್ಯಾತರನ್ನು ಬೈಯ್ದಾಡುತ್ತಾ ಕೇಕೆ ಹಾಕುತ್ತಿದ್ದಾರೆ. ಬೆದರಿಕೆ ಒಡ್ಡುತ್ತಿದ್ದಾರೆ. ಇದಕ್ಕೆ ಕೃಷ್ಣರ ಸರ್ಕಾರದ ಆಡಳಿತಗಾರರ ವ್ಯಾಖ್ಯಾನವೇನೆಂದರೆ ಅವರದ್ದು ಧಾರ್ಮಿಕ ಸಭೆ. ನಿಮ್ಮದು ರಾಜಕೀಯ ಸಭೆ ಹೇಗಿದೆ ಕೃಷ್ಣರ-ಕಾಂಗ್ರೆಸ್‌ನ ಮೃದುಹಿಂದುತ್ವ" ಕೋಮುವಾದಿಗಳೊಂದಿಗೆ ಕೈಕಲೆಸುವ ಇರಾದೆ. ಅವರನ್ನು ಮಟ್ಟಹಾಕುವ, ಗುಜರಾತ್‌ಗೆ ಆಶ್ರಯಕ್ಕಾಗಿ ಬಿಡುವಂತೆ ಮಾಡುವ ಕೃಷ್ಣರವರು - ತಾವೇ ಇಲ್ಲಿಂದಲೇ ಪೇರಿ ಕಿತ್ತದಿದ್ದರೆ ಸಾಕು ಎಂಬಂತೆ ಅನಿಸುತ್ತದೆ ಎಂತಹ ವಿಪರ್ಯಾಸ? ಇಷ್ಟಾದರೂ ಡಿಸೆಂಬರ್ 7-8 ರಂದಿನ ಕಾರ್ಯಕ್ರಮ ಎಂದಿನಂತೆ ನಡೆಸಲು ಪ್ರಗತಿಪರರು ನಿರ್ಧರಿಸಿದ್ದಾರೆ. ಬಂಧಿಸಲಿ ಜೇಲಿಗೆ ತಳ್ಳಲಿ .... ಸೌಹಾರ್ದತೆ ಯಾತ್ರೆ ಗೆಲ್ಲುವುದಿಲ್ಲ ಜೈಲಿನೊಳಗೂ....



"ಕರ್ನಾಟಕದಲ್ಲಿ ಇಂದೂ ಕೂಡಾ ನಕ್ಸಲ್‌ವಾದ ಎಂಬ ಬಾಲಗ್ರಹ ಪೀಡೆ ಪ್ರಗತಿಪರ ಚಳುವಳಿಯನ್ನು ಕಾಡುತ್ತಿದೆ. ಜನಸಮುದಾಯವನ್ನು-ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಯುವಕರನ್ನು- ವ್ಯಾಪಕವಾಗಿ ಸಂಘಟಿಸಿ, ಕ್ರಾಂತಿಯ ಹಾದಿಯಲ್ಲಿ ಕ್ರಿಯಾಶೀಲವಾಗಿಸುವ ನಿರಂತರ ತಾಳ್ಮೆಯ ಪ್ರಯತ್ನಗಳಿಗೆ ಬದಲಾಗಿ ಕೆಲ ನಿಮಿಷಗಳ ಕಾಲ ವಿಜೃಂಭಿಸಿ ಕಣ್ಣು ಕೋರೈಸಿ ತಣ್ಣಗಾಗುವ, ಸುರ್ ಸುರ್ ಕ್ರಾಂತಿಗೆ ಯುವಕರನ್ನು, ವಿದ್ಯಾರ್ಥಿಗಳನ್ನು ಬಲಿಯಾಗಿಸುತ್ತಿದೆ ನಕ್ಸಲ್‌ವಾದ.

ಇಂತಹ ನಕ್ಸಲ್‌ವಾದದ ಮತ್ತು ಅದರ ಪ್ರಾಯೋಗಿಕ ಅನುಭವಗಳ ಕುರಿತು ವಿಶ್ಲೇಷಿಸಿದ್ದಾರೆ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿಯವರು, ಲೇಖನ ಮಾಲೆಯ ಮೊದಲ ಕಂತಿನ ಆರಂಭವಿಲ್ಲಿ...

ಜಿ.ಎನ್.ನಾಗರಾಜ್

ನಕ್ಸಲ್‌ವಾದ ಮತ್ತು ಎನ್‌ಕೌಂಟರ್ ಹತ್ಯೆಗಳು

ಕಾರ್ಕಳ ತಾಲ್ಲೂಕಿನ ಈದು ಗ್ರಾಮದ ಬೆಳ್ಳೊಟ್ಟು ರಾಮಪ್ಪ ಪೂಜಾರಿಯವರ ಮನೆಯ ಪಾರ್ವತಿ ಮತ್ತು ಹಾಜಿಮಾ ಎಂಬ ಯುವತಿಯರನ್ನು ಪೋಲಿಸರು ಬರ್ಬರವಾಗಿ ಹತ್ಯೆ ಮಾಡಿದ ಘಟನೆ ಸರ್ಕಾರಿ ಕ್ರೌರ್ಯ, ದಮನಕಾರಿ ಕ್ರಮಗಳ ಬಗ್ಗೆ ವಿರೋಧವನ್ನು ಒಂದು ನಕ್ಸಲೀಯ ಸಿದ್ಧಾಂತಗಳ ಹಾಗೂ ಚಳುವಳಿಯ ಪ್ರಸ್ತುತತೆ ಮತ್ತು ಆಕರ್ಷಣೆಯ ಬಗ್ಗೆ ಚರ್ಚೆಯನ್ನು ಮತ್ತೊಂದು ಕಡೆ ಹುಟ್ಟುಹಾಕಿದೆ.

ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಈ ಹತ್ಯೆಗಳನ್ನು ಖಂಡಿಸಿ ಪತ್ರಿಕಾಹೇಳಿಕೆ, ಪತ್ರಿಕಾಗೋಷ್ಠಿಗಳ ಮೂಲಕ ತನ್ನ ಸ್ಪಷ್ಟ ನಿಲುವನ್ನು ಕರ್ನಾಟಕ ಜನರ ಮುಂದಿರಿಸಿದೆ. ನಕ್ಸಲೀಯವಾದವನ್ನು ಸಿಪಿಐ(ಎಂ) ಸರ್ವಥಾ ಒಪ್ಪುವುದಿಲ್ಲ. ಅದನ್ನೊಂದು ಕ್ರಾಂತಿಕಾರಿ ಚಳುವಳಿಯೆಂದೂ ಪರಿಗಣಿಸುವುದಿಲ್ಲ. ಆದರೆ ಅದೇ ಸಮಯದಲ್ಲಿ ನಕ್ಸಲೀಯರನ್ನು ಎನ್‌ಕೌಂಟರ್‌ಗಳ ಮೂಲಕ ದಮನಿಸುವ ಸರ್ಕಾರದ ಬರ್ಬರ ಕ್ರಮಗಳನ್ನು ದೃಢವಾಗಿ ವಿರೋಧಿಸುತ್ತದೆ. ಯಾರನ್ನೂ ಕೇವಲ ಅವರ ನಂಬಿಕೆ, ಸಿದ್ಧಾಂತಗಳಿಗಾಗಿ ಹತ್ಯೆ ಮಾಡುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮ. ಎಲ್ಲ ಪ್ರಜಾಪ್ರಭುತ್ವ ಪ್ರಿಯರೂ ಇಂತಹ ಕ್ರಮಗಳನ್ನು ಪ್ರತಿಭಟಿಸಬೇಕು. ಯಾರೇ ಆಗಲಿ ಅಪರಾಧವೆಸಗಿದ್ದರೆ ಕಾನೂನುಬದ್ಧ ಮಾರ್ಗದಲ್ಲಿ ಮಾತ್ರವೇ ಅವರಿಗೆ ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು ನೀಡಬಹುದು. ಈ Rule of Law ಎನ್ನುವ ಮಾರ್ಗವನ್ನು ಕಾನೂನುಪಾಲಕರು ಉಲ್ಲಂಘಿಸಿದರೆ ಜನರಲ್ಲಿ ಅದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಬೇಕು. ಸಂಬಂಧಿಸಿದ ಪೋಲೀಸ್ ಅಧಿಕಾರಗಳನ್ನು ಕೂಡಲೇ ಅಮಾನತ್ತುಗೊಳಿಸಬೇಕು ಮತ್ತು ಉನ್ನತ ಮಟ್ಟದ ತನಿಖೆಗೊಳಪಡಿಸಿ ಶಿಕ್ಷೆಗೊಳಪಡಿಸಬೇಕು.


ಹಾದಿ ತಪ್ಪಿದ ತಪ್ಪಿಸುತ್ತಿರುವ ನಕ್ಸಲೀಯರು

ದೇಶದ ಅನೇಕ ಕಡೆ - ಆಂಧ್ರ, ಬಂಗಾಲ, ಬಿಹಾರ ಮೊದಲಾದೆಡೆಗಳಲ್ಲಿ - ಸಿಪಿಐ(ಎಂ) ಪಕ್ಷವನ್ನೇ ನೇರ ಗುರಿಯಾಗಿಟ್ಟು ನಕ್ಸಲಿಯರು ಹತ್ಯೆ ಮತ್ತಿತರ ಕ್ರಮಗಳಿಗೆ ತೊಡಗಿದ್ದಾಗಲೂ ಕೂಡ ಸಿಪಿಐ(ಎಂ) ಈ ನಿಲುವನ್ನು ಪ್ರತಿಪಾದಿಸಿದೆ. ಜ್ಯೋತಿಬಸುರವರು ಪ.ಬಂಗಾಳದಲ್ಲಿ ನಕ್ಸಲೀಯ ಚಳುವಳಿ ಉತ್ತುಂಗದಲ್ಲಿದ್ದ 60 ರ ದಶಕದ ಕೊನೆಯ ಭಾಗ ಹಾಗೂ 70 ರ ದಶಕದ ಆರಂಭ ಭಾಗದ ಬಗ್ಗೆ ಈ ರೀತಿ ಹೇಳುತ್ತಾರೆ "1967-1969 ಹಾಗೂ 70 ರ ಎರಡೂ ಸಂಯುಕ್ತ ರಂಗ ಸರ್ಕಾರಗಳ ಅವಧಿಯಲ್ಲಿ ನಮ್ಮ ಚಳುವಳಿಗೆ ನಕ್ಸಲೀಯರ ಆಲೋಚನೆ ಮತ್ತು ಚಟುವಟಿಕೆಗಳು ಅಪಾರ ಹಾನಿಯನ್ನುಂಟು ಮಾಡಿತು. ಆ ದಿನಗಳಲ್ಲಿ ಬಲ ಪಂಥೀಯ ಪಕ್ಷಗಳಿಂದ ನಮಗೆ ಬೆದರಿಕೆ ಇರಲಿಲ್ಲ. ಆದರೆ ನಮಗಿಂತಲೂ ಉತ್ತಮವಾದ ಎಡಪಂಥೀಯರು ಮತ್ತು ಹೆಚ್ಚು ಕ್ರಾಂತಿಕಾರಿಗಳು ಎಂದು ತೋರಿಸಿಕೊಳ್ಳುವ ಮೂಲಕ ಯುವಜನ ಮತ್ತು ವಿದ್ಯಾರ್ಥಿ ಗಳ ಒಂದು ವಿಭಾಗವನ್ನು ದಾರಿ ತಪ್ಪಿಸಲು ಮತ್ತು ಈ ವಿಭಾಗದಲ್ಲಿ ಗೊಂದಲ ಹುಟ್ಟಿಸಲು ನಕ್ಸಲೀಯರಿಗೆ ಸಾಧ್ಯವಾಯಿತು. 1970 ರ ಏಪ್ರಿಲ್ ಬಳಿಕ ಒಂದು ವರ್ಷದ ಅವಧಿಯಲ್ಲಿ ಕಲ್ಕತ್ತ ಮತ್ತು ರಾಜ್ಯದ ಇನ್ನಿತರ ಔದ್ಯಮಿಕ ಕ್ಷೇತ್ರಗಳಲ್ಲಿ ಅವರ ಹತ್ಯಕಾರಿ ದಾಳಿಯ ಮುಖ್ಯ ಗುರಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕಾರ್ಯಕರ್ತರಾಗಿದ್ದರು. 1971 ರ ಚುನಾವಣೆಗಳಲ್ಲಿ ಅವರು 'ವಿಮುಕ್ತ ಪ್ರದೇಶ' ಎಂದು ಹೇಳಲಾದ ಸ್ಥಳಗಳಿಗೆ ನಮ್ಮ ಪಕ್ಷದ ಕಾರ್ಯಕರ್ತರು ಪ್ರವೇಶಿಸುವಂತಿರಲಿಲ್ಲ. ಆದರೆ ಕಾಂಗ್ರೆಸ್ ಸಹಿತ ಇನ್ನಿತರ ಪಕ್ಷಗಳಿಗೆ ಈ ಪ್ರದೇಶದಲ್ಲಿ ಪ್ರಚಾರ ನಡೆಸಲು ಮುಕ್ತ ಅವಕಾಶವಿದ್ದಿತು. ಆದರೆ ನಮ್ಮ ಪಕ್ಷ ನಕ್ಸಲೀಯರ ವಿರುದ್ಧ ಸೈದ್ಧಾಂತಿಕ ಹೋರಾಟದಲ್ಲಿ ಜಯಗಳಿಸಿತು ಎನ್ನುವುದು ಗಮನಾರ್ಹ. ಆದ್ದರಿಂದ ನಮ್ಮ ಪಕ್ಷದ ಕೆಲವೇ ಸದಸ್ಯರು ನಮ್ಮನ್ನು ತೊರೆದು ಅವರೊಡನೆ ಸೇರಿದರು. ಅಲ್ಲದೆ ಅವರ ಬರ್ಬರ ಆಕ್ರಮಣಗಳನ್ನು ನಮ್ಮ ಪಕ್ಷದ ಕಾರ್ಯಕರ್ತರು ಬಹಳ ಧೈರ್ಯದಿಂದ ಎದುರಿಸಿದರು. 1971 ರ ಮಧ್ಯಭಾಗದಲ್ಲಿ ಕಾಂಗ್ರೆಸ್‌ಗೆ ಪಕ್ಷಾಂತರ ಮಾಡದಿದ್ದ ನಕ್ಸಲೀಯರ ಒಂದು ವಿಭಾಗವನ್ನು ಬರಂಗೂರು ಮತ್ತು ಇನ್ನಿತರ ಪ್ರದೇಶಗಳಲ್ಲಿ ಪೋಲೀಸ್ ಮತ್ತು ಕಾಂಗ್ರೆಸ್ ಗೂಂಡಾಗಳು ನಿರ್ದಿಷ್ಟ ಕ್ರಮಗಳ ಮೂಲಕ ಕೊಲೆಗೈದರು. ನಕ್ಸಲೀಯರು ನಮಗೆ ವಿರೋಧಿಗಳಾಗಿದ್ದರೂ ಕೂಡ ನಾವು ಈ ಪೈಶಾಚಿಕ ಕ್ರಮಗಳನ್ನು ಉಗ್ರವಾಗಿ ವಿರೋಧಿಸಿದೆವು.

1969 ಮತ್ತು 1977 ರಲ್ಲಿ ಸರ್ಕಾರಗಳನ್ನು ರಚಿಸಿದಾಗ ನಾವು ಬೇಷರತ್ತಾಗಿ ನಕ್ಸಲೀಯ ಖೈದಿಗಳನ್ನು ಬಿಡುಗಡೆ ಮಾಡಿದೆವು. ಸರಿಯಾದ ಕ್ರಮಗಳನ್ನು ಕೈಗೊಳ್ಳುವಲ್ಲಿ ನಮ್ಮ ಹಳೆಯ ವಿರೋಧ ಅಡ್ಡ ಬರಲಿಲ್ಲ".

ಹೀಗೆ ನಕ್ಸಲೀಯರ ವಿರುದ್ಧ ಪ್ರಭುತ್ವ ಎಸಗುವ ಬರ್ಬರ ಹಿಂಸೆಯನ್ನು ಖಂಡಿಸುವಾಗಲೇ ನಕ್ಸಲೀಯರ ಬರ್ಬರ ಕ್ರಮಗಳು, ಹತ್ಯೆಗಳ ಬಗ್ಗೆಯೂ ಸಿಪಿಐ(ಎಂ) ದೃಢವಾದ ವಿರೋಧವನ್ನು ವ್ಯಕ್ತಪಡಿಸುತ್ತದೆ. ನಕ್ಸಲೀಯ ಸಿದ್ಧಾಂತದ ಎಳೆಎಳೆಗಳನ್ನೂ ಬಿಡಿಸಿ ಅವುಗಳ ಅಪಾಯವನ್ನು ಜನರ ಮುಂದಿಟ್ಟು ಸೈದ್ಧಾಂತಿಕ ಹೋರಾಟ ನಡೆಸುತ್ತದೆ. ತಾಳ್ಮೆಯಿಂದ ಹಾಗೂ ಎಡಬಿಡದೆ ನಡೆಸುವ ಈ ಕ್ರಿಯೆಯೇ ಭಾರತದಲ್ಲಿ ನಕ್ಸಲ್‌ವಾದದ ಆಕರ್ಷಣೆಗೊಳಗಾಗಿ ದಾರಿ ತಪ್ಪುವ ಯುವ ಜನರ ಪ್ರಮಾಣವನ್ನು ಕುಂದಿಸಿದೆ ಮತ್ತು ಆ ಮೂಲಕ ನಕ್ಸಲೀಯ ಚಳುವಳಿಯ ಬಲವನ್ನು ಕುಂದಿಸಿದೆ. ಈ ಕಾರಣಕ್ಕಾಗಿ ಸಿಪಿಐ(ಎಂ) ನಕ್ಸಲೀಯರ ಕೋಪತಾಪಗಳಿಗೆ ತುತ್ತಾಗಿದೆ.

ಕೊಡಗು ಜಿಲ್ಲೆಯ ಖ್ಯಾತ ವಕೀಲರಾದ ಕಾಂ. ಐ.ಆರ್. ಪ್ರಮೋದ್‌ರವರ ಕಿರುಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ನಾನು 1988ರಲ್ಲಿಯೇ ಹೀಗೆ ವ್ಯಾಖ್ಯಾನಿಸಿದ್ದೇನೆ -



ಕದನದಲ್ಲಿ ಹತ್ಯೆಗೀಡಾದವರು

"ಕರ್ನಾಟಕದಲ್ಲಿ ಇಂದೂ ಕೂಡಾ ನಕ್ಸಲ್‌ವಾದ ಎಂಬ ಬಾಲಗ್ರಹ ಪೀಡೆ ಪ್ರಗತಿಪರ ಚಳುವಳಿಯನ್ನು ಕಾಡುತ್ತಿದೆ. ಜನಸಮುದಾಯವನ್ನು-ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಯುವಕರನ್ನು- ವ್ಯಾಪಕವಾಗಿ ಸಂಘಟಿಸಿ, ಕ್ರಾಂತಿಯ ಹಾದಿಯಲ್ಲಿ ಕ್ರಿಯಾಶೀಲವಾಗಿಸುವ ನಿರಂತರ ತಾಳ್ಮೆಯ ಪ್ರಯತ್ನಗಳಿಗೆ ಬದಲಾಗಿ ಕೆಲ ನಿಮಿಷಗಳ ಕಾಲ ವಿಜೃಂಭಿಸಿ ಕಣ್ಣು ಕೋರೈಸಿ ತಣ್ಣಗಾಗುವ, ಸುರ್ ಸುರ್ ಕ್ರಾಂತಿಗೆ ಯುವಕರನ್ನು, ವಿದ್ಯಾರ್ಥಿಗಳನ್ನು ಬಲಿಯಾಗಿಸುತ್ತಿದೆ ನಕ್ಸಲ್‌ವಾದ.

ಇದರಿಂದ ಜನರಲ್ಲಿ ನಿಧಾನವಾಗಿಯಾದರೂ ಜಾಗೃತರಾಗುತ್ತಿರುವ ಪ್ರಜ್ಞೆಯನ್ನು ಮರುಳುಗೊಳಿಸಿ ಶೀತಲವಾಗಿಸುತ್ತದೆ. ತಮ್ಮ ಪರವಾಗಿ ಪ್ರಾಣವನ್ನು ಪಣವಾಗಿ ಒಡ್ಡಿ ಬಡಿದಾಡುವ ಕೆಲ ಯುವಕರಿರುವಾಗ ತಾವೇನೂ ಮಾಡಬೇಕಾದ್ದಿಲ್ಲ ಎಂಬ ನಿಷ್ಕ್ರಿಯತೆಯತ್ತ ದೂಡುತ್ತದೆ. 'ಕ್ರಾಂತಿ' ಯೆಂಬ ರಂಗಭೂಮಿಯ ಮೂಕಪ್ರೇಕ್ಷಕರನ್ನಾಗಿ ಸುತ್ತದೆ. ಇದನ್ನೇ ತಾನೇ ಭಾರತದ ಆಳುವ ವರ್ಗಗಳೂ ಹಗಲಿರುಳೂ ಮಾಡುತ್ತಿರುವುದು, ಬಯಸುತ್ತಿರುವುದು. 'ನಿಮಗಾಗಿಯೇ ನಾವು, ನೀವು ಸುಮ್ಮನಿರಿ, ನಾವು ಎಲ್ಲವನ್ನೂ ಮಾಡುತ್ತೇವೆ' ಎಂಬ ಖಾದಿದಾರಿ ಪುಡಾರಿಗಳ ರಾಜಕಾರಣದ ಇನ್ನೊಂದು ಮುಖವಾಗುತ್ತದೆ ನಕ್ಸಲ್‌ವಾದ.

ಕರ್ನಾಟಕದ ವಿವಿಧ ವಿಶ್ವವಿದ್ಯಾನಿಲಯ ಕೇಂದ್ರಗಳಲ್ಲಿ ವಿವಿಧ ಸಂಘಟನೆಗಳ ಹೆಸರಿನಲ್ಲಿ ಈ ಗುಂಪುಗಳು ಕಾರ್ಯವೆಸಗುತ್ತಿವೆ. ವಿಶ್ವವಿದ್ಯಾಲಯ ಕೇಂದ್ರಗಳನ್ನು ಹೊರತುಪಡಿಸಿದರೆ ಕೋಲಾರ, ಬಳ್ಳಾರಿ ಜಿಲ್ಲೆಗಳಲ್ಲಿ ಈ ವಾದದ ಪ್ರಭಾವವನ್ನು ಸ್ವಲ್ಪ ಮಟ್ಟಿಗೆ ಕಾಣಬಹುದು.

ಈತ್ತೀಚೆಗೆ ಪರಿಸರವಾದಿಗಳಾಗಿ, ಅಭಿವೃದ್ಧಿ ಯೋಜನೆಗಳೆಲ್ಲದರ ವಿರೋಧಿಗಳಾಗಿ ಪ್ರವೃತ್ತಿಸುತ್ತಾ ವಿಷವಿದ ಪುಂಜಗಳನ್ನು ಪುಂಖಿಪ... ಸುರಿಸುತ್ತಾ ಜನ ವಿರೋಧಿ, ಜೀವವಿರೋಧಿ ಕ್ರಿಯೆಯಲ್ಲಿ ತೊಡಗಿರುವ ಯುವಕರ ಗುಂಪುಗಳಿಗೆ ಮತ್ತಷ್ಟು ಜನರ ಸೇರ್ಪಡೆಯಾಗದಿರಬೇಕಾದರೆ ನಕ್ಸಲ್‌ವಾದದ ಬೇರುಗಳನ್ನು ಮನಗಾಣಿಸಿಕೊಳ್ಳಬೇಕಾಗಿದೆ. ಈ ಕಾರ್ಯದಲ್ಲಿ ಈ ಪುಸ್ತಕ ಸಹಾಯಕ್ಕೆ ಒದಗಲಿ ಎಂದು ಆಶಿಸಬಹುದು"

ಹಾನಿಕಾರಕ ಪರಿಣಾಮ.

ಈ ಮೇಲಿನ ವಿಶ್ಲೇಷಣೆಯಲ್ಲಿ ನಕ್ಸಲೀಯ ಚಳುವಳಿಯ ಎರಡು ಹಾನಿಕಾರಕ ಪರಿಣಾಮಗಳ ಉಲ್ಲೇಖವಿದೆ.

ಒಂದನೆಯದಾಗಿ ಜನಸಮುದಾಯವನ್ನು ವ್ಯಾಪಕವಾಗಿ ಸಂಘಟಿಸುವ, ಇಡಿಯಾಗಿ ಕ್ರಿಯಾಶೀಲವಾಗಿಸುವ ತಾಳ್ಮೆಯ ಹಾಗೂ ನಿರಂತರ ಪ್ರಯತ್ನಗಳಿಂದ ಯುವ ಜನರನ್ನು ವಿಮುಖರಾಗಿಸುವುದು ಮತ್ತು ಇಂದಿನ ಶೋಷಕ ವ್ಯವಸ್ಥೆಯ ವಿರುದ್ಧ ಯುವಜನ ವಿದ್ಯಾರ್ಥಿಗಳ ಆಕ್ರೋಶವನ್ನು ದುರುಪಯೋಗಪಡಿಸಿಕೊಳ್ಳುವುದು.

ಎರಡನೆಯದಾಗಿ ಕೆಲವೇ ಜನ ಕ್ರಿಯಾಶೀಲವಾಗಿ ಜನಸಮುದಾಯವನ್ನು ನಿಷ್ಕ್ರಿಯ ಪ್ರೇಕ್ಷಕರನ್ನಾಗಿಸುವುದು.

ನಕ್ಸಲೀಯ ಚಳುವಳಿಯ ಈ ಹಾನಿಕರ ಪರಿಣಾಮ ಭಾರತದ ಕ್ರಾಂತಿಕಾರಿ ಪರಿವರ್ತನೆಯ ಹಾದಿಯಲ್ಲಿ ಒಂದು ಪ್ರಮುಖ ತೊಡಕಾಗಿದೆ. ಆಳುವ ವರ್ಗಗಳು ಜನರ ಮೇಲೆರಗುವುದಕ್ಕೆ ಕಾರಣವೊದಗಿಸಿದೆ ಮತ್ತು ವ್ಯವಸ್ಥೆಯ ಉಳಿವಿಗೆ ನೆರವಾಗಿದೆ.

(ಸಶೇಷ)

- ಮುಂದಿನ ವಾರಕ್ಕೆ

ಪಶ್ಚಿಮ ಘಟ್ಟಗಳಲ್ಲಿ ಒಕ್ಕಲೆಬ್ಬಿಸುತ್ತಿದ್ದ ಜನರನ್ನು ಸಂಘಟಿಸುತ್ತಿದ್ದ ಶಂಕಿತ ನಕ್ಸಲೀಯ ಕಾರ್ಯಕರ್ತರನ್ನು ಗುಂಡಿಕ್ಕಿದ ಸರ್ಕಾರ, ಈಗ ಜನರಿಗೆ 60 ಕೋಟಿಯ ಪರಿಹಾರ ವಿತರಿಸುವ ಮಾತನ್ನಾಡುತ್ತಿದೆ. ಅಲ್ಲಿನ ಪ್ರಮುಖ ಪ್ರಶ್ನೆಯೆಂದರೆ ಬುಡಕಟ್ಟು -ಆದಿವಾಸಿಗ ಶತಮಾನದ ಬದುಕುವ ಹಕ್ಕಿಗೆ ಸಂಚಕಾರ ಬಂದಿರುವುದು. ಈ ಜನರ ಹಕ್ಕು ದಮನಿಸಲು ಸರ್ಕಾರ ಒಂದಡೆ ಪ್ರಯತ್ನಿಸುತ್ತಿದ್ದಾರೆ, ಆ ಹಕ್ಕು ಕಳೆಯಲು ಕೆಲವು ಸಂಘಟನೆಗಳು ನಿರತವಾಗಿವೆ. ಅಂತಹವರ ಕಪಟ ನಾಟಕ ಬಿಡಿಸಿಟ್ಟು ಬುಡಕಟ್ಟು ಜನರ ಹಕ್ಕು ರಕ್ಷಣೆಯ ಅನಿವಾರ್ಯತೆ, ಸಮಸ್ಯೆಯ ವಿವಿಧ ಮಗ್ಗಲುಗಳನ್ನು ಇಲ್ಲಿ ಲೇಖಕರು ವಿವರಿಸಿದ್ದಾರೆ.

ನಕ್ಸಲ್ ನೆಪದಲ್ಲಿ ಒಕ್ಕಲೆಬ್ಬಿಸುವ ಹುನ್ನಾರ ?

■ ಶಾಲಿನಿ ಬೆಳ್ತಂಗಡಿ

ಪಶ್ಚಿಮ ಘಟ್ಟಗಳ ಎಲ್ಲ ಸೊಬಗನ್ನೂ ಮೈಗೂಡಿಸಿಕೊಂಡಿರುವ 'ನಾರಾವಿ' ಬೆಳ್ತಂಗಡಿ ತಾಲೂಕಿನ ಗಡಿಯಲ್ಲಿರುವ ಒಂದು ಪುಟ್ಟ ಗ್ರಾಮ. ಕೂಲಿಕಾರ್ಮಿಕರೂ ಸಣ್ಣ ಕೃಷಿಕರೂ ಬೀಡಿ ಕಾರ್ಮಿಕರೂ ಹೆಚ್ಚಾಗಿರುವ ಈ ಸುಂದರ ಗ್ರಾಮದ ಬಗೆಗೆ ಹೊರಜಗತ್ತಿಗೆ ತಿಳಿದೆ ಇರಲಿಲ್ಲ. ಶಾಂತಿ ಸಮೃದ್ಧಿಯ ಬದುಕನ್ನು ಸಾಗಿಸುತ್ತಿದ್ದ ಇಲ್ಲಿನ ಜನತೆಗೆ ಕಳೆದ ನವೆಂಬರ್ 17ರ ಸೋಮವಾರದ ರಾತ್ರಿ ಕರಾಳ ರಾತ್ರಿಯಾಗಿ ಮಾರ್ಪಟ್ಟಿತ್ತು.

ಕುದುರೇಮುಖ ರಾಷ್ಟ್ರೀಯ ಉದ್ಯಾನವನದ ದಟ್ಟವಾದ ಅಡವಿಯ ನಡುವ ನೆಲೆಸಿರುವ ಮೂಲನಿವಾಸಿಗಳ ನಡುವೆ ಕಾರ್ಯನಿರ್ವಹಿಸುತ್ತಿದ್ದ ಯುವತಿಯರನ್ನು ಪೊಲೀಸರು ಹೊಡೆದುರುಳಿಸಿದ್ದು ತಮ್ಮ ಮಹತ್ ಸಾಧನೆಯೆಂಬಂತೆ ಬಿಂಬಿಸುತ್ತಿದ್ದಾರೆ. ನಕ್ಸಲೀಯತೆಯೆಂಬ ಪಿಡುಗನ್ನೆ ಪತ್ತಿಕ್ಕಿದಂತೆ ಬೀಗುತ್ತಿದ್ದಾರೆ. ಸಂಘ ಪರಿವಾರದ ಹಿಡ್ಡಿಪಡೆಗಳು ಹಾಗೂ ವಿದೇಶೀ ಹಣದ ವಾರಿದಾರರಾಗಿರುವ **ನಾಗರಿಕ ಸೇವಾ ಟ್ರಸ್ಟ್** ಅಂತಹ ಸಂಘಟನೆಗಳು ಮಾತ್ರ ಪೊಲೀಸರ ಈ ಉತ್ತರ ಕುಮಾರನ ಪೌರುಷವನ್ನು ಹೊಗಳಿ ... ಜ್ಜಿಸುತ್ತಿದ್ದರೆ ಜಿಲ್ಲೆಯ ಪ್ರಜ್ಞಾವಂತ ನಾಗರಿಕರು ... ಕಾರ್ಯಾಚರಣೆಯ ಬಗೆಗೆ ಆತಂಕ, ವಿರೋಧ ವ್ಯಕ್ತಪಡಿಸುತ್ತಿದ್ದು ಇಬ್ಬರು ಯುವತಿಯರನ್ನು ಅನಗತ್ಯವಾಗಿ ಬಲಿತೆಗೆದುಕೊಂಡಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಮೂಲ ನಿವಾಸಿಗಳನ್ನು ಹೊರತಳ್ಳುತ್ತಿರುವ ಸರ್ಕಾರ

ಜಗತ್ತಿನ ಪ್ರಕೃತಿ ಸಂಪತ್ತಿನ ಜೀವ ವೈವಿಧ್ಯತೆಗಳ ಆಗರದಲ್ಲಿ ಒಂದಾಗಿರುವ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ರಾಜ್ಯದ ಮೂರು ಜಿಲ್ಲೆಗಳನ್ನು ಒಳಗೊಂಡು (ದಕ್ಷಿಣ ಕನ್ನಡ, ಉಡುಪಿ, ಹಾಗೂ ಚಿಕ್ಕಮಗಳೂರು) ಸುಮಾರು ... ಸಾವಿರ ಹೆಕ್ಟೇರ್ ವಿಸ್ತಾರವಾಗಿರುವ ಅರಣ್ಯ ಪ್ರದೇಶಗಳನ್ನು ಒಳಗೊಂಡಿದೆ.


ಈ ಅರಣ್ಯ ಪ್ರದೇಶದಲ್ಲಿ ವಿವಿಧ ಪಂಗಡಗಳಿಗೆ ಸೇರಿದ ಸುಮಾರು ಎರಡು ಸಾವಿರದಷ್ಟು ಮೂಲನಿವಾಸಿಗಳ ಕುಟುಂಬಗಳು ವಾಸಿಸುತ್ತಿವೆ.

ಮೂಲನಿವಾಸಿಗಳನ್ನು ಅರಣ್ಯದಿಂದ ಹೊರತಳ್ಳಲು ಸರಕಾರ ಹಾಗೂ ಇಲಾಖೆಗಳು ನಿರಂತರವಾಗಿ ಶ್ರಮಿಸುತ್ತಾ ಬಂದಿದ್ದು ಅದರ ವಿರುದ್ಧ ಹೋರಾಡುವ ವಿವಿಧ ಸಂಘಟನೆಗಳೂ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಪ್ರದೇಶದಲ್ಲಿ ನಕ್ಸಲೀಯ ಮಾದರಿಯ ಚಟುವಟಿಕೆಗಳು ನಡೆಯುತ್ತಿರುವ ಬಗೆಗೆ ಕಳೆದ ... ಸಮಯದಿಂದ ಮಾಹಿತಿಗಳು ಕೇಳಿಬರುತ್ತಿದ್ದರೂ ಇದೀಗ ನಡೆದ ಈ ಘಟನೆ ಈ ಪ್ರದೇಶವನ್ನು ತಲ್ಲಣಗೊಳಿಸಿದೆ.

...ಷೆ ಅಗತ್ಯ

ಯುವತಿಯರ ಕೊಲೆ ಅಗತ್ಯವಾಗಿತ್ತೇ? ಪೊಲೀಸ್ ಇಲಾಖೆಯ ವತಿಯಿಂದ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಎಸ್.ಪಿ. ... ರುಗನ್ ಹಾಗೂ ಇನ್ಸ್‌ಪೆಕ್ಟರ್ ಅಶೋಕನ್ ... ರು ನೀಡುವ ಹೇಳಿಕೆಯಂತೆ ಶಂಕಿತ ನಕ್ಸಲೀಯರನ್ನು ಮನೆಯಲ್ಲಿ ಬಂಧಿಸಲು ಯತ್ನಿಸಿದಾಗ ಅವರು ಪೊಲೀಸರ ಮೇಲೆ ಗುಂಡು ಹಾರಿಸಿದಾಗ ಬೇರೆ ದಾರಿಯಿಲ್ಲದೆ ತಾವು ಗುಂಡುಹಾರಿಸಬೇಕಾಯಿತು ಮತ್ತು ಯುವತಿಯರ ಹತ್ಯೆ ಮಾಡಬೇಕಾಯಿತು ಎನ್ನುತ್ತಾರೆ. ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಮನೆಯವರನ್ನು ಮಾತನಾಡಿಸಿದರೆ ಪೊಲೀಸರ ವಿವರಣೆ ಕೇವಲ ಕಟ್ಟುಕತೆಗಳಂತೆ ತೋರುತ್ತಿದೆ.

ಸ್ಥಳೀಯರೇ



ಹೇಳುವಂತೆ ವಾರಕ್ಕೆರಡು ಬಾರಿ ಅವರು ಈ ಪ್ರದೇಶಗಳಿಗೆ ಬಂದು ಸಂಘಟನೆಯ ಕಾರ್ಯದಲ್ಲಿ ನಿರತರಾಗುತ್ತಿದ್ದರು. ಹೀಗಿರುವಾಗ ವ್ಯವಸ್ಥಿತ ಕಾರ್ಯತಂತ್ರ ರೂಪಿಸಿದ್ದರೆ ಪೊಲೀಸರಿಗೆ ಇವರನ್ನು ಬಂಧಿಸುವುದು ಅಸಾಧ್ಯವಾಗಿತ್ತೆ? ಎಂಬ ಪ್ರಶ್ನೆ ಜನರನ್ನು ಕಾಡುತ್ತಿದೆ. ಅದೇ ರೀತಿ ಶರಣಾಗುವಂತೆ ಸೂಚನೆ ನೀಡಿದ್ದರು ಎಂಬ ಪೊಲೀಸರ ವಾದವನ್ನು ಮನೆಯವರೇ ಅಲ್ಲಗೆಳೆದಿದ್ದು ಸತ್ಯ ಹೊರಬರಲು ನಿಷ್ಪಕ್ಷಪಾತ ತನಿಖೆ ಅಗತ್ಯವಾಗಿದೆ.

ಸಮಗ್ರ ತನಿಖೆ ಅಗತ್ಯ :

ನಕ್ಸಲೀಯರ ಮೇಲೆ ಗುಂಡು ಹಾರಿಸಿದ ಸನ್ನಿವೇಶದ ಒಟ್ಟು ಪ್ರಶ್ನೆಗಳಿಗೆ ಉತ್ತರ ದೊರಕಲು ಸಮಗ್ರವಾದ ತನಿಖೆ ಅಗತ್ಯವಾಗಿದೆ. ಉನ್ನತ ಮಟ್ಟದ ತನಿಖೆ ನಡೆಸುವ ಮೂಲಕ ಈ ಕಾರ್ಯಾಚರಣೆಯ ಹಿಂದಿರುವ ರಹಸ್ಯಗಳನ್ನು ಹೊರಗೆಳೆಯಲು ಪ್ರಯತ್ನಿಸಬೇಕಾದುದು ಅನಿವಾರ್ಯವಾಗಿದೆ. ಇದರ ಹಿಂದೆ ಸರಕಾರದ ಹಾಗೂ ಬಾಹ್ಯ ಶಕ್ತಿಗಳ ಕಾಣದ ಕೈಗಳು ಕಾರ್ಯ ನಿರ್ವಹಿಸಿರುವ ಬಗೆಗೆ ವ್ಯಾಪಕವಾದ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ಒಕ್ಕಲೆಬ್ಬಿಸುವುದರ ವಿರುದ್ಧ ಚಳುವಳಿ

ಆದಿವಾಸಿಗಳನ್ನು ಹಾಗೂ ರೈತರನ್ನು ಒಕ್ಕಲೆಬ್ಬಿಸುವ ಯೋಜನೆಯನ್ನು ಕೈಬಿಡುವಂತೆ ಸಿ.ಪಿ.ಐ.ಎಂ. ಪಕ್ಷ ತೀವ್ರವಾಗಿ ಒತ್ತಾಯಿಸುತ್ತಾ ಬಂದಿದ್ದು ಬೆಳ್ತಂಗಡಿಯಲ್ಲಿ ಅರಣ್ಯ ಸಂತ್ರಸ್ತರ ಪರ ಹಲವಾರು ಹೋರಾಟಗಳನ್ನೇ ನಡೆಸಿದ್ದು ಜನತೆಯ ಪಾಲಿಗೆ ಆಕರಣವಾಗಿ ರೂಪುಗೊಳ್ಳುತ್ತಿದೆ.

ಕಪಟ ನಾಟಕ ಇನ್ನೊಂದೆಡೆ

ಜನತೆಯ ಹೋರಾಟಗಳನ್ನು ದಿಕ್ಕುತಪ್ಪಿಸುವ ಕಾರ್ಯವನ್ನು ಮಾಡುತ್ತಿರುವ ನಾಗರಿಕ ಸೇವಾ ಟ್ರಸ್ಟ್ ಎಂಬ ವಿದೇಶೀ ಹಣದ ಏಜೆಂಟರುಗಳ ಸಂಘಟನೆ ಮುಗ್ಧ ಜನರನ್ನು ಬಲಿಯಾಗಿಸಲು ಸಜ್ಜಾಗಿ ನಿಂತಿದೆ. ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದ್ದ ಗಿರಿಜನರ ಹೋರಾಟದಲ್ಲಿ ಮಧ್ಯಪ್ರವೇಶಿಸಿದ ಈ ಶಕ್ತಿಗಳು ಅವರ ನಡುವೆ ಒಡಕನ್ನು ತಂದಿದೆ. ಗಿರಿಜನರನ್ನು ಗುಂಪುಗಳಾಗಿಸಿ ಪರಸ್ಪರ ಶತ್ರುಗಳಂತೆ ಮಾರ್ಪಡಿಸಿರುವ ಇವರು ಸರಕಾರದ ಹಾಗೂ ಕಪಟ ನೇತೃತ್ವವನ್ನು ತಾವೇ ವಹಿಸಿರುವಂತೆ ತೋರಿಸುತ್ತಾ ಅದರ ದಿಕ್ಕು ತಪ್ಪಿಸಿ ನಡು ನೀರಿನಲ್ಲಿ ಕೈಬಿಡುವ ಈ ವಿದೇಶಿ ಹಣದ ಏಜೆಂಟರುಗಳ ಬಗೆಗೆ ಮೂಲನಿವಾಸಿಗಳು ಎಚ್ಚರ ವಹಿಸುವ ಅಗತ್ಯವಿದೆ.

ಬುಡಕಟ್ಟು ಜನರ ಪ್ರಶ್ನೆ

ಸಮಕಾಲೀನಗೊಳಿಸಲಾದ ಸಿಪಿಐ(ಎಂ)ನ ಕಾರ್ಯಕ್ರಮವು ನಮ್ಮ ದೇಶದ ಆದಿವಾಸಿ ಮತ್ತು ಬುಡಕಟ್ಟು ಜನರ ಬಗ್ಗೆ ಹೀಗೆ ಹೇಳುತ್ತದೆ. "ಜನಸಂಖ್ಯೆಯಲ್ಲಿ 7 ಕೋಟಿಯಷ್ಟಿರುವ (ಈಗ 8 ಕೋಟಿ) ಆದಿವಾಸಿ ಮತ್ತು ಬುಡಕಟ್ಟು ಜನರು ಕ್ರೂರ ಬಂಡವಾಳಶಾಹಿ ಮತ್ತು ಅರೆ ಪಾಳೆಯಗಾರಿ ಶೋಷಣೆಗೆ ಆಹುತಿಯಾಗಿರುತ್ತಾರೆ. ಅವರ ಜಮೀನುಗಳನ್ನು ಅವರಿಂದ ಪರಭಾರೆ ಮಾಡಲಾಗುತ್ತಿದೆ. ಅರಣ್ಯಗಳ ಮೇಲೆ ಅವರ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ. ಗುತ್ತಿಗೆದಾರರಿಗೆ ಮತ್ತು ಭೂಮಾಲಿಕರಿಗೆ ಅವರು ಅಗ್ಗದ ಮತ್ತು ಜೀತದ ದುಡಿಮೆ ಒದಗಿಸುವ ಒಂದು ಮೂಲವಾಗಿದ್ದಾರೆ.

ಕೆಲವು ರಾಜ್ಯಗಳಲ್ಲಿ ತಮ್ಮದೇ ಆದ ಪ್ರತ್ಯೇಕ ಭಾಷೆ ಮತ್ತು ಸಂಸ್ಕೃತಿ ಹೊಂದಿರುವ ಬುಡಕಟ್ಟು ಜನಗಳೇ ನಿಬಿಡವಾಗಿ ವಾಸಿಸುವ ಪ್ರದೇಶಗಳಿವೆ. ತಮ್ಮ ಅನನ್ಯತೆ ಮತ್ತು ಸಂಸ್ಕೃತಿ ಕಾಪಾಡಿಕೊಂಡು ಹೋಗುತ್ತಾ ತಮ್ಮ ಮುನ್ನಡೆಗೆ ಅಗತ್ಯವಾಗಿರುವ ತಮ್ಮ ಹಕ್ಕುಗಳ ಕುರಿತಾದ ಒಂದು ಹೊಸ ಪ್ರಜ್ಞೆಗೆ ಅವರು ಎಚ್ಚೆತ್ತುಕೊಳ್ಳುತ್ತಿದ್ದಾರೆ. ಅವರ ಅನನ್ಯತೆಗೆ ಮತ್ತು ಅಸ್ತಿತ್ವಕ್ಕೆ ಬಂದಿರುವ ಬೆದರಿಕೆಯಿಂದಾಗಿ, ಮತ್ತು ಬಂಡವಾಳಶಾಹಿ - ಭೂಮಾಲಿಕ ಆಳುವ ವರ್ಗಗಳ ನಿರ್ದಯವಾದ ಧೋರಣೆಗಳಿಂದಾಗಿ ಬುಡಕಟ್ಟು ಜನರ ಕೆಲವು ವಿಭಾಗಗಳಲ್ಲಿ ಪ್ರತ್ಯೇಕತಾವಾದಿ ಪ್ರವೃತ್ತಿಗಳು ಬೆಳೆಯುತ್ತಿವೆ. ಅವರು ಬಹು ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ಅವರ ಹಕ್ಕುಗಳ ರಕ್ಷಣೆಗಾಗಿ ಪ್ರಾದೇಶಿಕ ಸ್ವಾಯತ್ತತೆಯು ಒಂದು ಪ್ರಜಾಸತ್ತಾತ್ಮಕವಾದ ಮತ್ತು ನ್ಯಾಯವಾದ ಬೇಡಿಕೆಯಾಗಿದೆ. ಬಂಡವಾಳಶಾಹಿ - ಭೂ ಮಾಲಿಕ ಕಂಟ್ರಾಕ್ಟರುಗಳ ದುಷ್ಟಕೂಟವು ಸತತವಾಗಿ ಬುಡಕಟ್ಟು ಜನರ ಮುಖಂಡತ್ವಕ್ಕೆ ಕೆಲವು ರಿಯಾಯ್ತಿಗಳನ್ನು ನೀಡುತ್ತಾ ಅವರ ಪರಂಪರಾಗತವಾದ ಸೌಹಾರ್ದತೆಯನ್ನು ಛಿದ್ರಗೊಳಿಸಲು ಪ್ರಯತ್ನಿಸುತ್ತಿದೆ. ಅವರ ಕಾನೂನುಬದ್ಧ ಹಕ್ಕುಗಳನ್ನು ನಿರಾಕರಿಸುತ್ತದೆ ಮತ್ತು ಪಾಶವಿ ಬಲಪ್ರಯೋಗದಿಂದ ಅವರನ್ನು ದಮನ ಮಾಡುತ್ತಿದೆ."

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು 11 ಲಕ್ಷ ಎಕರೆ ಹೆಚ್ಚುವರಿ ಭೂಮಿಯನ್ನು 25 ಲಕ್ಷ ಕುಟುಂಬಗಳಿಗೆ ವಿತರಣೆಮಾಡಿದೆ. ಇವರಲ್ಲಿ 5 ಲಕ್ಷ ಬುಡಕಟ್ಟು ಕುಟುಂಬಗಳು ಎಂಬುವುದು ಗಮನಾರ್ಹವಾಗಿದೆ. ತ್ರಿಪುರಾ ಎಡರಂಗ ಸರ್ಕಾರ ಬುಡಕಟ್ಟು ಜನರಿಂದ ಕಿತ್ತುಕೊಳ್ಳಲಾದ 7000 ಎಕರೆ ಭೂಮಿಯನ್ನು ಬುಡಕಟ್ಟು ಜನರಿಗೆ ಹಿಂತಿರುಗಿಸಿದೆ ಮಾತ್ರವಲ್ಲ ಭೂ ಸುಧಾರಣೆಗಳ ಮೂಲಕ ಬುಡಕಟ್ಟು ಕುಟುಂಬಗಳಿಗೆ ಭೂಮಿ ದೊರೆಯುವಂತೆ ಮಾಡಿದೆ. ಕೇರಳದಲ್ಲಿ ಆದಿವಾಸಿಗಳ ಭೂ ಹೋರಾಟಕ್ಕೆ ಸಿಪಿಐ(ಎಂ) ನೇತೃತ್ವ ನೀಡುತ್ತಿದೆ.

ಏನೀ ಸಮಸ್ಯೆ, ಯಾವುದು ಹಾದಿ?

ಆದಿವಾಸಿ ಮತ್ತು ಬುಡಕಟ್ಟು ಜನಗಳಿಗೆ ಅರಣ್ಯ ಮತ್ತು ಅದರ ಉತ್ಪನ್ನಗಳೊಂದಿಗೆ ನಿಕಟವಾದ ಸಂಬಂಧವಿದೆ. ಆದರೆ ಅರಣ್ಯ ಕಾಯ್ದೆಗಳು ಇವರನ್ನು ಅತಿಕ್ರಮಣದಾರರೆಂದೇ ಪರಿಗಣಿಸುತ್ತವೆ. ಅರಣ್ಯಗಳು ಕಣ್ಮರೆಯಾಗುತ್ತಿರುವುದಕ್ಕೆ, ಹಸುರು ಆವರಣ ನಾಶವಾಗುತ್ತಿರುವುದಕ್ಕೆ ಈ ಆದಿವಾಸಿ ಬುಡಕಟ್ಟು ಜನರೇ ಕಾರಣ ಎಂಬು ವಾದಿಸಲಾಗುತ್ತಿದೆ. ಇದು ಶುದ್ಧ ಸುಳ್ಳ ಆರೋಪ. ಆದಿವಾಸಿಗಳು, ಬುಡಕಟ್ಟು ಜನಗಳು ಅರಣ್ಯದಲ್ಲೇ ಹುಟ್ಟಿ ಬೆಳೆದವರು, ಅರಣ್ಯದ ಅವಿಭಾಜ್ಯ ಅಂಗವೇ ಆಗಿದ್ದಾರೆ. ಅರಣ್ಯವನ್ನೆ ಅವಲಂಬಿಸಿರುವ ಅವರು ಅರಣ್ಯವನ್ನು ನಾಶಮಾಡುವುದಿಲ್ಲ. ಅರಣ್ಯಗಳು ನಾಶವಾಗುವುದಕ್ಕೆ ಲಾಭಕೋರ ಗುತ್ತಿಗೆದಾರರು, ಅರಣ್ಯ ಮಾಫಿಯಾ, ಅರಣ್ಯ ಅಧಿಕಾರಿಗಳು ಮತ್ತು ಬಂಡವಾಳಶಾಹಿ ರಾಜಕಾರಣಿಗಳು ಕಾರಣವಾಗಿದ್ದಾರೆಯೇ ಹೊರತು ಆದಿವಾಸಿ ಬುಡಕಟ್ಟು ಜನರಲ್ಲ.

ಬುಡಕಟ್ಟು ಜನರಿಗೆ ಅರಣ್ಯ ಮತ್ತು ಅರಣ್ಯ ಉತ್ಪನ್ನಗಳ ಮೇಲೆ ಇರುವ ಪರಂಪರಾಗತ ಹಕ್ಕುಗಳನ್ನು ನಿರಾಕರಿಸುವ ಮೂಲಕ ಅವರನ್ನು ಆಹಾರ, ವಸತಿ ಮತ್ತು ಪರಂಪರಾಗತ ಜೀವನ ವಿಧಾನದಿಂದ ವಂಚಿತರಾಗಿಸಲಾಗುತ್ತಿದೆ. ಬುಡಕಟ್ಟು ಜನರಿಗೆ ಅರಣ್ಯ ಮತ್ತು ಬುಡಕಟ್ಟು ಜನರ ಸಮಸ್ಯೆಗಳು ಮತ್ತು ಹೋರಾಟಗಳು ನಮ್ಮ ದೇಶದ ಪ್ರಜಾಸತ್ತಾತ್ಮಕ ಆಂದೋಲನದ ಅವಿಭಾಜ್ಯ ಅಂಗವಾಗಿದೆ ಎಂದು ಸಿಪಿಐ(ಎಂ) ಭಾವಿಸುತ್ತದೆ. ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಇವರು ಜಮಿನ್ದಾರರ, ಲೇವಾದೇವಿಗಾರರ ಮತ್ತು ಬ್ರಿಟಿಷರ ವಿರುದ್ಧ ನಡೆಸಿದ ಸಮರಶೀಲ ಹೋರಾಟಗಳು ನಮ್ಮ ದೇಶದ ಚರಿತ್ರೆಯ ಒಂದು ಅಮೋಘ ಅಧ್ಯಾಯನವಾಗಿದೆ. ಆದರೆ ಸ್ವಾತಂತ್ರ್ಯ ಸಿಕ್ಕು 5 ದಶಕಗಳ ನಂತರವೂ ದಮನಕ್ಕೊಳಗಾದ ಈ ವಿಭಾಗಗಳ ಸಂಕಷ್ಟಗಳು ತೀರಲಿಲ್ಲ.

ಬಂಡವಾಳಶಾಹಿ- ಭೂಮಾಲಿಕ ಆಳ್ವಿಕೆ ಅಡಿಯಲ್ಲಿ ಆದಿವಾಸಿ ಮತ್ತು ಬುಡಕಟ್ಟು ಜನರ ಸ್ಥಿತಿಗತಿ ತುಂಬಾ ನಿಕೃಷ್ಟವಾಗಿದೆ. ಅವರ ಭೂಮಿಯನ್ನು ಅವರಿಂದ ಕಿತ್ತುಕೊಳ್ಳಲಾಗುತ್ತಿದೆ. ಅವರ ಭೂಮಿಗೆ ರಕ್ಷಣೆ ನೀಡುವ ಸಂವಿಧಾನದ 5ನೇ ಶೆಡ್ಯೂಲ್‌ನ ಭರವಸೆಯನ್ನು ಗಾಳಿಗೆ ತೂರಲಾಗುತ್ತಿದೆ. ಅವರ ಭೂಮಿಯನ್ನು ಅಡವು ಹಾಕಿಕೊಳ್ಳುವ ಮೂಲಕ, ಗೇಣಿಗೆ ಪಡೆಯುವ ಮೂಲಕ, ಬೇನಾಮಿ ಪರಭಾರೆ ಮಾಡುವ ಮೂಲಕ, ರೆವಿನ್ಯೂ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸುಳ್ಳು ಭೂ ದಾಖಲೆಗಳನ್ನು

ಪುಟ 11 ಕ್ಕೆ....

ವೃತ್ತಿ ಶಿಕ್ಷಣ : ಪ್ರತಿಭೆ - ಸಾಮಾಜಿಕ ನ್ಯಾಯಕ್ಕೆ ವಂಚನೆ ಇನ್ನಷ್ಟು ಕುರುಡು ಕಾಂಚಾಣದ ಕ್ರೂರ ನರ್ತನ

ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ಸುಪ್ರಿಂ ಕೋರ್ಟಿನ ತೀರ್ಪು ಹಿಡಿದು ಖಾಸಗಿ ಶಿಕ್ಷಣ ಸಂಸ್ಥೆಗಳು ಮನಬಂದಂತೆ ಶುಲ್ಕಗಳ ಸುಲಿಗೆಗೆ ಮುಂದಾಗಿವೆ. ಇದಕ್ಕೆ ಕೇಂದ್ರ ರಾಜ್ಯ ಸರ್ಕಾರಗಳು ಶಿಕ್ಷಣ ವಿರೋಧಿ ನೀತಿಗಳ ಪರಿಣಾಮ ಪ್ರತಿಭೆ, ಸಾಮಾಜಿಕ ನ್ಯಾಯ, ಮಣ್ಣುಪಾಲಾಗಲಿದ್ದು ಮುಂದಿನ ದಿನಗಳಲ್ಲಿ ಶಿಕ್ಷಣ ನಿಲುಕದ ಗಗನಕುಸುಮವಾಗಲಿದೆ. ಇಂತಹ ನೀತಿಗಳ ವಿರುದ್ಧ ಸಮರಸಾರಿರುವ ಎಸ್.ಎಫ್.ಐ. ಡಿಸೆಂಬರ್ ೧೧ ರಂದು ಶೈಕ್ಷಣಿಕ ಬಂದ್‌ಗೆ ಕರೆನೀಡಿದೆ. ಇಂದಿನ ಗಂಭೀರ ಪರಿಸ್ಥಿತಿ ಅದರ ದೀರ್ಘ ಪರಿಣಾಮದ ಬಗ್ಗೆ.

ಆರ್. ರಾಮಕೃಷ್ಣ

ವೃತ್ತಿಶಿಕ್ಷಣ ಗೊಂದಲದ ಗೂಡಾಗಿದೆ. ಸಮಸ್ಯೆಗಳ ಆಗರವಾಗಿದೆ. ಬಡವರು ಕೆಳ, ಮಧ್ಯಮ ವರ್ಗದ ಜನರಿಗಿರಲಿ, ಮಧ್ಯಮ-ಮೇಲ್ ಮಧ್ಯಮ ವರ್ಗದ ಜನರಿಗೂ ಕೈಗೆಟುಕದಷ್ಟು ವೃತ್ತಿ ಶಿಕ್ಷಣ ಶುಲ್ಕಗಳು ಏರಿವೆ. ಜನ ಸಾಮಾನ್ಯರಿಗೆ ವೃತ್ತಿಶಿಕ್ಷಣ ಗಗನ ಕುಸುಮವಾಗಿದೆ. ಈಗಾಗಲೇ ಆತಂಕಕಾರಿಯಾಗಿ ಬೆಳೆದಿರುವ ಶಿಕ್ಷಣದ ವ್ಯಾಪಾರೀಕರಣ ಹೊಸ ಮಜಲನ್ನು ಮುಟ್ಟಿದೆ.


ಶುಲ್ಕಗಳ ಶೂಲ.

ಪ್ರತಿಭಾನ್ವಿತ ವಿದ್ಯಾರ್ಥಿಯೊಬ್ಬ ಕಳೆದ ಶೈಕ್ಷಣಿಕ ವರ್ಷದಲ್ಲಿ ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ಉಚಿತ ಸೀಟು ಅಡಿಯಲ್ಲಿ ವಾರ್ಷಿಕ 16,200 ರೂ.ಗಳ ಶುಲ್ಕದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದಿದ್ದರೆ, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳು ವಾರ್ಷಿಕ 1,97,000 ರೂಪಾಯಿಗಳನ್ನು ಶುಲ್ಕವಾಗಿ ಕಟ್ಟಬೇಕು. ಈ ಪ್ರಮಾಣದ ಹಣ ತನ್ನ ಬಳಿ ಇಲ್ಲ ಎಂದಾದರೆ ಆತನಿಗೆ / ಆಕೆಗೆ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶವಿಲ್ಲ. ಪ್ರತಿಭೆ- ಅರ್ಹತೆ ಸಾಮಾಜಿಕ ನ್ಯಾಯ ಕಸದ ಬುಟ್ಟಿಗೆ.

ಇದೇ ರೀತಿ 11,740 ರೂ ವಾರ್ಷಿಕ ಶುಲ್ಕ ತುಂಬುತ್ತಿದ್ದ ಇಂಜನಿಯರಿಂಗ್ ವಿದ್ಯಾರ್ಥಿ ಈಗ ವಾರ್ಷಿಕ 38,590 ರೂ ತೆರಬೇಕಿದೆ. ದಂತ ವೈದ್ಯಕೀಯ ವಿದ್ಯಾರ್ಥಿ ವಾರ್ಷಿಕ 1,17,000 ರೂಪಾಯಿ ಕೊಡಬೇಕು. ಖಾಸಗಿ ಅನುದಾನರಹಿತ ಕಾಲೇಜಿನಲ್ಲಿದ್ದ ಉಚಿತ ಸೀಟುಗಳೆಲ್ಲವೂ ಈಗ ರದ್ದಾಗಿವೆ.

1993ರಿಂದ ಇಲ್ಲಿಯವರೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳ ಶೇ.50 ರಷ್ಟು ಸೀಟುಗಳು ಪ್ರತಿಭೆ ಮತ್ತು ಸಾಮಾಜಿಕ ನ್ಯಾಯದ ಆಧಾರದಲ್ಲಿ ಉಚಿತ ಸೀಟುಗಳಾಗಿದ್ದವು. ಮಾತ್ರವಲ್ಲ ಒಟ್ಟಾರೆ ಸೀಟುಗಳಲ್ಲಿ ಶೇ.85 ಪಾಲು ಸೀಟುಗಳನ್ನು ಕಾಲೇಜುಗಳು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಆಧಾರದಲ್ಲಿ ತುಂಬಿಕೊಳ್ಳಲಾಗುತ್ತಿತ್ತು. ಅಕ್ಟೋಬರ್ 2002 ರಂದು ಸುಪ್ರಿಂ ಕೋರ್ಟಿನ ಪೂರ್ಣ ಪೀಠ ಕರ್ನಾಟಕದ 'ಟಿಎಂಎಪೈ, V/s ಕರ್ನಾಟಕ ಸರ್ಕಾರ'ದ ಪ್ರಕರಣದಲ್ಲಿ ನೀಡಿರುವ ತೀರ್ಪು ವೃತ್ತಿಶಿಕ್ಷಣದಲ್ಲಿ ಉಚಿತ ಸೀಟುಪದ್ಧತಿ ಸಿಇಟಿ ವ್ಯವಸ್ಥೆ, ಪ್ರತಿಭೆ ಹಾಗೂ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಬುಡಕ್ಕೆ ಕೊಡಲಿಪೆಟ್ಟನ್ನು ನೀಡಿದೆ. ಈ ವರ್ಷದಲ್ಲಿ ಜಾರಿಯಲ್ಲಿರುವ ಶುಲ್ಕ ಸ್ವರೂಪ ಈ ವರ್ಷಕ್ಕೆ ಮಾತ್ರ ಅನ್ವಯಿಸುವಂತದ್ದು. ಮುಂದಿನ ವರ್ಷ ಶುಲ್ಕಗಳು ಮತ್ತಷ್ಟು ಏರಿಕೆಯಾಗುವ ಎಲ್ಲ ಸಾಧ್ಯತೆಗಳಿವೆ. ಮುಂದೆ ವೃತ್ತಿ ಶಿಕ್ಷಣಕ್ಕೆ ಬರುವವರಿಗೆ ಮಾತ್ರವಲ್ಲ. ಈ ವರ್ಷ ವೃತ್ತಿಶಿಕ್ಷಣಕ್ಕೆ ಸೇರಿರುವವರಿಗೂ ಶುಲ್ಕ ಏರಿಕೆಯ ಬಿಸಿ ತಟ್ಟಲಿದೆ ಮಾತ್ರವಲ್ಲ. ಖಾಸಗಿ ಕಾಲೇಜು ಆಡಳಿತ ಮಂಡಳಿಗಳು ಈ ವರ್ಷಕ್ಕೆ ಒಪ್ಪಿರುವ ಸೀಟು ಹಂಚಿಕೆ ನೀತಿ (seat matrix) ಮುಂದಿನ ವರ್ಷಕ್ಕೆ ಒಪ್ಪುವುದಿಲ್ಲವೆಂದೂ ಈಗಾಗಲೇ ಸಾರಿದ್ದಾಗಿದೆ. ಮುಂದಿನ ದಿನಗಳಲ್ಲಿ ಸಿಇಟಿ ಎಂಬ ಪದ್ಧತಿಯನ್ನೇ ಧಿಕ್ಕರಿಸುವ ಸಾಧ್ಯತೆಯೂ ಇದೆ. ಅಕ್ಟೋಬರ್ 2002 ರ ಸುಪ್ರಿಂ ಕೋರ್ಟ್ ತೀರ್ಪು ಇಂತಹ ಶಿಕ್ಷಣದ ವ್ಯಾಪಾರೀಕರಣಕ್ಕೆ ಕುಮ್ಮಕ್ಕು ನೀಡಿದೆ. ವಿದ್ಯಾರ್ಥಿ ಪೋಷಕರನ್ನು ಸುಲಿಗೆ ಮಾಡುವ ಖಾಸಗಿ ಆಡಳಿತ ಮಂಡಳಿಯ ಲಾಬಿಗೆ ಆನೆ ಬಲ ತಂದುಕೊಟ್ಟಿರುವ ಈ ಸುಪ್ರಿ ಕೋರ್ಟಿನ ತೀರ್ಪಿನ ಹೂರಣ-ವಾದ ಸಾರ ಏನೆಂದು ಹಾಗೂ ವೃತ್ತಿಶಿಕ್ಷಣದ ಬಿಕ್ಕಟ್ಟು ಬೆಳೆದುಬಂದ ಬಗೆಯನ್ನು ಕುರಿತು ಲೇಖನದ ಮುಂದಿನ ಭಾಗದಲ್ಲಿ ವಿವರಿಸಲಾಗಿದೆ. ಶಿಕ್ಷಣ ರಂಗದಲ್ಲಿ ಕುರುಡು ಕಾಂಚಾಣದ ಕ್ರೂರ ನರ್ತನಕ್ಕೆ ನಮ್ಮ ಸಂವಿಧಾನವನ್ನು- ಸಂವಿಧಾನ ಆಶಯಗಳನ್ನು ಜನಸಾಮಾನ್ಯ ಹಿತಾಸಕ್ತಿಯನ್ನು ರಕ್ಷಿಸಬೇಕಾದ ನ್ಯಾಯಾಂಗವೇ ಕುಮ್ಮಕ್ಕು ನೀಡುತ್ತಿರುವುದು ಜಾಗತೀಕರಣ ಯುಗದ ದುರಂತವಾಗಿದೆ.

ಸಾಮಾನ್ಯ ಶಿಕ್ಷಣದಿಂದ ಜೀವನೋಪಾಯ ಸಾಗದು ಎಂಬ ಭಾವನೆ ಸಮಾಜದಲ್ಲಿ ಬೆಳೆದಂತೆ ವೃತ್ತಿಶಿಕ್ಷಣಕ್ಕೆ ಇರುವ ಬೇಡಿಕೆ ತೀವ್ರಗೊಳ್ಳುತ್ತಿದೆ. ಹೇಗಾದರೂ ಮಾಡಿ ತಮ್ಮ ಮಕ್ಕಳನ್ನು ವೈದ್ಯರು ಇಲ್ಲವೇ ಇಂಜನಿಯರ್ ಮಾಡಬೇಕೆಂಬ ಉತ್ಕಟ ಹಂಬಲ ಪೋಷಕರಲ್ಲಿ ತೀವ್ರಗೊಳ್ಳುತ್ತಿದೆ ಹಾಗೂ ವಿದ್ಯಾರ್ಥಿ ಸಮುದಾಯದಲ್ಲೂ ಈ ಹಂಬಲ ಬೆಳೆದಿದೆ.



ಉನ್ನತ ಶಿಕ್ಷಣ ಒಂದು ಗಗನ ಕುಸುಮವೇ?

ಜನರ ಇಂತಹ ಶಿಕ್ಷಣಾಂಕ್ಷೆಯನ್ನೇ ಬಂಡವಾಳ ಮಾಡಿಕೊಳ್ಳಲು ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ಹತ್ತಾರು ಹೊಸ ಹೊಸ ತಾಂತ್ರಿಕ ವೈದ್ಯಕೀಯ, ಅರೆ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸಿ ವೃತ್ತಿಶಿಕ್ಷಣದ ಬಿಕರಿಯನ್ನು - ಲಾಭದ ಬೇಟೆಯನ್ನು ಆರಂಭಿಸಿದೆ. ಕರ್ನಾಟಕ ರಾಜ್ಯವೂ ಸಹ ಇಂತಹ ಶಿಕ್ಷಣ ಸಂಸ್ಥೆಗಳ ಬಹು ದೊಡ್ಡ ವ್ಯಾಪಾರೀ ಕೇಂದ್ರವಾಗಿ ರೂಪುಗೊಂಡಿದೆ.

1993 ರವರೆಗೆ ವೃತ್ತಿಶಿಕ್ಷಣದಲ್ಲಿ ಖಾಸಗಿ ಆಡಳಿತ ಸಂಸ್ಥೆಗಳ ಮೇಲೆ ಸರ್ಕಾರದ ಕಡಿವಾಣವೇ ಇರಲಿಲ್ಲ. ಕೈಬೆರಳಷ್ಟು ಇರುವ ಸರ್ಕಾರಿ - ತಾಂತ್ರಿಕ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಷ್ಟೇ ಸಮಾಜದ ಆರ್ಥಿಕ- ಸಾಮಾಜಿಕ ಪರಿಸ್ಥಿತಿಗಳ ಪರಿಗಣನೆ ಮತ್ತು ಸಾಮಾಜಿಕ ನ್ಯಾಯಕ್ಕೆ ಮಾನ್ಯತೆಯಿದ್ದದ್ದು: ಖಾಸಗಿ ಕಾಲೇಜುಗಳ ವಂತಿಗೆ ಸುಲಿಗೆಗೆ ಯಾವುದೇ ನಿಯಂತ್ರಣವಿರಲಿಲ್ಲ. ಪ್ರವೇಶ ನೀತಿಗೆ ಒಂದು ಮಾನದಂಡ ಕ್ರಮವೂ ಸಹ ಇರಲಿಲ್ಲ. ಪೋಷಕರ 'ಕೊಳ್ಳುವ ಸಮರ್ಥ್ಯ'ವೇ ವೃತ್ತಿಶಿಕ್ಷಣದಲ್ಲಿ ನಿರ್ಣಾಯಕವಾದ ಅಂಶವಾಗಿತ್ತು.

ಇಂತಹ ಅರಾಜಕ ಸನ್ನಿವೇಶದಲ್ಲಿ ಸುಪ್ರಿಂ ಕೋರ್ಟಿಗೆ ಮೊರೆ ಹೋದ ಕರ್ನಾಟಕದ ಸಿದ್ದಾರ್ಥ ಕಾಲೇಜಿನ ವಿದ್ಯಾರ್ಥಿನಿ ಮೋಹಿನಿ ಜೈನ್ ಮತ್ತು ಕೆ.ಪಿ. ಉನ್ನಿಕೃಷ್ಣನ್‌ರ ಮೊಕದ್ದಮೆ, ಪರಿಣಾಮವಾಗಿ 1993 ರಲ್ಲಿ 'ಕೆ.ಪಿ. ಉನ್ನಿಕೃಷ್ಣನ್ ಪ್ರಕರಣ' ಎಂದೇ ಖ್ಯಾತವಾದ ಸುಪ್ರಿಂ ಕೋರ್ಟು ತೀರ್ಪು ಬಂತು. ನಂತರ ಸುಮಾರು 9 ವರ್ಷಗಳ ನಂತರ ಅಕ್ಟೋಬರ್ 2002 ರಲ್ಲಿ ಟಿಎಂಎ ಪೈ ಫೌಂಡೇಷನ್ ಪ್ರಕರಣದ ಸುಪ್ರಿಂ ಕೋರ್ಟ್ ತೀರ್ಪು ಬಂದಿದೆ. 1993 ರ ಉನ್ನಿಕೃಷ್ಣನ್ ಪ್ರಕರಣ ವೃತ್ತಿ ಶಿಕ್ಷಣದಲ್ಲಿ ಅಲ್ಲಿಯವರೆಗೆ ತಾಂಡವವಾಡುತ್ತಿದ್ದ ಅರಾಜಕತೆಗೆ ವಂತಿಗೆ ಸುಲಿಗೆಗೆ ಅಲ್ಪಸ್ವಲ್ಪವಾದರೂ ತಡೆ ಒಡ್ಡಿ ಪ್ರತಿಭೆ - ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯಿತು. ಆದರೆ 2003 ರ 'ಟಿಎಂಎ ಪೈ ಪ್ರಕರಣ'ದ ತೀರ್ಪು ಉನ್ನಿಕೃಷ್ಣನ್ ಪ್ರಕರಣದ ತೀರ್ಪನ್ನು ತಿರುಗು ಮುರುಗು ಮಾಡಿದೆ.

ಉನ್ನಿಕೃಷ್ಣನ್ ಪ್ರಕರಣದ ತೀರ್ಪನ್ನು ಸಹ 'ವಂತಿಗೆ ಪದ್ದತಿಯನ್ನು ಕಾನೂನುಬದ್ಧಗೊಳಿಸುವ ತೀರ್ಪು' ಎಂದು ಜರೆಯುವವರು ಇದ್ದರು. ಆ ವಿಮರ್ಶೆ ಏನೇ ಇದ್ದರೂ ಸಹ ಹಣವುಳ್ಳವರಿಗೆ ಮಾತ್ರ ವೃತ್ತಿ ಶಿಕ್ಷಣ ಎಂಬಂತಹ ಪರಿಸ್ಥಿತಿಯಲ್ಲಿ ಪ್ರತಿಭೆ ಇದ್ದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಅವಕಾಶವಂಚಿತರಾದ ದುರ್ಬಲ ವಿಭಾಗದ ವಿದ್ಯಾರ್ಥಿಗಳು ಸಹ ಗಣನೀಯವಾಗಿ ವೃತ್ತಿಶಿಕ್ಷಣ ಪ್ರವೇಶಿಸುವುದು ಸಾಧ್ಯವಾಯಿತು.

ಯಾವುದೇ ಅಡೆತಡೆ ಇಲ್ಲದ ವಂತಿಗೆ ಸುಲಿಗೆಗೆ ಒಗ್ಗಿ ಹೋಗಿದ್ದ ಖಾಸಗಿ ಆಡಳಿತ ಮಂಡಳಿಗಳು ಅಂದೂ ಸಹ ಶುಲ್ಕ ನಿಗದಿ ಮತ್ತು ಪ್ರವೇಶ ನೀತಿಯಲ್ಲಿ ಸರ್ಕಾರದ ನಿಯಂತ್ರಣವನ್ನು ಒಪ್ಪುವುದಿಲ್ಲವೆಂದು ಪಟ್ಟು ಹಿಡಿದಿದ್ದರು. ಅಲ್ಲಿಂದಾಚೆಗೆ ಜಾರಿಗೆ ಬಂದ ಉಚಿತಸೀಟು / ಪಾವತಿ ಸೀಟು ನೀತಿಯನ್ನು ಒಪ್ಪುವುದಿಲ್ಲ ಎಂದೇ ಹಠ ಹಿಡಿದಿದ್ದರು. ಈ ನಿಟ್ಟಿನಲ್ಲಿ ಅವರು ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡುವುದಿಲ್ಲ..... ಕಾಲೇಜುಗಳನ್ನೇ ಮುಚ್ಚಿಬಿಡುತ್ತೇವೆ...... ಕಾಲೇಜು ನಡೆಸುವುದು ಸಾಧ್ಯವೇ ಇಲ್ಲ ಎಂದೆಲ್ಲಾ ಗುಟುರು ಹಾಕಿದ್ದರು. ಹಲವು ಬಗೆಯ ತಿಕ್ಕಾಟ - ಜಗ್ಗಾಟಗಳ ನಂತರ ಅಂತಿಮವಾಗಿ ಶೇ.85 ಸಿಇಟಿ ಮೂಲಕ ಪ್ರವೇಶ ಶೇ.15 ರಷ್ಟು ಆಡಳಿತ ಮಂಡಳಿ ಕೋಟಾ ಎಂದೂ ಹಾಗೂ ಒಟ್ಟು ಸೀಟುಗಳಲ್ಲಿ ಶೇ.50 ರಷ್ಟು ಉಚಿತ ಸೀಟು (ಕಡಿಮೆ ಶುಲ್ಕ) ಎಂದೂ ನಿಗದಿಯಾಯಿತು.

ಅಡ್ಡಸಹಾಯಧನ - ಸಾಮಾಜಿಕ ನ್ಯಾಯದ ಪರಿಕಲ್ಪನೆ

ವೃತ್ತಿ ಶಿಕ್ಷಣವೇ ಇರಲಿ - ಯಾವುದೇ ಶಿಕ್ಷಣ ಇರಲಿ ಹಣವುಳ್ಳ ಶ್ರೀಮಂತರಿಗೆ ಮಾತ್ರ ಪ್ರವೇಶ ಎಂಬುದು ಅರಣ್ಯ ನ್ಯಾಯವಾಗುತ್ತದೆ. ಹೆಚ್ಚು ಶುಲ್ಕ ತೆರಲು ಸಾಮರ್ಥ್ಯವುಳ್ಳವರು ಹೆಚ್ಚು ಶುಲ್ಕ ತೆರಬೇಕು. ಸಾಮಾಜಿಕವಾಗಿ - ಆರ್ಥಿಕವಾಗಿ ದುರ್ಬಲರಾದ ಅವಕಾಶ ವಂಚಿತ ವಿಭಾಗದ ವಿದ್ಯಾರ್ಥಿಗಳಿಗೆ ಶುಲ್ಕ ಹೊರೆಯಿಂದ ವಿನಾ... ನೀಡಬೇಕೆಂಬ ಅಡ್ಡ ಸಹಾಯಧನ (cross sub-sidy) ಆಧಾರದಲ್ಲಿ ಈ ಉಚಿತ - ಪಾವತಿ ... ಪದ್ಧತಿ ಆರಂಭವಾಯಿತು. ಆಳುವ ಸರ್ಕಾರ... ಸಾಮಾನ್ಯ ಶಿಕ್ಷಣ- ಪ್ರಾಥಮಿಕ ಶಿಕ್ಷಣ ನೀ... ಜವಾಬ್ದಾರಿಯಿಂದಲೇ ಜಾರಿಗೊ... ಪ್ರಯತ್ನಿಸುತ್ತಿರುವ ಇಂತಹ ಸನ್ನಿವೇಶದಲ್ಲಿ ಒಂದು ಸ್ವಾಗತಾರ್ಹ ಕ್ರಮವೇ ಆಗಿದ್ದಿತು. ... ಸುಮಾರು 9 ವರ್ಷಗಳ ಕಾಲ ಜಾರಿಯಲ್ಲಿದ್ದ ... ವ್ಯವಸ್ಥೆಯಿಂದ ಸಾವಿರಾರು ಪ್ರತಿಭಾನ್ವಿತ, ... ದಲಿತ, ಹಿಂದುಳಿದ ಕುಟುಂಬಗಳ ವಿದ್ಯಾರ್ಥಿ... ಶಿಕ್ಷಣವನ್ನು ಪಡೆದಿದ್ದಾರೆ.

1993 ರಲ್ಲಿ ಖಾಸಗಿ ಶಿಕ್ಷಣ ಸಂಸ್ಥೆ... ಬೆದರಿಸಿದಂತೆ ಯಾವುದೇ ಸಂಸ್ಥೆಯು ... ಕಾಲೇಜನ್ನು ಮುಚ್ಚಲಿಲ್ಲ. ವೃತ್ತಿ ಶಿಕ್ಷಣ ಸಂ... ಸಂಖ್ಯೆಯೇನು ಕಡಿಮೆಯೂ ಆಗಲಿಲ್ಲ. ಬದ... ಖಾಸಗಿ ತಾಂತ್ರಿಕ, ವೈದ್ಯಕೀಯ ಕಾಲೇಜು... ಸಂಖ್ಯೆ ನಿರಂತರವಾಗಿ ಏರುತ್ತಲೇ ಬಂದಿದೆ. ... ವೈದ್ಯಕೀಯ, ತಾಂತ್ರಿಕ ಕಾಲೇಜು ಮಂಜ... ಮಾಡಬೇಕೆಂದು ಅರ್ಜಿ ಹಾಕಿ ಈಗಲೂ ನೂ... ಸಂಸ್ಥೆಗಳು ಕಾಯುತ್ತ ಕುಳಿತಿವೆ.

ಡಿಸೆಂಬರ್ 11 ಶೈಕ್ಷಣಿಕ ಬಂದ್... ಅಖಿಲ ಭಾರತ ಮುಷ್ಕರ

ಟಿ.ಎಂ.ಎ.ಪೈ ಫೌಂಡೇಷನ್ ಪ್ರಕರಣದ ತೀರ್ಪು

ಮಂಗಳೂರಿನ ಭಾಷಾ ಅಲ್ಪ ಸಂಖ್ಯಾತ ... ಸಂಸ್ಥೆ ಟಿ.ಎಂ.ಎ.ಪೈ ಫೌಂಡೇಷನ್ ಅಲ್ಪ ಸಂ... ಶಿಕ್ಷಣ ಸಂಸ್ಥೆಗಳ ಹಕ್ಕನ್ನು ಪ್ರತಿಪಾದಿಸಿ ಸು... ಕೋರ್ಟಿಗೆ ಮೊರೆ ಹೋಯಿತು. ಪ್ರವೇಶ ನೀತಿ ಮತ್ತು ಶುಲ್ಕ ನಿಗದಿಯ... ಸರ್ಕಾರದ ಕ್ರಮಗಳಿಂದ ಅಲ್ಪಸಂಖ್ಯಾತ ... ಸಂಸ್ಥೆಗಳ ಸಂವಿಧಾನದತ್ತ ಹಕ್ಕಿಗೆ ಧಕ್ಕೆಯು... ಎಂಬುದು ಟಿ.ಎಂ.ಎ.ಪೈ ಸಂಸ್ಥೆಯ ವಾದ...

ಯಾವುದೇ ನಾಗರಿಕ ಸಮಾಜ, ... ಅಲ್ಪಸಂಖ್ಯಾತ ಸಮುದಾಯದ ಶೈಕ್ಷಣಿಕ ... ಸೇರಿದಂತೆ ವಿಶೇಷ ಹಕ್ಕುಗಳ... ಗೌರವಿಸಬೇಕಾಗುತ್ತದೆ ವ... ಕಾಪಾಡಬೇಕಾಗುತ್ತದೆ. ಇದು ಜಾತ್ಯಾತೀತತೆ ... ಪ್ರಜಾಪ್ರಭುತ್ವಗಳ ಅಂತರ್ಗತವಾ... ಮೌಲ್ಯವಾಗಿದೆ. ಆದರೆ ಅಲ್ಪಸಂಖ್ಯಾತ ... ಸಂಸ್ಥೆಗಳು ತಮ್ಮ ಸಮುದಾಯದ ವಿದ್ಯಾರ್ಥಿ... ಹಿತಕ್ಕಾಗಿ ಈ ಹಕ್ಕನ್ನು ಬಳಸಬೇಕು. ಶಿಕ್ಷಣ... ವ್ಯಾಪಾರಿ ಮನೋಭಾವ ಸಲ್ಲದು ಎಂದು ಯಾ... ನಿರೀಕ್ಷಿಸಬಹುದಾಗಿದೆ. ಈ ನಿಟ್ಟಿನಲ್ಲಿ ಅಲ್ಪಸಂ... ಶಿಕ್ಷಣ ಸಂಸ್ಥೆಗಳಿಗೆ ಸಹ ಕೆಲವು ಸಾಮಾ... ಹೊಣೆಗಾರಿಕೆ ಮತ್ತು ಸಾಮಾಜಿಕ ನಿಯಂ... ಅನಿವಾರ್ಯವಾಗಿದೆ. ಆದರೆ ವೃತ್ತಿಶಿಕ್ಷಣದ ... ಸಮಸ್ಯೆ ಮೂಲ ಇರುವುದು ಈ ಪ್ರ... ಮೇಲಲ್ಲ.

ಸುಪ್ರಿಂ ಕೋರ್ಟ್ ಅಲ್ಪಸಂಖ್ಯಾತ ... ಸಂಸ್ಥೆಯ ಹಕ್ಕಿನ ಪ್ರಶ್ನೆಯ ಕುರಿತು ಮಾತ್ರವೇ ... ತೀರ್ಪನ್ನು ಸೀಮಿತಗೊಳಿಸಿಕೊ... ಅವಕಾಶವಿತ್ತು. ಸುಪ್ರಿಂಕೋರ್ಟ್ ಆ ವ್ಯಾಪ್ತಿ... ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಹಕ್ಕನ್ನು ಕು... ಸಹ ಸ್ವತಃ ತಾನೇ ಚರ್ಚಿಸಿ ತೀರ್ಪಿತ್ತಿದೆ. ... ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಸರ್ಕಾ... ಅನುದಾನ ಪಡೆಯದಿರುವುದರಿಂದ ಸರ್ಕಾರ... ಸಂಸ್ಥೆಗಳ ಪ್ರವೇಶ ನೀತಿ ಹಾಗೂ ... ಸ್ವರೂಪವನ್ನು ನಿಯಂತ್ರಿಸುವ ಹಕ್ಕಿಲ್ಲ ಎಂ... ತೀರ್ಪಿನ ಒಂದು ಮುಖ್ಯ ಅಂಶ.

ಸಮಸ್ಯೆಯ ಮೂಲ ಇರುವುದು ಇಲ್ಲಿ. ... ರ ಖ್ಯಾತ ಉನ್ನಿಕೃಷ್ಣನ್ ಪ್ರಕರಣ ತೀ... ಸಕಾರಾತ್ಮಕ ಪರಿಣಾಮಗಳೆಲ್ಲವೂ ...

[illegible]ವಾಗಿದೆ. ಮತ್ತೆ ವೃತ್ತಿಶಿಕ್ಷಣದಲ್ಲಿ ಕುರುಡು ಕಾಂಚಾಣದ ಆರ್ಭಟವೇ ವಿಜೃಂಭಿಸಲಿದೆ. 1993 ರಲ್ಲಿ ಸಾಮಾಜಿಕ ನ್ಯಾಯದ ಪರವಾಗಿ ತೀರ್ಪಿತ್ತ ನ್ಯಾಯಾಲಯದ ಧೋರಣೆ ಹಾಗೂ 2002 ರ ತೀರ್ಪು ಇವು ಕೇವಲ ಕೆಲವು ನ್ಯಾಯಾಧೀಶರ ವ್ಯಕ್ತಿಗತ ದೃಷ್ಟಿಯನ್ನು ಅವಲಂಬಿಸಿಲ್ಲ. ಬದಲಿಗೆ ಕಳೆದ 10 ವರ್ಷಗಳಲ್ಲಿ ದೇಶದ ಆರ್ಥಿಕ ಸಾಮಾಜಿಕ ರಂಗದಲ್ಲಿ ಆಗಿರುವ ಅಗಾಧ ಸ್ಥಿತ್ಯಂತರ ನ್ಯಾಯಾಲಯವನ್ನೂ ತಟ್ಟಿ ಪ್ರಭಾವಿತಗೊಳಿಸಿದೆ.

2002 ರ ಟಿ.ಎಂ.ಎ.ಪೈ ಪ್ರಕರಣದ ಸುಪ್ರಿಂ ಕೋರ್ಟ್ ತೀರ್ಪು ಶುಲ್ಕವನ್ನು ತೆರಲು ಶಕ್ತನಾದ ಹಣವುಳ್ಳ ವಿದ್ಯಾರ್ಥಿಯಿಂದ ದುರ್ಬಲ ವರ್ಗಗಳ ವಿದ್ಯಾರ್ಥಿಯು ವೆಚ್ಚವನ್ನು ಭರಿಸುವುದು ಅಸಮರ್ಥನೀಯ ಎಂದಿದೆ ಅಂತಹ ಸಹಾಯಧನದ ಪರಿಕಲ್ಪನೆಯನ್ನು ತಿರಸ್ಕರಿಸಿದೆ. ಇಂತಹ ನೀತಿಯಿಂದಾಗಿ ಬಹುತೇಕ ನಗರಗಳ ಹಣವಂತ ವಿಭಾಗದ ವಿದ್ಯಾರ್ಥಿಗಳಿಗೆ ಗ್ರಾಮೀಣ ಪ್ರದೇಶಗಳ ಬಡ ವಿಭಾಗಗಳ ವಿದ್ಯಾರ್ಥಿಗಳು ಶಿಕ್ಷಣ ವೆಚ್ಚವನ್ನೂ ತೆರುವಂತಾಗಿದೆ ಎಂದು ತೀರ್ಪು ತಿಳಿಸಿದೆ. ಇಂತಹ ತೀರ್ಪೊಂದು ಹೊರ ಬಂದ ಕೂಡಲೇ ಸಂತಸದ ಸುಗ್ಗಿಯಲ್ಲಿ ಹಿಗ್ಗಿ ಹೋದವರು ಖಾಸಗಿ ಆಡಳಿತ ಮಂಡಳಿಯ ಒಡೆಯರು. ಶಿಕ್ಷಣವನ್ನು ಒಂದು ಉದ್ದಿಮೆಯನ್ನಾಗಿ ಮಾಡಿರುವ ಶಿಕ್ಷಣೋದ್ಯಮಿಗಳು, ವಿದ್ಯಾರ್ಥಿಗಳು, ಪೋಷಕರು ಮಾತ್ರ ತೀರ್ಪಿನಿಂದ ಕಂಗಾಲಾದರು.

ವೃತ್ತಿ ಶಿಕ್ಷಣದಲ್ಲಿ ಪ್ರಶ್ನೆಯಲ್ಲಿ ರಾಜ್ಯ ಸರ್ಕಾರದ ಕ್ರಮಗಳು

ಟಿ.ಎಂ.ಎ.ಪೈ ಪ್ರಕರಣದ ತೀರ್ಪಿನ ನಂತರ ಕರ್ನಾಟಕದಲ್ಲಿಯೂ ದೊಡ್ಡ ಆತಂಕದ ವಾತಾವರಣವೇ ಸೃಷ್ಟಿಯಾಯಿತು. ವಿದ್ಯಾರ್ಥಿ ಪೋಷಕರು ಪ್ರತಿಭಟನೆಗಿಳಿದರು. ರಾಜ್ಯ ಸರ್ಕಾರ ಮತ್ತು ಖಾಸಗಿ ಆಡಳಿತ ಮಂಡಳಿ ಪ್ರತಿನಿಧಿಗಳು ಒಂದೆಡೆ ಕುಳಿತು ಚರ್ಚಿಸುತ್ತಿದ್ದರೆ, ಯಾರು ಸರ್ಕಾರದ ಪ್ರತಿನಿಧಿಗಳು ಯಾರು ಆಡಳಿತ ಮಂಡಳಿಯ ಪ್ರತಿನಿಧಿಗಳು ಎಂಬುದೇ ಅರಿವಾಗದ ಸ್ಥಿತಿ. ಆಡಳಿತ ಪಕ್ಷದ ಮುಖಂಡರೇ ಬಹುಪಾಲು ಶಿಕ್ಷಣ ಸಂಸ್ಥೆಗಳ ಒಡೆಯರು. ಇಂತಹ ಸ್ಥಿತಿಯಲ್ಲಿ


ದುಬಾರಿ - [illegible] ದೂರವಾದ ಶಿಕ್ಷಣ

ಸರ್ಕಾರ ಶಿಕ್ಷಣ ಪರವಾದ ನಿಲುವು ತೆಗೆದುಕೊಳ್ಳಬಹುದೇ ಎಂಬ ಸಂಶಯು ಸಹಜವಾಗಿಯೇ ಇತ್ತು. ತನ್ನ ತೀರ್ಮಾನವನ್ನು ಜಾರಿ ಮಾಡುವ ಇಚ್ಛಾಶಕ್ತಿ ಸರ್ಕಾರಕ್ಕೆ ಇತ್ತೋ ಇಲ್ಲವೋ, ಆದರೆ ಸರ್ಕಾರ ಸುಪ್ರಿಂ ಕೋರ್ಟ್ ತೀರ್ಪಿನ ನಂತರವೂ ಶೇ.75/25 ಸೀಟು ಹಂಚಿಕೆ ನೀತಿ ಪ್ರಕಟಿಸಿತು. ಶೇ.75 ಸೀಟುಗಳಲ್ಲಿ ಹೊರ ರಾಜ್ಯದಿಂದ ಬರುವ ಶೇ.10 ರಷ್ಟು ವಿದ್ಯಾರ್ಥಿಗಳ ಶುಲ್ಕವನ್ನು ಮಾತ್ರ ಏರಿಸಿ ಉಳಿದಂತೆ ಹಳೆಯ ಶುಲ್ಕ ಸ್ವರೂಪವನ್ನೇ ಮುಂದುವರಿಸಲು ತೀರ್ಮಾನಿಸಿತು. ಖಾಲಿ ಕೈಗಿಂತ ಓತ್ತಾಳೆ ಕಡಗ ವಾಸಿ ಎಂಬಂತೆ, ಕೇರಳ ಮುಂತಾದ ಅಕ್ಕಪಕ್ಕದ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯ ಸರ್ಕಾರ ಕ್ರಮ ತುಲನಾತ್ಮಕವಾಗಿ ಪರವಾಗಿಲ್ಲ ಎಂದೇ ಹೇಳಬೇಕಾಗುತ್ತದೆ. ಆದರೆ ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಇಲ್ಲಿ ಶುಲ್ಕ ಏರಿಕೆಗೆ ಸಮರ್ಥನೆಯೇ ಇರಲಿಲ್ಲ.

ಕೇಂದ್ರ ಸರ್ಕಾರದ ಹೊಣೆಗೇಡಿತನ

ಟಿ.ಎಂ.ಎ.ಪೈ ಪ್ರಕರಣದ ತೀರ್ಪಿನ ನಂತರ ಏನೆಲ್ಲಾ ಅಲ್ಲೋಲ ಕಲ್ಲೋಲಗಳಾದರೂ ಕೇಂದ್ರ ಸರ್ಕಾರ ಮಾತ್ರ ಕೊನೆಯ ಹಂತದವರೆಗೆ ಮುಗುಂ ಆಗಿ ಕುಳಿತಿತ್ತು. ಕರ್ನಾಟಕದಲ್ಲಿ ರಾಜ್ಯ ಸರ್ಕಾರ ಶೇ. 75/25 ಸೀಟು ಹಂಚಿಕೆ ಸೂತ್ರ, ಉಚಿತ ಪಾವತಿ ಸೀಟು ನೀತಿ, ಶುಲ್ಕ ಸ್ವರೂಪ ಪ್ರಕಟಿಸಿದ ಬೆನ್ನ ಹಿಂದೆಯೇ ಬಂತು ಕೇಂದ್ರದ ನಿರ್ದೇಶನ, ಏಕಸ್ವರೂಪದ ಶುಲ್ಕ ನಿಗದಿ ಮಾಡಿ ಎಂದು. ರಾಜ್ಯ ಸರ್ಕಾರ ಇದನ್ನು ಪ್ರತಿಭಟಿಸಬೇಕಿತ್ತು. ಪ್ರತಿಭಟಿಸಲಿಲ್ಲ. ಒಪ್ಪಿಕೊಂಡಿತು. ಒಂದು ಕೇಂದ್ರೀಯ ಶಾಸನದ ಮೂಲಕವೋ ಸುಗ್ರೀವಾಜ್ಞೆಯ ಮೂಲಕವೋ ವಿದ್ಯಾರ್ಥಿ ಪೋಷಕರ ಹಿತರಕ್ಷಣೆ ಮಾಡಬೇಕಾದ ಕೇಂದ್ರ ಸರ್ಕಾರವು ಉಳ್ಳವ, ಬಡವ, ದಲಿತ, ಶ್ರೀಮಂತ ಎಲ್ಲರಿಗೂ ಒಂದೇ ಸ್ವರೂಪ ಶುಲ್ಕ ಎನ್ನುವ ಏಕಸ್ವರೂಪ ನಿಗಧಿಗೆ ಆಜ್ಞೆ ನೀಡಿತು. ಖಾಸಗಿ ಆಡಳಿತ ಸಂಸ್ಥೆಗಳ ವಿರಾಟ್ ಸ್ವರೂಪದ ವಂತಿಗೆ ಲಾಬಿಯನ್ನು ಮಣಿಸಿ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವ ಉದ್ದೇಶ ಮತ್ತು ರಾಜಕೀಯ ಇಚ್ಛಾಶಕ್ತಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ತೋರಿಕೆಗಾದರೂ ಇಲ್ಲ ಎಂಬುದು ಸಾಬೀತಾಯಿತು.

ಸುಪ್ರೀಂಕೋರ್ಟ್ ತೀರ್ಪಿನ ಗೊಂದಲ-ವೈರುಧ್ಯಗಳು

ಈ ಮಧ್ಯೆ ರಾಜ್ಯದ 75/25 ಸೀಟು ಹಂಚಿಕೆ ನೀತಿಯನ್ನು ರಾಜ್ಯ ಹೈಕೋರ್ಟ್ ಸಹ ಎತ್ತಿ ಹಿಡಿದಿತ್ತು. ಜುಲೈ 2,2003 ರ ತನ್ನ ತೀರ್ಪಿನಲ್ಲಿ ಇದೇ ಸುಪ್ರಿಂಕೋರ್ಟ್ ಸಹ ಈ ನೀತಿಯನ್ನು ಎತ್ತಿಹಿಡಿದಿತ್ತು. ಈ ತೀರ್ಪಿನ ಆಧಾರದಲ್ಲಿ ರಾಜ್ಯದ ಸಿಇಟಿ ಪ್ರಕ್ರಿಯೆ ನಡೆದು ಬಹುತೇಕ ಸೀಟುಗಳು ಹಂಚಿಕೆಯಾಗಿರುವಾಗ ಶೇ.50/50 ಸೀಟು ಹಂಚಿಕೆ ನೀತಿಯ ಮತ್ತೊಂದು ತೀರ್ಪನ್ನು ಸುಪ್ರಿಂ ಕೋರ್ಟು ನೀಡಿತು. ಮೇಲಿಂದ ಮೇಲೆ ಗೊಂದಲಕಾರಿಯಾದ ತೀರ್ಪುಗಳನ್ನು ನೀಡುತ್ತಿರುವ ಸುಪ್ರಿಂಕೋರ್ಟ್ ಎತ್ತ ಸಾಗಿದೆ ಎಂಬ ಚಿಂತೆ ಪ್ರಜ್ಞಾವಂತರನ್ನು ಕಾಡತೊಡಗಿದೆ.

ಸುಪ್ರಿಂ ಕೋರ್ಟಿನ ತೀರ್ಪುಗಳು ಸ್ವಯಂ ವೈರುಧ್ಯದಿಂದ ಕೂಡಿವೆ. ಒಂದೆಡೆ ಸುಪ್ರಿಂ ಕೋರ್ಟ್ ಟಿಎಂಎಪೈ ಪ್ರಕರಣದಲ್ಲಿ ಆಗಸ್ಟ್ 14, 2003 ರ ತೀರ್ಪಿನಲ್ಲೂ ವೃತ್ತಿ ಶಿಕ್ಷಣದಲ್ಲಿ ಕ್ಯಾಪಿಟೇಷನ್ ಡೊನೇಷನನ್ನು ನಿಷೇಧಿಸಿದೆ. ಆದರೆ

ಪುಟ 10ಕ್ಕೆ...

ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕು ರಕ್ಷಣೆ ಅಗತ್ಯ


ಕಲಿವ ಉತ್ಸಾಹಕೆ ಅವಕಾಶ ಇನ್ನೆಲ್ಲಿ

SFI ಅಖಿಲ ಭಾರತ ಸಹ ಕಾರ್ಯದರ್ಶಿ ರಾಘೇಶ್ ಅವರೊಂದಿಗೆ ಸಂದರ್ಶನ
ಸಂದರ್ಶಕರು : ಯಶವಂತ SFI ರಾಜ್ಯ ಉಪಾಧ್ಯಕ್ಷರು


ಡಿಸೆಂಬರ್ 11ರ ಮುಷ್ಕರದ ಮಹತ್ವ ಏನು?

ರಾಘೇಶ್ : ಟಿ.ಎಂ.ಎ. ಪೈ ಕೇಸಿನಲ್ಲಿ ಸುಪ್ರಿಂ ಕೋರ್ಟ್ ತೀರ್ಪು ಹೊರಬಿದ್ದ ಮೇಲೆ, ವಿಶೇಷವಾಗಿ ವೃತ್ತಿ ಶಿಕ್ಷಣದ ವಲಯದೊಳಗೆ ಸಾಕಷ್ಟು ಗೊಂದಲ ಸೃಷ್ಟಿಯಾಗಿದೆ. ನ್ಯಾಯಾಲಯ ಪ್ರವೇಶಾತಿ ಹಾಗೂ ಶುಲ್ಕ ಸಂಗ್ರಹದ ವಿಷಯದಲ್ಲಿ ಸ್ವಯಂ ಹಣಕಾಸು ಸಂಸ್ಥೆಗಳ ಪರವಾಗಿ ನಿಂತಿದೆ. ಹಾಗಾಗಿ ವೃತ್ತಿ ಶಿಕ್ಷಣ ಕೇವಲ ಕೆಲವೇ ಪ್ರತಿಷ್ಠಿತರ ಸ್ವತ್ತಾಗಿದೆ. ಆ ಮೂಲಕ ನಮ್ಮ ದೇಶದ ವೃತ್ತಿಶಿಕ್ಷಣ ಆಕಾಂಕ್ಷಿ ವಿದ್ಯಾರ್ಥಿಗಳನ್ನು ನಿರ್ಲಕ್ಷಿಸಿದೆ.

ಸಮಾಜದ ಎಲ್ಲಾ ರೀತಿಯ ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯಲು ಸಮಾನ ಅವಕಾಶ ಇರಬೇಕು ಎಂದು ಎಸ್.ಎಫ್.ಐ. ಪ್ರತಿಪಾದಿಸುತ್ತದೆ. ಹಣ, ಮೆರಿಟ್ ಅಥವಾ ಶೈಕ್ಷಣಿಕ ಸಾಧನೆಗೆ ಎಂದೂ ಪರ್ಯಾಯು ಆಗಭಾರದು. ದುರದೃಷ್ಟವಶಾತ್ ತೀರ್ಪು ಬಂದ ಮೇಲೆ ಹಣಬಲವೇ ವಾಸ್ತವವಾಗಿದೆ. ಆದ್ದರಿಂದಲೇ ಸ್ವಯಂ ಹಣಕಾಸು ಸಂಸ್ಥೆಗಳ ಮೇಲೆ ನಿಯಂತ್ರಣ ಹೇರಲು ಬೇಕಾದ ಕಾನೂನು ರೂಪಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುವಂತೆ ಒಂದು ಕೇಂದ್ರಿಯ ಶಾಸನಕ್ಕೆ ಎಸ್.ಎಫ್.ಐ ಆಗ್ರಹಿಸುತ್ತಿದೆ. ಜೊತೆಗೆ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಾಷ್ಟ್ರಪಡಿಸಲು ಅಗತ್ಯ ಕ್ರಮಕೈಗೊಳ್ಳಲು ಒತ್ತಾಯಿಸುತ್ತಿದೆ.

ಟಿ.ಎಂ.ಎ.ಪೈ. ಕೇಸಿನ ಸುಪ್ರಿಂ ಕೋರ್ಟ್ ತೀರ್ಪು ಉನ್ನಿಕೃಷ್ಣನ್ ಕೇಸಿನ ತೀರ್ಪಿಗೆ ಸಂಪೂರ್ಣ ವಿರುದ್ಧವಾಗಿದೆ. ಒಂದೇ ವಿಷಯದ ಮೇಲೆ ಒಂದೇ ನ್ಯಾಯಾಲಯ ಕೇವಲ 10 ವರ್ಷಗಳ ಅವಧಿಯಲ್ಲಿ ಪರಸ್ಪರ ವಿರುದ್ಧವಾದ ತೀರ್ಪು ನೀಡಿದೆ. ಇದನ್ನು ನೀವು ಹೇಗೆ ಅಭಿಪ್ರಾಯಿಸುತ್ತೀರಿ?

ರಾಘೇಶ್ : ಟಿ.ಎಂ.ಎ. ಪೈ ಕೇಸಿನಲ್ಲಿ ಬಂದಿರುವ ಸುಪ್ರಿಂ ಕೋರ್ಟ್ ತೀರ್ಪು ನಮ್ಮ ದೇಶದ ನ್ಯಾಯಾಲಯುಗಳ ಗುಣ ಸ್ವಭಾವದಲ್ಲಾಗಿರುವ ಒಂದು ಸ್ಪಷ್ಟ ನೆಗೆತ. ಪ್ರಭುತ್ವವು ಕಲ್ಯಾಣ ಪ್ರಭುತ್ವ' ನೀತಿಗಳನ್ನು ಜಾರಿಮಾಡುತ್ತಿದ್ದ ಅಂದಿನ ಕಾಲದಲ್ಲಿಯೂ ಭಾರತ ಸರ್ಕಾರ ಕೆಲವು ಜನಪರ ನೀತಿಗಳೊಂದಿಗೆ ಬಂಡವಾಳಶಾಯಿ ಅಭಿವೃದ್ಧಿಯ ದಾರಿಯನ್ನು ಆಯ್ಕೆ ಮಾಡಿಕೊಂಡಿತು. ಆಗ ನ್ಯಾಯಾಲಯಗಳು ಕೂಡ ಜನಪರವಾದ ನಿಲುವುಗಳನ್ನು ತೆಗೆದುಕೊಂಡಿವೆ. ಉನ್ನಿಕೃಷ್ಣನ್ ತೀರ್ಪು ಸ್ವಯಂ ಹಣಕಾಸು ಸಂಸ್ಥೆಗಳ ಮೇಲೆ ಸ್ವಲ್ಪವಾದರೂ ಮಿತಿಯನ್ನು ಹಾಕಿದ್ದರಿಂದ ಹಣಬಲವನ್ನು ಹೊರತುಪಡಿಸಿ ವೃತ್ತಿ ಶಿಕ್ಷಣ ಪಡೆಯಲು ಎಲ್ಲರಿಗೂ ಸ್ವಲ್ಪವಾದರೂ ಅವಕಾಶ ಇತ್ತು ಪ್ರವೇಶ ಪಡೆಯಲು 'ಅಕಾಡೆಮಿಕ್ ಎಕ್ಸ್‌ಲೆನ್ಸಿ' ಯೇ ಮಾನದಂಡವಾಗಿತ್ತು. ಪ್ರಸ್ತುತ ತೀರ್ಪು ಸಾಮ್ರಾಜ್ಯಶಾಯಿ ಪ್ರತಿಬಿಂಬಿಸಿದೆ. ನ್ಯಾಯಾಲಯಗಳು 'ಯಾರೂ ವೃತ್ತಿ ಶಿಕ್ಷಣವನ್ನು ಬಯಸುತ್ತಾರೋ ಅವರು ಅದಕ್ಕೆ



ಹಣವನ್ನು ತೆರಬೇಕು ಎಂದು ಟಿಪ್ಪಣಿ ಕೊಡಮಾಡಿವೆ. ಇದು ಪ್ರಧಾನ ಮಂತ್ರಿ ಕಚೇರಿ ಪ್ರಕಟಿಸಿರುವ 'ಉಪಯೋಗ ಮತ್ತು ಪಾವತಿ' ತತ್ವವನ್ನು ಸಲಹೆ ಮಾಡಿದವರು ಬಿರ್ಲಾ' ಸಮಿತಿಯ ವರದಿಯ ಪುನರುಚ್ಚಾರವೇ ಆಗಿದೆ.

ವೃತ್ತಿ ಶಿಕ್ಷಣದಲ್ಲಿ ಉಂಟಾಗಿರುವ ಬಿಕ್ಕಟ್ಟಿಗೆ ಸುಪ್ರಿಂಕೋರ್ಟ್ ಹೊಣೆಯೋ ಅಥವಾ ಸರ್ಕಾರ ಹೊಣೆಯೋ.?

ರಾಘೇಶ್ : ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನೀತಿಗಳನ್ನು ನಿರ್ಧಾರ ಮಾಡುವುದು ಕೋರ್ಟುಗಳು ಅಲ್ಲ. ನೀತಿಗಳನ್ನು ಸಂಬಂದಪಟ್ಟ ಸರ್ಕಾರಗಳು ನಿರ್ಧಾರ ಮಾಡಬೇಕು ಅಂದರೆ ನೀತಿಗಳನ್ನು ನಿರ್ಧರಿಸಲು ಶಾಸನಗಳನ್ನು ರೂಪಿಸುವುದು ಸಂಸತ್ತು ಮತ್ತು ರಾಜ್ಯ ಶಾಸನ ಸಭೆಗಳು.

ಕೋರ್ಟ್ ತೀರ್ಪಿನಿಂದ ಉಂಟಾಗಿರುವ ವೃತ್ತಿ ಶಿಕ್ಷಣದ ಬಿಕ್ಕಟ್ಟಿಗೆ ಯಾವ ಪರಿಹಾರವನ್ನು ನೀವು ಸೂಚಿಸುತ್ತೀರಿ?

ರಾಘೇಶ್ : ಇರುವುದು ಒಂದೇ ಪರಿಹಾರ. ಅದು ಸ್ವಯಂ ಹಣಕಾಸು ಸಂಸ್ಥೆಗಳ ಮೇಲೆ ನಿಯಂತ್ರಣ ಹೇರಲು ರಾಜ್ಯಗಳಿಗೆ ಬೇಕಾದ ಕಾನೂನು ರೂಪಿಸಲು ಕೇಂದ್ರೀಯ ಶಾಸನ ಜಾರಿಗೆ ತರುವುದು ಜೊತೆಗೆ ಬಡ ಮತ್ತು ಆರ್ಥಿಕವಾಗಿ ಹಿಂದುಳಿದ ವಿಭಾಗಗಳ ಪ್ರವೇಶವನ್ನು ಖಾತರಿಪಡಿಸಬೇಕು. ಹಾಗಾಗಿ ಒಂದು ಸಮಗ್ರ, ಅಗತ್ಯ ಕೇಂದ್ರಿಯ ಶಾಸನ ಅಂಗೀಕರಿಸುವುದೇ ಈ ಬಿಕ್ಕಟ್ಟು ಪರಿಹಾರ ಆಗಲು ಇರುವ ಮಾರ್ಗ.


ಕೇಂದ್ರ ಸರ್ಕಾರ ಮತ್ತು ವಿವಿಧ ರಾಜ್ಯ ಸರ್ಕಾರಗಳು ತೀರ್ಪನ್ನು ನೆಪಮಾಡಿಕೊಂಡು ನ್ಯಾಯಾಂಗದ ಕಡೆಗೆ ಬೊಟ್ಟು ತೋರಿಸುತ್ತಿವೆ ಹಾಗೂ ಈ ಸರ್ಕಾರಗಳು ಶಿಕ್ಷಣವನ್ನು ವ್ಯಾಪಾರೀಕರಣ ಗೊಳಿಸುವ ಇಚ್ಛೆ ಇಟ್ಟುಕೊಂಡ ತಮ್ಮ ಹೊಣೆಯಿಂದ ತಪ್ಪಿಸಿಕೊಳ್ಳುತ್ತಿವೆ.

ನೆನಪುಗಳು

1964 ರ ನಂತರದಲ್ಲಿ....

1964-65 ರಲ್ಲಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧಿವೇಶನ ಮುಂಬಾಯಿಯಲ್ಲಿ ಜರುಗಿತು. ಈ ಸಮ್ಮೇಳನದಲ್ಲಿ ಹಂಚಿನ ಕಾರ್ಮಿಕರ ಸಂಘದ ಪ್ರತಿನಿಧಿಯಾಗಿ ನಾನು ಭಾಗವಹಿಸಿದೆ. ಪಶ್ಚಿಮ ಬಂಗಾಳ ಮತ್ತು ಕೇರಳದಿಂದ ದೊಡ್ಡ ತಂಡಗಳು ಬಂದಿದ್ದವು. ಮುಂಬಯಿಯ ಪತ್ರಿಕೆಗಳಲ್ಲಿ ಇದು ದೊಡ್ಡ ಸುದ್ದಿಯಾಗಿ ಪ್ರಕಟಗೊಂಡಿತು. ಸಮ್ಮೇಳನ ಒಂದು ಹೈಸ್ಕೂಲ್‌ನಲ್ಲಿ ನಡೆಯಿತು. ಸಿ.ಪಿ.ಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಪಿ.ಸುಂದರಯ್ಯನವರು ಮತ್ತಿತರ ವಿವಿಧ ಭಾಗಗಳ ಪಕ್ಷದ ಅನೇಕ ಮುಖಂಡರು ಅಧಿವೇಶನದ ನಿಮಿತ್ತ ಮುಂಬಾಯಿಗೆ ಬಂದಿದ್ದ ಸಂದರ್ಭವನ್ನು ಮುಂಬಾಯಿಯ ನಮ್ಮ ಪಕ್ಷದ ಘಟಕ ಸದುಪಯೋಗಪಡಿಸಿಕೊಂಡಿತು. ಅನೇಕ ಕಡೆಗಳಲ್ಲಿ ಮುಂಬಾಯಿ ನಗರದ ಒಳಗಡೆ ರಾತ್ರಿ ಗಂಟೆ 9.30 ರಿಂದ ಬಹಿರಂಗ ಸಭೆಗಳನ್ನು ನಡೆಸುವ ಮೂಲಕ ಕಾಂ.ಪಿ.ಸುಂದರಯ್ಯನವರು ಸೇರಿದಂತೆ ಅನೇಕ ಮುಂದಾಳುಗಳು ಭಾಷಣ ಮಾಡಿದ್ದರು. ವರ್ಲಿ, ದಾದರ್, ಮಾಟುಂಗ, ಕುರ್ಲಾ ಚೆಂಬೂರ್, ಠಾಣಾಗಳಲ್ಲಿ ಸಭೆಗಳನ್ನು ನಡೆಸಲಾಗಿತ್ತು. ಈ ಎಲ್ಲಾ ಸಭೆಗಳಲ್ಲಿ ಭಾಗವಹಿಸಿ ಮುಖಂಡರ ಭಾಷಣ ಆಲಿಸಿದೆ. ರಾತ್ರಿ 11-12 ಗಂಟೆಗೆ ಕ್ಯಾಂಪಿಗೆ ಮರಳುತ್ತಿದ್ದೆ. ವಿವರಕ್ಕೆ ಹೋಗದೆ ಇದ್ದರೂ, ಮಾಟುಂಗದ ನೆಪ್ಲೂಗಾರ್ಡನಿನಲ್ಲಿ ಸೇರಿದ ಸಭೆಯಲ್ಲಿ ಕಾಂ.ಪಿ.ಸುಂದರಯ್ಯ ಮಾತನಾಡುತ್ತಾ "ಕಾರ್ಮಿಕ ಚಳುವಳಿಗೆ ದ್ರೋಹ ಯಾವ ರೀತಿ ನಡೆದಿದೆ. ಪಕ್ಷದ ಕ್ರಾಂತಿಕಾರಿ ಪರಂಪರೆಯನ್ನು ಪರಿಷ್ಕರಣವಾದ, ಸುಧಾರಣಾವಾದದಿಂದ ರಕ್ಷಿಸಬೇಕಾಗಿದೆ. ಆದರೂ ಕೂಡಾ ಅನೇಕ ತೊಂದರೆಗಳನ್ನು ಅನುಭವಿಸಬೇಕಾಗಿ ಬಂದರೂ ಕೂಡಾ ಇಂದಿನ ಪರಿಸ್ಥಿತಿಯಲ್ಲಿ ಕಾರ್ಮಿಕ ಚಳುವಳಿಯಲ್ಲಿ ಐಕ್ಯತೆಯನ್ನು ಎ.ಐ.ಟಿ.ಯು.ಸಿ. ಯಲ್ಲಿಕಾಪಾಡಬೇಕೆಂಬ ನಿಲುಮೆಗೆ ಬದ್ಧರಾಗುತ್ತೇವೆ. ಇದು ನಮ್ಮನ್ನು ಮಾತ್ರವೇ ಹೊಂದಿಕೊಂಡಿಲ್ಲ. ಆದರೂ ಪ್ರಯತ್ನ ನಡೆಸುತ್ತೇವೆಂದು ತಿಳಿಸಿದರು. 1970 ರವರೆಗೆ ಬಹಳ ಕಷ್ಟದಲ್ಲಿ ಇದನ್ನು ಮುಂದುವರಿಸಲಾಯಿತು. ಸರಕಾರದ ಯಾವ ಸಮಿತಿಗಳಲ್ಲಿಯೂ ಕೂಡಾ ನಮಗೆ ಪ್ರಾತಿನಿಧ್ಯ ಸಿಗದಂತೆ ನೋಡಿ ಕೊಳ್ಳಲಾಯಿತು. ಮಾತ್ರವಲ್ಲ ಅಂತಾರಾಷ್ಟ್ರೀಯ ನಿಯೋಗಗಳಲ್ಲಿ ನಮ್ಮವರನ್ನು ಬೇಕೆಂದೇ ಕೈಬಿಟ್ಟ ಸಂದರ್ಭಗಳು ಹಲವಾರು ಬಾರಿ ಎದುರಾಯಿತು.

ಮುಂದುವರಿಸುತ್ತಾ ಕಾಂ.ಸುಂದರಯ್ಯ "ಅಂತಾರಾಷ್ಟ್ರೀಯ ಸೋದರ ಕಮ್ಯುನಿಸ್ಟ್ ಪಕ್ಷಗಳಿಂದ ನಮಗೆ ಇಂದು ಮಾನ್ಯತೆ ಇಲ್ಲದೆ ಇರಬಹುದು. ಆದರೆ ಭಾರತದ ಜನತೆಯ 'ಕಾರ್ಮಿಕ ವರ್ಗದ' ಮಾನ್ಯತೆಯನ್ನು ಇವರಾರು ತಡೆಯುವಂತಿಲ್ಲ. ಮಾರ್ಕ್ಸ್‌ವಾದ ಲೆನಿನವಾದವನ್ನು ಭಾರತದ ಮಣ್ಣಿನಲ್ಲಿ ಸರಿಯಾಗಿ ಕೃಷಿ ಮಾಡಿ ಪಕ್ಷವನ್ನು ಕಟ್ಟಿ ಬೆಳೆಸುತ್ತೇವೆ ಎಂಬ ನಂಬಿಕೆ ನಮಗೆ ಇದೆ. ಹೋರಾಟದ ಕ್ರಾಂತಿಕಾರಿ ಪರಂಪರೆಯನ್ನು ಮುಂದಕ್ಕೊಯ್ಯುವುದೇ ನಮ್ಮ ಗುರಿ" ಎಂದು ತಿಳಿಸಿದರು. ಈ ಮಾತು ಮುಂದಕ್ಕೆ 10-15 ವರ್ಷಗಳ ನಂತರ ಬಹಳ ಸರಿಯಾದುದೆಂದು ಸ್ಪಷ್ಟವಾಯಿತು. 1980-90 ರ ದಶಕದಲ್ಲಿ, 1975-1977 ರಲ್ಲಿ ತುರ್ತು ಪರಿಸ್ಥಿತಿ ಹೇರಲ್ಪಟ್ಟಾಗ ನಮ್ಮ ಪಕ್ಷವಹಿಸಿದ ಸರಿಯಾದ ನಿಲುಮೆಯಿಂದಾಗಿ 1977 ರಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ನಮ್ಮ ಪಕ್ಷ ಪ್ರಬಲ ಪ್ರತಿಪಕ್ಷವಾಗಿ ಮೂಡಿಬಂದು. 22 ಸ್ಥಾನಗಳನ್ನು ಗಳಿಸಿದ್ದು ಮಾತ್ರವಲ್ಲ. 4.3 ಶೇಕಡಾ ಮತಗಳನ್ನು ಗಳಿಸಲು ಶಕ್ತವಾಯಿತು.



ಡೇವಿಡ್ ಕರ್ಕಡ, ಉಡುಪಿ

ನಂತರದಲ್ಲಿ ಸೋದರ ಕಮ್ಯುನಿಸ್ಟ್ ಪಕ್ಷಗಳು ನಮ್ಮ ಪಕ್ಷದ ಜೊತೆ ಮಾತುಕತೆ ನಡೆಸಲು ಪ್ರಾರಂಭಿಸಿದವು, ಮಾತ್ರವಲ್ಲ ಅವರ ಅಧಿವೇಶನಗಳಿಗೆ ಕರೆ ನೀಡಿ ಆಮಂತ್ರಿಸಿದರು. ನಮ್ಮ ಪಕ್ಷ ಭಾಗವಹಿಸಿತು ಕೂಡಾ. ನಮ್ಮನ್ನು ದೂಷಿಸಲಾದ ಜನರ ಮಧ್ಯೆ ಕೂಡಾ ನಾವು ಭಾರತದ ನಿಜವಾದ ದೇಶಪ್ರೇಮಿಗಳಾಗಿದ್ದೇವೆ ಎಂಬುದನ್ನು ನಮ್ಮ ವಿರೋಧಿಗಳೂ ತಿಳಿಯುವಂತಾಯಿತು.

1965 ರಲ್ಲಿ ಕೇರಳದಲ್ಲಿ ನಡೆದ ಮಧ್ಯಕಾಲೀನ ಚುನಾವಣೆಯಲ್ಲಿ ನಮ್ಮ ಪಕ್ಷಕ್ಕೆ 40 ಸ್ಥಾನಗಳು ದೊರೆತರೆ ಸಿಪಿಐ ಪಕ್ಷವು ಕೇವಲ 3 ಸ್ಥಾನಗಳನ್ನು ಗಳಿಸಿತು. ಇದರಿಂದಾಗಿ ಕಾಂ.ಪಿ.ಸುಂದರಯ್ಯ ಮುಂಬಾಯಿಯ ಮಾಟುಂಗದ ಸಭೆಯಲ್ಲಿ ಹೇಳಿದ ಮಾತು ವಸ್ತುಶಃ ಸರಿಯೆನಿಸಿತು.

1964 ರ ನಂತರದಲ್ಲಿ ನಮ್ಮ ಜಿಲ್ಲೆಯ ಉನ್ನತ ಮಟ್ಟದ ನಾಯಕರಲ್ಲಿ ಎಲ್ಲರೂ ಸಿ.ಪಿ.ಐ.ನಲ್ಲಿ ಉಳಿದರು-ನಮ್ಮ ಪಕ್ಷದ ಜೊತೆ ಬಂದವರೆಂದರೆ ಕೇವಲ ಕಾಂ.ಎಂ.ಎಚ್.ಕೃಷ್ಣಪ್ಪ ಮಾತ್ರ ನಮ್ಮ ಜತೆಗುಳಿದರು. ನಾವೆಲ್ಲರೂ ಕಾರ್ಮಿಕ ವರ್ಗದಿಂದ ಬೆಳೆದುಬಂದ ಕಾರ್ಯಕರ್ತರು ಮಾತ್ರವೇ ಆಗಿ ಮುಂದುವರಿದವರಾಗಿದ್ದವು. ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿ ಅದುವರೆಗೆ ಉಪಾಧ್ಯಾಯರಾಗಿದ್ದು ಕೊಂಡು ಪಕ್ಷದಲ್ಲಿ ಕೆಲಸ ಮಾಡಿಕೊಂಡಿದ್ದ ಕಾಂ.ಪಿ.ರಾಮಚಂದ್ರರಾಯರು ಪೂರ್ಣಕಾಲದ ಕಾರ್ಯಕರ್ತರಾಗಿ ಬರಲು ನಿರ್ಧರಿಸಿ, ಅಧ್ಯಾಪಕ ಕೆಲಸಕ್ಕೆ ರಾಜಿನಾಮೆ ಕೊಟ್ಟು ಪಕ್ಷದಲ್ಲಿ ತ್ಯಾಗ ಮಾಡಲು ಮುಂದೆ ಬಂದರು. ಇನ್ನೊಬ್ಬ ಸಂಗಾತಿಯೆಂದರೆ ಕಾಂ.ಕೆ.ಆರ್. ಶ್ರೀಯಾನರು. ಈ ಕೊರತೆ ತುಂಬಲು ಬಹಳ ಕಾಲದವರೆಗೆ ನಮಗೆ ಸಾಧ್ಯವಾಗಲಾರದೆಂದು ತಿಳಿದಿದ್ದೆವು. ಆ ಕೊರತೆಯ ಮಧ್ಯದಲ್ಲಿಯೂ ಕಾರ್ಮಿಕ ವರ್ಗದ ನಿಷ್ಠಾವಂತರಾದ ಕಾಂ.ಗಳಾದ ಬಿ.ಕೊರಗಪ್ಪ ರೈ., ಬಿ.ನಾರಾಯಣ, ಎ.ಕೆ.ನಾರಾಯಣ, ಬಿ.ಚೆನ್ನಯ್ಯ, ಕೆ.ಪೂವಪ್ಪ ಸಾಲಿಯಾನ್, ವಾಮನ ಕೊಡಿಯಾಲ್ ಬೈಲ್, ಕೊನೆಯಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದರೂ ಧೃಡ ನಿರ್ಧಾರಕ್ಕೆ ಬಂದ ಕಾಂ.ಎ.ಕೃಷ್ಣಶೆಟ್ಟರು ನಮ್ಮ ಜತೆ ಉಳಿದು ಮಾರ್ಗದರ್ಶನ ನೀಡಿದರು.

1967 ರಲ್ಲಿ ಒಂದು ಬಾರಿ ನಾನು ಹೈಕೋರ್ಟಿನಲ್ಲಿ ಸಾಕ್ಷಿ ಹೇಳಲು ಬೆಂಗಳೂರಿಗೆ ಹೋಗಬೇಕಾಯಿತು. ಸಾಕ್ಷಿಗಳಾಗಿ ಸುಮಾರು 30 ಮಂದಿ ಬಂದಿದ್ದರು. ಉಡುಪಿಯ ಪಾಂಗಾಳ ನಾಯರ್ ಮನೆತನದ, ಸ್ವಾತಂತ್ರ್ಯ ಹೋರಾಟದ ಚಳುವಳಿಯ ಮುಖಂಡರಾಗಿದ್ದ ಯು.ಶ್ರೀನಿವಾಸ್ ನಾಯಕರು ನನ್ನನ್ನು ಬೆಂಗಳೂರಿನ ಹೈಕೋರ್ಟಿನ ಸುಪ್ರಸಿದ್ದ ವಕೀಲರಾಗಿದ್ದ ಸ್ವಾತಂತ್ರ್ಯ ಹೋರಾಟಗಾರರೂ ಮದ್ರಾಸಿನಲ್ಲಿ ಕಂದಾಯ ಮಂತ್ರಿಯೂ ಆಗಿದ್ದ ಕೋಟ ರಾಮಕೃಷ್ಣ ಕಾರಂತರಿಗೆ ಪರಿಚಯ ಮಾಡಿ ಕೊಡುವಾಗ ಸಮಾಜವಾದಿ ಪರಂಪರೆಯ ಆ ಹಿರಿಯ ಚೇತನ ಹೇಳಿದ ಮಾತು ನನಗೆ ಇಂದಿಗೂ ಕಿವಿಯಲ್ಲಿ ಗುನುಗುನಿಸುತ್ತಿದೆ.

ಎಲ್ಲರ ಪರಿಚಯವಾಗಿ ನನ್ನ ಸರದಿ ಬಂದಾಗ ಉಪೇಂದ್ರ ನಾಯಕರು ಇವರು ಡೇವಿಡ್ ಎ.ಕರ್ಕಡ ಸಿಪಿಐ(ಎಂ) ಪಕ್ಷದ ಉಡುಪಿ ತಾಲೂಕು ಕಾರ್ಯದರ್ಶಿ ಎಂಬುದಾಗಿ ಪರಿಚಯಿಸಿದಾಗ ಕಾರಂತರು ಕೂಡಲೇ ಪ್ರತಿಕ್ರಿಯೆಯನ್ನು ಈ ರೀತಿಯಾಗಿ ವ್ಯಕ್ತಪಡಿಸಿದರು. "ಓ ಇವರು ನಾಳೆ ನಮ್ಮನ್ನು ಆಳುವವರು" ಎಂದು ಹೇಳಿ ಅಲ್ಲಿ ಸೇರಿದ್ದ 20 ರಷ್ಟು ಮಂದಿ ರೈತರು ಮತ್ತಿತರರಿಗೆ ನನ್ನನ್ನು ತೋರಿಸುತ್ತಾ "ರೈತರಾದ ನಿಮ್ಮ ಹಿತಪ... ರಕ್ಷಿಸಬೇಕಾದವರು, ಕಾಪಾಡುವವರು ಇವರ ಪಕ್ಷ... ಮಾತ್ರವೇ ಆಗಿರುತ್ತದೆ" ಎಂದರು. ನಾ... ಸೇರಿರುವ ಪಕ್ಷದ ಬಗ್ಗೆ ನನಗೆ ಬಹಳ ಹೆಮ್ಮೆ... ಎನಿಸಿತು. ನನ್ನ ಜೀವನ ಸಾರ್ಥಕವೆನಿಸಿತು. ಶ್ರೀ... ರಾಮಕೃಷ್ಣ ಕಾರಂತರ ಬಗ್ಗೆ ಇಂದಿನ ಪೀಳಿಗೆಗೆ ಎಷ್ಟು... ಗೊತ್ತಿದೆಯೋ ನನಗೆ ತಿಳಿಯದು. ಅವರು... ಸುಪ್ರಸಿದ್ದ ಕನ್ನಡ ಬರಹಗಾರರಾಗಿದ್ದ ಶ್ರೀ ಶಿವರಾಮ... ಕಾರಂತರ ಅಣ್ಣ ಆಗಿದ್ದರು. 1980 ರವರೆಗೆ ಅವರು... ಹೇಳಿದ ಮಾತು ಸರಿಯಾಗಿತ್ತು. ಒಂದು ಪೀಳಿಗೆ... ಗತಿಸಿದ ನಂತರ ಬಂದ ಹೊಸ ಪೀಳಿಗೆಯ ಜನರಿಗೆ... ಪರಿಷ್ಕರಣವಾದದ, ಸುಧಾರಣಾವಾದದ... ಎಡಪಂಥೀಯ ಸಾಹಸವಾದದ ಅರಿವು... ಎಷ್ಟುಮಟ್ಟಿಗೆ ಇದೆಯೆಂದು ಹೇಳಲು ಸಾಧ್ಯವಿಲ್ಲ... ಆದರೆ ಹಲವರು ಹೊಸ ಪೀಳಿಗೆಯ ಮುಂದಾಳು... ಗಳು ಇದೆಲ್ಲವನ್ನು ಸರಿಯಾಗಿಯೇ ತಿಳಿದು... ಕೊಂಡಿದ್ದಾರೆ ಎನ್ನುವುದು ಬಹಳ ಸಂತೋಷದ... ವಿಷಯ.

ಕೈಗನ್ನಡಿ

ನಮ್ಮ ಕೇಂದ್ರ ಸಮಿತಿ ಕಾಲಕಾಲ... ಪ್ರಕಟಪಡಿಸಿರುವ ದಸ್ತಾವೇಜುಗಳ... ಮಹತ್ವವನ್ನು ನಮ್ಮ ಹೊಸ ಪೀಳಿಗೆಯ... ಸಂಗಾತಿಗಳೂ ಕೂಡ ಎಷ್ಟು ಹೆಚ್ಚು ಅಭ್ಯಾಸ... ಮಾಡಿದರೆ ಅವರ ಜೀವನದಲ್ಲಿ ಅದೊಂದು... ಕೈಗನ್ನಡಿಯಾಗಬಹುದು. ಮುಖ್ಯವಾ... ಬರ್ಧ್ವಾನ್ ಪ್ಲೀನಂ ಮತ್ತು ಸಾಲ್ಕಿಯಾ ಪ್ಲೀನಂ ... ಮಹತ್ವಪೂರ್ಣ ಸಂಘಟನಾ ಭಾಗದ... ನಿರ್ಣ...ು ಪ್ರಮುಖ ಸ್ಥಾನ ಪಡೆಯುತ್ತದೆ... ...ಮ್ಮ ಕೆಳಹಂತದ ಕಾರ್ಯಕರ್ತರು ... ದಸ್ತಾ... ...ಗಳ ಮೂಲಕ ತಮ್ಮನ್ನು ಓರೆ... ಹಚ್ಚಿಕೊಂಡರೆ ಸ್ವಯಂ ವಿಮರ್ಶೆಗೆ ಮುಂದಾದರೆ... ನಮ್ಮ ಪಕ್ಷದ ಬೆಳವಣಿಗೆ ಖಂಡಿ... ಸಹಾಯವಾಗುತ್ತದೆ.

ಪಕ್ಷದ ಮಹಾಧಿವೇಶನ, ಹಲವು ಸಮ್ಮೇಳನಗಳಲ್ಲಿ...

ನನ್ನ ಜೀವನದ ಮುಖ್ಯ ಘಟನೆಗಳಲ್ಲಿ 1953 ದಶಂಬರದಲ್ಲಿ ಬೆಂಗಳೂರಿನಲ್ಲಿ ಸೇರಿದ ಪಕ್ಷದ 3ನೇ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ನಾನು ಭಾಗವಹಿಸಿದೆ. ನಂತರದಲ್ಲಿ 4ನೇ ಸಮ್ಮೇಳನ ದಾವಣಗೆರೆಯಲ್ಲಿ, 5ನೇ ಮಂಗಳೂರು ಹಾಗೆ ನಂತರದಲ್ಲಿ ಸೇರಿದ ಎಲ್ಲಾ ರಾಜ್ಯ ಸಮ್ಮೇಳನಗಳಲ್ಲಿ ಒಂದೆರಡು ಅನಾರೋಗ್ಯದ ಕಾರಣ ಭಾಗವಹಿಸದಿರ ಬಹುದು. ಮೈಸೂರಿನಲ್ಲಿ ಬರ್ಧ್ವಾನ್ ಪ್ಲೀನಂ ಮಾಡಲು ಮತ್ತು ಸಾಲ್ಕಿಯಾ ಪ್ಲೀನಂ ಮೊದಲು ಸೇರಿದ 2 ರಾಜ್ಯಮಟ್ಟದ ಪ್ಲೀನಂಗಳಲ್ಲಿ ಭಾಗವಹಿಸಿದ್ದೇನೆ. 1978 ರಲ್ಲಿ ಮದ್ರಾಸಿನಲ್ಲಿ ಸೇರಿದ ಸಿ.ಐ.ಟಿ.ಯು ಸಮ್ಮೇಳನ, ದುಡಿಯುವ ಮಹಿಳೆಯರ ಸಮ್ಮೇಳನದಲ್ಲಿ ನನ್ನ ಪತ್ನಿಯೂ ಭಾಗವಹಿಸಿದ್ದೇವೆ. 1995 ರಲ್ಲಿ ಪ್ರಥಮ ಬಾರಿಗೆ ಪಂಜಾಬಿನ ಚಂಡೀಗಡದಲ್ಲಿ ಸೇರಿದ ಪಕ್ಷದ 15ನೇ ಅಧಿವೇಶನದಲ್ಲಿ ವೀಕ್ಷಕನಾಗಿ ನಾನು ಭಾಗವಹಿಸಿದ್ದು ಮಾತ್ರ ನನ್ನ ಜೀವನದ ಮುಖ್ಯ ಘಟನೆಯಾಗಿದೆ. ಈ ಭಾಗಗಳಲ್ಲಿ ಉಡುಪಿಯಿಂದ ಭಾಗವಹಿಸಿದ (ಇದುವರೆಗೆ) ಪ್ರಮುಖ ಕಾರ್ಯಕರ್ತನಾಗಿದ್ದೇನೆಂಬ ಸಂತೋಷವಿದೆ. ಕೆ.ಜಿ.ಎಫ್.ನಲ್ಲಿ ಸೇರಿದ 1956 ರ ಎ.ಐ.ಟಿ.ಯು.ಸಿ ಸಮ್ಮೇಳನದಲ್ಲಿ ಅಂದಿನ ರಾಜ್ಯಸಮಿತಿ ಸದಸ್ಯರಾಗಿ ಚುನಾಯಿತನಾದೆ. 1977 ರಲ್ಲಿ ರಾಜ್ಯಬೀಡಿ ಕಾರ್ಮಿಕರ ಸಮ್ಮೇಳನದಲ್ಲಿ ಅಂದಿನ ರಾಜ್ಯ ಬೀಡಿ ಫೆಡರೇಷನ್‌ನ ಕಮಿಟಿಗೆ ಆರಿಸಲ್ಪಟ್ಟಿದ್ದೆ. ಅದರಿಂದಾಗಿ ನನ್ನ ನೆನಪುಗಳಲ್ಲಿ ಕೆಲವು ಮಾಸದೆ ಉಳಿದಿದೆ.

ಪುಟ 9 ರಿಂದ...

ವೃತ್ತಿ ಶಿಕ್ಷಣ....

ಶುಲ್ಕ ನಿಗದಿಪಡಿಸುವ ಹಕ್ಕನ್ನು ಆಯಾಯ ಶಿಕ್ಷಣ ಸಂಸ್ಥೆಗೆ ನೀಡಿದೆ. ಆಯಾಯ ಶಿಕ್ಷಣ ಸಂಸ್ಥೆಗಳ ಮೂಲಭೂತ ಸೌಕರ್ಯ, ಶಿಕ್ಷಕರ, ಸಿಬ್ಬಂದಿಗಳ ವೇತನ, ಸಂಸ್ಥೆಯ ಭವಿಷ್ಯದ ಯೋಜನೆ ಮುಂತಾದವುಗಳನ್ನು ಆಧರಿಸಿ ಶುಲ್ಕ ನಿಗದಿಪಡಿಸಬಹುದು ಎಂದಿದೆ. ಅಂದರೆ ಒಂದೊಂದು ಕಾಲೇಜಿಗೂ ಒಂದೊಂದು ಶುಲ್ಕ ಸ್ವರೂಪ. ಶುಲ್ಕ ಸ್ವರೂಪ ನಿಗದಿಪಡಿಸಲು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿಯನ್ನು ನೇಮಿಸಬೇಕೆಂದಿದೆ ಕೋರ್ಟು. ಈ ಸಮಿತಿಯ ನಿವೃತ್ತ, ನ್ಯಾಯಾಧೀಶರು ಮತ್ತು ಸರ್ಕಾರದ ಶಿಕ್ಷಣ ಇಲಾಖೆಗಳ ಅಧಿಕಾರಿಗಳಿಗೆ, ದೇಶದ ಜನತೆಗೆ ಉತ್ತರಿಸಬೇಕಾದ ಉತ್ತರದಾಯಿತ್ವವಿ ದೆಯೇ? ಈ ಸಮಿತಿ ಜನಪರ ಕಾಳಜಿವಹಿಸಲು ಇರುವ ಸಾಮಾಜಿಕ ಒತ್ತಡವಾದರೂ ಏನು ಎಂಬ ಪ್ರಶ್ನೆ ಈಗ ಉದ್ಭವಿಸಿದೆ.

ಸುಪ್ರಿಂ ಕೋರ್ಟ್ ಇತ್ತೀಚಿನ ತೀರ್ಪಿನಲ್ಲಿ ದಲಿತ, ಹಿಂದುಳಿದ ಸಮುದಾಯಗಳಿಗೆ ಆದ್ಯತೆ ನೀಡಬೇಕು ಎಂದಿದೆ. ಈ ನೀತಿಯ ಆಧಾರದಲ್ಲಿಯೇ ಉಚಿತ ಪಾವತಿ ಸೀಟು ಪದ್ಧತಿ ಆರಂಭವಾಗಿದೆ. ಆದರೆ ಈ ಅಡ್ಡ ಸಹಾಯಧನದ ಪರಿಕಲ್ಪನೆಯನ್ನೇ ಕೋರ್ಟಿನ ಇತ್ತೀಚಿನ ಆಗಸ್ಟ್ 14, 2003 ರ ತೀರ್ಪು ಸಹ ನಿರಾಕರಿಸಿದೆ. ಒಮ್ಮೆ ವೃತ್ತಿ ಶಿಕ್ಷಣಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಯು ಆ ಶಿಕ್ಷಣ ಸಂಸ್ಥೆಗೆ ನಾಲ್ಕು ವರ್ಷಗಳ ಶುಲ್ಕ ತೆರಲು ಬದ್ಧ ಎಂದು ಬೇರೆ ತೀರ್ಪು ನೀಡಿ ಹೊಸ ಆತಂಕ ಸೃಷ್ಟಿಸಿದೆ.

ಸಮಸ್ಯೆಗೆ ಶಾಶ್ವತ ಪರಿಹಾರ ರೂಪಿಸುವತ್ತ

ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸಹ ಒಂದು ಸಾಮಾಜಿಕ ಬದ್ದತೆ ಇದೆ. ಒಟ್ಟು ಸಮಾಜದ ಹಿತದೃಷ್ಟಿಯಿಂದ ಇವುಗಳ ಪ್ರವೇಶ ನೀತಿ, ಶುಲ್ಕ ಸ್ವರೂಪ ನಿಯಂತ್ರಿಸಲು ಚುನಾಯಿತ ಸರ್ಕಾರಗಳಿಗೆ ಹಕ್ಕಿದೆ ಎಂದು ಹಾಗೂ ಸಾಮಾಜಿಕ ನ್ಯಾಯ, ಅದನ್ನು ಆಧರಿಸಿದ ಅಡ್ಡ ಸಹಾಯಧನ ನೀತಿಯನ್ನು ಒಪ್ಪುವುದು ಮತ್ತು ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಸಾಮಾಜಿಕ ನಿಯಂತ್ರಣಕ್ಕೆ ಪೂರಕವಾಗಿ ಕೇಂದ್ರ ಸರ್ಕಾರ ಒಂದು ಕೇಂದ್ರೀಯ ಶಾಸನವನ್ನು ರೂಪಿಸುವುದು ಈ ಸಮಸ್ಯೆ ಸದ್ಯದ ಏಕೈಕ ಪರಿಹಾರವಾಗಿದೆ. ಈ ನಿಟ್ಟಿನಲ್ಲಿ ತಕ್ಷಣ ಸರ್ಕಾರ ಸುಗ್ರೀವಾಜ್ಞೆಯನ್ನು ಹೊರಡಿಸಬೇಕೆಂದು ವಿದ್ಯಾರ್ಥಿ ಸಂಘಟನೆಗಳು ಒತ್ತಾಯಿಸಿ ಚಳುವಳಿ ನಡೆಸಿವೆ. ಕೇಂದ್ರ ಸರ್ಕಾರಕ್ಕೆ ಇಂತಹ ಇಚ್ಛಾಶಕ್ತಿ ಇದೆಯೇ ಎಂಬುದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ.

ವಿದ್ಯಾರ್ಥಿ- ಪೋಷಕರ ಮತ್ತು ಶಿಕ್ಷಣ ಪ್ರೇಮಿಗಳ ಬೃಹತ್ ಚಳುವಳಿ ಮಾತ್ರವೇ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಏಕೈಕ ದಾರಿಯಾಗಿದೆ. ಡಿಸೆಂಬರ್ 11,2003 ರ ಚಾರಿತ್ರಿಕ 'ಅಖಿಲ ಭಾರತ ಶೈಕ್ಷಣಿಕ ಬಂದ್' ಈ ನಿಟ್ಟಿನಲ್ಲಿ ನಡೆಯುತ್ತಿರುವ ಒಂದು ಮಹತ್ವದ ಹೋರಾಟವಾಗಿದೆ.

ಕ್ರೈಂ ಧಾರಾವಾಹಿಗಳು

ವಿಕಾರಗಳ ವಿಜೃಂಭಣೆಗಿಳಿದ ಚಾನಲ್‌ಗಳ ಪೈಪೋಟಿ

ಮಾಧ್ಯಮ ಮಂಥನ

ಯಾವ ಏರಿಯಾದಲ್ಲಿ ಯಾವ ರೌಡಿ ಡಾನ್ ಎಂದು ತಿಳಿಯಬೇಕೆ? ಭೂಗತ ಲೋಕದಲ್ಲಿ ಸತ್ತೋರು ಯಾರು, ಬದುಕಿರೋರು ಯಾರು ಗೊತ್ತಾಗಬೇಕೆ? ಪಾತಕ ಲೋಕದ ಇತರ ವಿವರಗಳೇನಾದರೂ ಬೇಕೆ? ಹಾಗಾದರೆ ಕ್ರೈಂ ಧಾರಾವಾಹಿಗಳನ್ನು ನೋಡಿ! ಆದರೆ ನೋಡಿದವರು ಮನುಷ್ಯರಾಗಿ ಉಳಿಯುವರೆಂದು ಭರವಸೆ ಕೊಡಲಾಗದು. ಯಾರಿಗೆ ಬೇಕಾಗಿದೆ ಈ ವಿವರಗಳು? ಜನಸಾಮಾನ್ಯರಿಗೆ ಯಾವ ದಾರಿ ತೋರಿಸೋದಿಕ್ಕೆ ಹೊರಟಿವೆ ಈ ಚಾಲನ್‌ಗಳು ಸ್ವಲ್ಪವಾದರೂ ಸಾಮಾಜಿಕ ಕಳಕಳಿ ಬೇಡವೇ ಇವಕ್ಕೆ?

> *ಕ್ರೈಂ ಸುದ್ದಿಗಳ ಪ್ರಸಾರದಲ್ಲಿ ಪೈಪೋಟಿಗಳಿರುವ ಕನ್ನಡ ಟಿ.ವಿ. ಚಾನೆಲ್‌ಗಳಿಗೆ ಏನಾದರೂ ಕಿಂಚಿತ್ತಾದರೂ ಸಮಾಜಿಕ ಜವಾಬ್ದಾರಿ ಇದೆಯೇ? ಕೇವಲ ಲಾಭ ಹಣಬಾಚುವ ದುರ್ಬುದ್ಧಿಯ ದಂಧೆಗಳಿರುವ ಇವುಗಳಿಗೆ ಪಾಠ ಕಲಿಸಬಾರದೇ?*

ನಿಜ. ಕ್ರೈಂ ಸುದ್ದಿಗಳೆಂದರೆ ಯಾವಾಗಲೂ ರೋಚಕವೇ. ಸಾಮಾನ್ಯರಿಗೆ ಅದರಲ್ಲಿ ಆಸಕ್ತಿಯೂ ಹೆಚ್ಚು. ಈ.ಟಿ.ವಿ.ಯಲ್ಲಿ ಬರುವ ಧಾರವಾಹಿಯಲ್ಲಿ ಪತ್ರಕರ್ತ ರವಿ ಬೆಳಗೆರೆ ತನ್ನ ಪತ್ರಿಕೆಗಾಗಿ ತನಿಖೆ ನಡೆಸಿದ ಪ್ರಕರಣಗಳನ್ನೇ ಚಿತ್ರಿಸಿ ತನ್ನ ಬುದ್ಧಿವಂತಿಕೆಯನ್ನು ಪ್ರದರ್ಶನಕ್ಕಿಟ್ಟಿದ್ದಾರೆ! ಇದರಲ್ಲಿ ಬಹುಪಾಲು ಅಕ್ರಮ ಸಂಬಂಧಗಳಿಗೆ ಸಂಬಂಧಪಟ್ಟ ವಿಷಯ!

ಇನ್ನು ಉದಯ ಟಿ.ವಿ.ಯಲ್ಲಿನ ಬಾಲಕೃಷ್ಣ ಕಾಕತ್ಕರ್ ತಮ್ಮ ತಣ್ಣನೆಯ ಮಾತುಗಳಿಂದಲೇ ನೋಡುಗರ ಎದೆ ಇರಿಯುತ್ತಾರೆ!


ಕ್ರಿಮಿನಲ್‌ಗಳಿಗೂ ಮೆಚ್ಚುಗೆ?

ಈ ಧಾರಾವಾಹಿಗಳು ಸಾಮಾನ್ಯರಿಗಷ್ಟೇ ಅಲ್ಲ ಪಾತಕ ಲೋಕದ ಕ್ರಿಮಿನಲ್‌ಗಳಿಗೂ ತುಂಬಾ ಮೆಚ್ಚು. ಏಕೆ ಗೊತ್ತೆ? ಯಾವ ಪಾತಕಿ ಏನು ತಪ್ಪು ಮಾಡಿ ಸಿಕ್ಕಿಬಿದ್ದ? ಇದುವರೆಗೂ ಸಿಕ್ಕಿ ಬೀಳದಿರುವ ಅಪರಾಧಿಗಳ ಚಾಣಾಕ್ಷತೆಯೇನು? ಪೊಲೀಸರ ತನಿಖಾ ಶೈಲಿ, ಯಾವ ಪೊಲೀಸ್ ಅಧಿಕಾರಿ ಹೇಗೆ? ಎಲ್ಲಾ ವಿವರಗಳನ್ನು ಪ್ರಸ್ತುತಪಡಿಸುತ್ತವೆ ಈ ಧಾರಾವಾಹಿಗಳು. ಅಪರಾಧಿಗಳಿಗೆ ಮಾರ್ಗದರ್ಶಕರಾಗಲೊರಟಿದ್ದಾರೆ ಇವರು! ಪಾತಕಿಗಳು ಈ ಧಾರಾವಾಹಿಗಳನ್ನು ಅಧ್ಯಯನ ಮಾಡಿದ್ದೇ ಆದಲ್ಲಿ 'ಮಾಸ್ಟರ ಆಫ್ ಕ್ರಿಮಿನಲ್' ಆಗಬಹುದು. ಇದೇ ಈ ಧಾರಾವಾಹಿಗಳ ಸಾರ್ಥಕತೆ!

ಸರ್ಕಾರಕ್ಕೆನಾದರೂ ಕಣ್ಣಿಲ್ಲವೇ, ಹೊಣೆಯಿಲ್ಲವೆ?

ಇಂತಹ ಸಾರ್ಥಕತೆ ಬೇಕೆ? ಕೊಲೆ, ಸುಲಿಗೆ, ರಕ್ತ ಇವುಗಳನ್ನೆಲ್ಲಾ ನೋಡಿದ ಯುವ ಜನಾಂಗದಲ್ಲಿ ದಯೆ-ದಾಕ್ಷಿಣ್ಯ, ಕರುಣೆ ಅನ್ನೋದು ಉಳಿಯುತ್ತಾ? ಸ್ವತಃ ಪೊಲೀಸ ಆಯುಕ್ತರಾದ ಮರಿಸ್ವಾಮಿಯವರೇ ಈ ಧಾರಾವಾಹಿಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸರ್ಕಾರಕ್ಕೂ ಇದರ ಬಿಸಿ ತಟ್ಟಿದೆ. ಇತ್ಯರ್ಥವಾಗದಿರುವ ಪ್ರಕರಣಗಳ ತನಿಖಾ ವಿವರಗಳನ್ನು ಪ್ರದರ್ಶಿಸದಂತೆ, ಮತ್ತು ಕೆಳಮಟ್ಟದ ಪೊಲೀಸ್ ಅಧಿಕಾರಿಗಳು ಈ ಧಾರಾವಾಹಿಗಳಿಗೆ ಸಂದರ್ಶನ ನೀಡದಂತೆ ನಿರ್ಬಂಧಿಸಿ ಸ್ವತಃ ಮುಖ್ಯಮಂತ್ರಿಯವರೇ ಆದೇಶ ನೀಡಿದ್ದಾರೆ. ಆದರೆ ಇಂತಹ ಧಾರಾವಾಹಿಗಳಿಂದ ದಾರಿ ತಪ್ಪುತ್ತಿರುವ ಯುವಜನಾಂಗಕ್ಕೆ ಇವರು ಜವಾಬ್ದಾರರಲ್ಲವೆ?

ಅಷ್ಟಕ್ಕೂ ಸರ್ಕಾರದ ಆದೇಶ ಜಾರಿಗೆ ಬಂದಂತೆ ಕಾಣೋಲ್ಲ. ಧಾರಾವಾಹಿಗಳು ಹಿಂದಿನ ಶೈಲಿಯಲ್ಲೇ ಪ್ರಸಾರವಾಗುತ್ತಿವೆ. ಭೂಗತಲೋಕದ ವೈಭವೀಕರಣ ನಡದೇ ಇವೆ. ಹಸಿಹಸಿ ರಕ್ತ ಕಣ್ಣಿಗೆ ರಾಚುತ್ತಿದೆ. ಸಮಾಜದ ಸ್ವಾಸ್ಥ್ಯ ಬಯಸುವವರು ಇದರಿಂದ ಆತಂಕಗೊಂಡಿದ್ದಾರೆ. ಕೆಲವೆಡೆ ಸಣ್ಣ ಪ್ರಮಾಣದ ಪ್ರತಿಭಟನೆಗಳು ನಡೆದಿವೆ. ಆದರೆ ಈ ಎರಡೂ ಚಾನಲ್‌ಗಳು ಇದಾವುದಕ್ಕೂ ತಲೆಕೆಡಿಸಿಕೊಂಡಂತೆ ಕಾಣುವುದಿಲ್ಲ. 'ಕಲ್ತಿದ್ದು ಬಿಡೊ ಕಳ್ಳ ನನ್ಮಗನೆ ಅಂದ್ರೆ, ನಡು ಬೀದಿಗೆ ಬಂದು ಬಾಯ್ಬಡ್ಕೊಂಡನಂತೆ' ಎಂಬಂತೆ ಈಗ ಆ ಧಾರವಾಹಿಗಳ ಪ್ರಚಾರವನ್ನು ಚಾನಲ್‌ಗಳು ಇನ್ನೂ ವ್ಯಾಪಕಗೊಳಿಸಿವೆ.




ಆ ದಿನದ ಪ್ರಕರಣವೇನು ಎಂಬುದರ ಬಗ್ಗೆ ಅರ್ಧ ಗಂಟೆಗೊಮ್ಮೆ ಜಾಹಿರಾತು ನೀಡಲಾರಂಭಿಸಿದ್ದಾರೆ.

ಸರಿದಾರಿಗೆ ತರಬೇಕು.

ಮಾಧ್ಯಮಗಳಿಗೆ ಒಂದು ಸಾಮಾಜಿಕ ಜವಾಬ್ದಾರಿ ಎಂಬುದೊಂದಿದೆ. ಆದರೆ ಅದನ್ನು ಮರೆತಂತಿರುವ ಈ ಚಾನಲ್‌ಗಳಿಗೆ ಸರಿಯಾದ ಬುದ್ಧಿ ಕಲಿಸಬೇಕಿದೆ. ಪ್ರತಿಷ್ಠೆ, ಪೈಪೋಟಿಗಾಗಿ ಸಮಾಜದ ಸ್ವಾಸ್ಥ್ಯವನ್ನು ಪಣಕ್ಕೊಡ್ಡಿರುವ ಇವರನ್ನು ಸರಿ ದಾರಿಗೆ ತರಲೇಬೇಕಾಗಿವೆ. ಪೋಷಕರು ಮತ್ತು ಯುವ ಜನಾಂಗ ಎಚ್ಚೆತ್ತುಕೊಂಡು ಇದರ ವಿರುದ್ಧ ಪ್ರಬಲ ಪ್ರತಿರೋಧ ಒಡ್ಡಬೇಕಾದ್ದು ಇಂದಿನ ತುರ್ತು ಅಗತ್ಯವಾಗಿದೆ.

- ರಾಮು



ಮೆಟ್ರೋ ಪಾದಗಳಿಗೆ ಸರ್ಕಾರದ ಸಾಷ್ಟಾಂಗ?

ಭಾರೀ ಪ್ರತಿಭಟನೆಯ ನಡುವೆಯೇ ಕಾರ್ಯಾರಂಭಿಸಿತ್ತು 'ಮೆಟ್ರೋ ಕ್ಯಾಶ್ ಅಂಡ್ ಕ್ಯಾರಿ' ಎಂಬ ಜರ್ಮನಿ ಮೂಲದ ದೈತ ವ್ಯಾಪಾರಿ ಸಂಕೀರ್ಣ. ಕೃಷಿ ಉತ್ಪನ್ನದ ವಸ್ತುಗಳನ್ನು ಈ ಸಂಸ್ಥೆ ಮಾರಾಟ ಮಾಡುತ್ತಿದೆ ಯೆಂದು ವರ್ತಕರು ಧ್ವನಿಯೇರಿಸಿದ್ದರು, ಬೀದಿಗೂ ಬಂದಿದ್ದರು. ಅದಕ್ಕೆ ಅವಕಾಶವಿಲ್ಲವೆಂದು ಸ್ಪಷ್ಟನೆಯನ್ನೂ ನೀಡಿ ಕಾವನ್ನು ಇಳಿಸಿತ್ತು ಸರ್ಕಾರ.

ಈ ಮೆಟ್ರೋ ಈಗ ಕನಕಪುರದ ರಸ್ತೆಯಲ್ಲಿಯೂ ಒಂದು ಶಾಖೆಯನ್ನು ತೆರೆದಿದೆ. ಇದನ್ನು ಉದ್ಘಾಟಿಸಿದ ಸಚಿವ ಡಿ.ಕೆ.ಶಿವಕುಮಾರ್ ಅವರಿಗೆ ನೀಡಿದ ಭರವಸೆ 'ಮೆಟ್ರೋದಲ್ಲಿ ವಹಿವಾಟಿಗೆ ಅನುಕೂಲವಾಗವಂತೆ ಕೃಷಿ ಉತ್ಪನ್ನ ಮಾರುಕಟ್ಟೆಯ (ಎಪಿಎಂಸಿ) ಕಾನೂನಿಗೆ ತಿದ್ದುಪಡಿ ತರಲಾಗುವುದು' ಎಂಬುದು. ಇದು ಮತ್ತೇ ವರ್ತಕರಲ್ಲಿ ಆತಂಕವನ್ನು ಹೆಚ್ಚಿಸಿತು. ಪ್ರತಿಭಟನೆಯ ಧ್ವನಿ ಎದ್ದ ಬಳಿಕ ಮತ್ತೇ ಇನ್ನೊಬ್ಬ ಸಚಿವರು ಸ್ಪಷ್ಟಪಡಿಸಿದ್ದು 'ಅದು ಅವರ (ಡಿಕೆಶಿ) ವೈಯಕ್ತಿಕ ಅಭಿಪ್ರಾಯ, ತಿದ್ದುಪಡಿಯ ಯೋಚನೆ ಸದ್ಯಕ್ಕಿಲ್ಲ'. ಇದರಲ್ಲಿ ಯಾರನ್ನು ನಂಬುವುದು? ಇಂದೋ- ಎಂದೋ ಅಂತೂ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದು ಮೆಟ್ರೋದಂತಹ ಕಂಪನಿಗಳಿಗೆ ಮುಕ್ತ ಅವಕಾಶ ಕಲ್ಪಿಸಿಕೊಡುವುದು ಸರ್ಕಾರದ ಮನದಲ್ಲಿ ಇದೆ ಎಂಬುದನ್ನೇ ನಂಬಬೇಕಿರುವುದು. ಡಿಕೆಶಿ ಇಂತಹ ಇಂಗಿತ ನೀಡುವ ಅಥವಾ ಒರಟಾಗಿ ಪ್ರತಿಪಾದಿಸುವ ಮೊದಲ ನಾಯಕ ಎಂಬುದು ಹಲವು ಪ್ರಸಂಗಗಳಲ್ಲಿಯೂ ಖಚಿತವಾಗಿದೆ. ಆರಂಭದಲ್ಲಿ ವಿರೋಧ ಬಂದೆ 'ಸ್ಪಷ್ಟನೆ ಹೇಳಿ' ಕೊನೆಗೆ ಜಾರಿಗೆ ತರುವುದೇ ಗ್ಯಾರಂಟಿ.



ಎ.ಪಿ.ಎಂ.ಸಿ. ಕಾಯ್ದೆಯಲ್ಲಿ ಕೃಷಿ ಉತ್ಪನ್ನಗಳನ್ನು ಇಂತಹ ವಾಣಿಜ್ಯ ಸಂಕೀರ್ಣದಲ್ಲಿ ನೇರವಾಗಿ ಖರೀದಿಸುವುದಕ್ಕು - ಮಾರುವುದಕ್ಕು ಅವಕಾಶವಿಲ್ಲ. ಅದಕ್ಕಾಗಿ ಮಾರ್ಕೆಟ್ ಯಾರ್ಡ್ ಇದೆ. ವಹಿವಾಟಿಗೆ ವ್ಯವಸ್ಥೆ ಇದೆ. ಇದರಲ್ಲಿ ಸಾವಿರಾರು ಸಣ್ಣ ಮಧ್ಯಮ ವರ್ತಕರು ತೊಡಗಿದ್ದಾರೆ. ಒಂದು ವೇಳೆ 'ಮೆಟ್ರೋ'ಗೆ ಇದಕ್ಕೆ ಅವಕಾಶ ಕಲ್ಪಿಸಿದರೆ ಅವರ ಜೀವನದ ಸ್ಥಿತಿಗೆ ಅಪಾರ ಹಾನಿ ಕಾದಿದೆ. ಮೆಟ್ರೋದಂತಹ ದೈತ್ಯನ ಎದುರು ಇವರೆಲ್ಲ ನೆಲ ಕಚ್ಚುತ್ತಾರೆ. ಇಂತಹ ಸಾವಿರಾರು ವರ್ತಕರ ಜೀವನಕ್ಕೆ ಹಾನಿ ತರುವಂತಹ ತಿದ್ದುಪಡಿ ಪ್ರಸ್ತಾವ ತಂದಿರುವುದು ಖಂಡನೀಯ. ಮೆಟ್ರೋದಂತಹ ಕಂಪನಿಗೆ ಕೃಷ್ಣರ ಸರ್ಕಾರ ನಮೋ ನಮಃ ಎಂದು ಸಾಷ್ಟಾಂಗ ನಮಸ್ಕಾರ ಹಾಕುತ್ತಿರುವುದು ನಾಚಿಕೆಗೇಡು. ಆದ್ದರಿಂದ ಎಪಿಎಂಸಿ ಕಾಯ್ದೆಗೆ ಅಂತಹ ತಿದ್ದುಪಡಿಗಳನ್ನು ತರಲೇಬಾರದು. ಆ ವರ್ತಕರನ್ನು ರಕ್ಷಿಸುವ ಕ್ರಮ ಕೈಗೊಳ್ಳುವ ಹೊಣೆ ಸರ್ಕಾರದ ಮೇಲಿದೆ.


ಪುಟ 7 ರಿಂದ....

ಸೃಷ್ಟಿಸುವ ಮೂಲಕ, ಬುಡಕಟ್ಟು ಜೀತದಾಳಿನ ಹೆಸರಿನಲ್ಲಿ ಭೂಮಿ ಇಟ್ಟುಕೊಳ್ಳುವ ಮೂಲಕ ಬುಡಕಟ್ಟೇತರ ಜನಗಳು ಬುಡಕಟ್ಟು ಜನರ ಭೂಮಿಯನ್ನು ಕಬಳಿಸುತ್ತಿದ್ದಾರೆ. ಪರಾಧೀನಗೊಳಿಸಲಾದ ಅವರ ಭೂಮಿ ಅವರಿಗೆ ಮರಳಿ ದೊರಕುವಂತೆ ಮಾಡುವುದು ನಮ್ಮ ಮೂಲಭೂತ ಕಾಳಜಿಯಾಗಬೇಕಾಗಿದೆ. ಭೂ ಸುಧಾರಣೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು, ಹೆಚ್ಚುವರಿ ಭೂಮಿಯನ್ನು ಭೂಹೀನ ಆದಿವಾಸಿ ಹಾಗೂ ಬುಡಕಟ್ಟು ಕುಟುಂಬಗಳಿಗೆ ವಿತರಣೆಮಾಡುವುದು ಆಗಬೇಕಾಗಿದೆ.

ಅರಣ್ಯ ಉತ್ಪನ್ನಗಳ ಮೇಲಿನ ಹಕ್ಕನ್ನು ಮರಳಿಕೊಡುವುದು, ಸಹಕಾರಿ ಮಾರುಕಟ್ಟೆಗಳ ಮೂಲಕ ಅರಣ್ಯ ಉತ್ಪನ್ನಗಳ ಮಾರಾಟಕ್ಕೆ ಸರ್ಕಾರ ಏರ್ಪಾಡು ಮಾಡುವುದು, ಅರಣ್ಯ ಸಸ್ಯಗಳ ಬಗ್ಗೆ ಬುಡಕಟ್ಟು ಜನರ ಜ್ಞಾನವನ್ನು ಕಾಪಾಡಲು ವ್ಯವಸ್ಥೆಮಾಡುವುದು ತುರ್ತಾಗಿ ಆಗಬೇಕಾಗಿದೆ.

ಇದೇ ಸಂದರ್ಭದಲ್ಲಿ, ಆರ್.ಎಸ್.ಎಸ್. ಮತ್ತು ಇತರ ಸಂಘ ಪರಿವಾರದ ಸಂಘಟನೆಗಳು ಆದಿವಾಸಿ ಮತ್ತು ಬುಡಕಟ್ಟು ಜನಗಳತ್ತ ಹೊರಳಿರುವುದು ಆತಂಕದ ಬೆಳವಣಿಗೆಯಾಗಿದೆ. ಬುಡಕಟ್ಟು ಜನಗಳ ನಡುವೆ ಕ್ರಿಶ್ಚಿಯನ್ನರ ವಿರುದ್ಧ ದ್ವೇಷ ಬೆಳೆಸುವುದಕ್ಕೆ, ಅವರ ನಡುವೆ ಪುರೋಹಿತಶಾಹಿ ಮನುವಾದಿ ಹಿಂದುತ್ವ ಹೇರುವುದಕ್ಕೆ ಗಮನನೀಡಲಾಗುತ್ತಿದೆ. ಕೋಮು ಗಲಭೆಗಳಲ್ಲಿ ಬುಡಕಟ್ಟು ಜನರನ್ನು ಬಳಸಿಕೊಳ್ಳುವ ಪ್ರಯತ್ನ ನಡೆಸಲಾಗುತ್ತಿದೆ. ಈ ಹಿನ್ನಲೆಯಲ್ಲಿ ಬುಡಕಟ್ಟು ಜನರ ಹಾಗೂ ಬುಡಕಟ್ಟೇತರ ಜನ ವಿಭಾಗಗಳ ಐಕ್ಯತೆ ಸಾಧಿಸುವುದು ಮುಖ್ಯವಾಗುತ್ತದೆ. ಒಟ್ಟಿನಲ್ಲಿ ದೇಶದ ಪ್ರಜಾಸತ್ತಾತ್ಮಕ ಚಳುವಳಿಯ ಅವಿಚ್ಛಿನ್ನ ಭಾಗವಾಗಿ ಬುಡಕಟ್ಟು ಜನತೆಯ ವಿಮೋಚನೆಗಾಗಿ ಬಲಿಷ್ಟವಾದ ಚಳುವಳಿಯನ್ನು ಕಟ್ಟಿ ಬೆಳೆಸಲು ನಾವೆಲ್ಲರು ಕೈಜೋಡಿಸಬೇಕಾಗಿದೆ.

- ನಿತ್ಯಾನಂದಸ್ವಾಮಿ.



ನನ್ನ ಬೆಣ್ಣೆ ಕದ್ದವರು ಯಾರು?

"Who moved my Chees?" ಇದು ಒಂದು ಪ್ರಸಿದ್ಧ 'ಬೆಸ್ಟ್ ಸೆಲ್ಲರ್' ಪುಸ್ತಕ. ಈ ಪುಸ್ತಕದ ಬಗ್ಗೆ ನಾವು ತಲೆಕೆಡಿಸಿಕೊಳ್ಳಬೇಕು ಯಾಕೆ? ಇದನ್ನು ಒಂದೂವರೆ ಕೋಟಿ ಜನ ಓದಿದ್ದಾರಂತಲೇ? ಹೌದು. ಹಾಗಾದರೆ ಇದು ಎಲ್ಲರೂ ಓದಲೇಬೇಕಾದ ಪುಸ್ತಕವೇ? ಅಲ್ಲ. 40 ಭಾಷೆಗಳಲ್ಲಿ ಪ್ರಕಟವಾಗಿ ಒಂದೂವರೆ ಕೋಟಿ ಜನ ಓದಿದರೂ, ಇದು ಓದಲೇಬೇಕಾದ ಪುಸ್ತಕ ಅಲ್ಲ. (ಇದು ಕನ್ನಡಕ್ಕೂ ಭಾಷಾಂತರವಾಗಿ ಪ್ರಕಟವಾಗಿದೆಯಂತೆ! ಹಾಗಂತ ಆ ಪುಸ್ತಕಕ್ಕೆ ಮೀಸಲಾದ ವೆಬ್‌ಸೈಟು ಹೇಳಿಕೊಳ್ಳುತ್ತದೆ. ಹೌದು! ಈ ಪುಸ್ತಕಕ್ಕೆ ಮೀಸಲಾದ ವೆಬ್‌ಸೈಟೂ ಇದೆ) ಅದ್ದರಿಂದಲೇ ಈ ಪುಸ್ತಕದ ವಿಮರ್ಶೆ. ಪುಸ್ತಕ 'ಬೆಸ್ಟ್ ಸೆಲ್ಲರ್' ಆಗಿರುವ ಸಾಮಾಜಿಕ ಸಾಂಸ್ಕೃತಿಕ ಸಂದರ್ಭ ಅರ್ಥಮಾಡಿಕೊಳ್ಳುವ ಪ್ರಯತ್ನ ಅಗತ್ಯ. ಅಂತಹ ಪ್ರಯತ್ನ ಈ ಲೇಖನ.

ಒಂದೂವರೆ ಕೋಟಿ ಜನ ಓದಿದ ಪುಸ್ತಕ

"ನನ್ನ ಬೆಣ್ಣೆ ಒಯ್ದುವರು ಯಾರು?". 1998 ರಲ್ಲಿ ಅಮೆರಿಕದಲ್ಲಿ ಪ್ರಕಟವಾಗಿ ಅಲ್ಲಿ ಮಾತ್ರವಲ್ಲ, ಇಂಗ್ಲೀಷ್ ಪ್ರಮುಖ ಭಾಷೆಯಾಗಿರುವ ದೇಶಗಳಲ್ಲೆಲ್ಲಾ ಇಂದಿಗೂ ಪುಸ್ತಕ ಅಂಗಡಿಗಳಲ್ಲಿ ಕಾಣಿಸಿಕೊಳ್ಳುವ, ಮಾರಾಟವಾಗುತ್ತಿರುವ ಪುಸ್ತಕ. ಅಮೆರಿಕದಲ್ಲಿ ಜನಪ್ರಿಯ (ಜನ ಮರಳು ಹೆಚ್ಚು ಸರಿಯಾದೀತೇನೋ) ವಾಗಿರುವ 'ಸ್ವ-ಸಹಾಯ' (Self Help) ವರ್ಗಕ್ಕೆ ಸೇರಿದ ಪುಸ್ತಕ ಇದು. ಇನ್ನೊಂದು ರೀತಿಯಲ್ಲಿ ಇದು ಮ್ಯಾನೇಜ್‌ಮೆಂಟ್ ಪರಿಕಲ್ಪನೆಗಳನ್ನು ಜನಪ್ರಿಯ(ಮರುಳು!) ಮಾಡುವ ವರ್ಗದ ಪುಸ್ತಕ ಸಹ.

'ಬೆಣ್ಣೆ....' ಯ ಕಥೆ

'ಬೆಣ್ಣೆ...' ಒಂದು ಸರಳವಾದ ಕಥೆ. ಆಧುನಿಕ 'ನೀತಿ ಕಥೆ' ಎಂಬುದು ಹೆಚ್ಚು ಸರಿಯಾದೀತೇನೋ. ಕಥೆ ಎರಡು ಇಲಿ ಮತ್ತು ಎರಡು 'ಸಣ್ಣ ಜನ' ಗಳ ಕಥೆ. ನಾಲ್ಕೂ ಜನ ದುರ್ಗಮವಾದ ದಾರಿತಪ್ಪಿ ಹೋಗುವ ಜಾಗದಲ್ಲಿ ವಾಸಿಸುತ್ತಿರುತ್ತಾರೆ. ಅವರ ಜೀವನಾಧಾರ ಒಂದು ಬೆಣ್ಣೆಯ ಮುದ್ದೆ. ಇದು ಒಂದು ನೀತಿ ಕಥೆಯಾದ್ದರಿಂದ ಇಲ್ಲಿ 'ಬೆಣ್ಣೆ'ಯ ಅರ್ಥ ಇನ್ನೂ ಹೆಚ್ಚಿನದ್ದು. ಬೆಣ್ಣೆ ಇಲ್ಲಿ ನಾವೆಲ್ಲರೂ 'ಬೇಕು' ಎನ್ನುವ, ಬಾಳಿಗೆ ಅರ್ಥಪೂರ್ಣ ಎನ್ನಿಸುವ - ಉದ್ಯೋಗ, ಐಶ್ವರ್ಯ, ಕುಟುಂಬ-ಇತ್ಯಾದಿಯಲ್ಲಿ ಯಾವುದಾದರೂ ಇರಬಹುದು. ವಾಸಿಸುವ 'ದುರ್ಗಮಪ್ರದೇಶ'-'ಬೆಣ್ಣೆ'ಯನ್ನು ಹುಡುಕುವ 'ಸಂಘಟನೆ' ಅಥವಾ 'ವ್ಯವಸ್ಥೆ'ಯ ಪ್ರತೀಕ.

ಈ ನಾಲ್ಕೂ ಪಾತ್ರಗಳು ಒಳ್ಳೆಯ ಬೆಣ್ಣೆ ಇರುವ 'ಸ್ಟೇಷನ್ ಸಿ' ಹುಡುಕಿ, ಬಳಿಯಲ್ಲಿ ವಾಸಿಸುತ್ತಾರೆ. ಪ್ರತಿ ದಿನ ಒಂದು ಬೆಣ್ಣೆ ತಿಂದು ಸುಖವಾಗಿರುತ್ತಾರೆ. ಹೀಗೆ ಬಹಳ ದಿನ ನಡೆದ ಮೇಲೆ ಕೊನೆಗೊಂದು ದಿನ ಅವರು 'ಸ್ಟೇಷನ್ ಸಿ'ಗೆ ಬಂದಾಗ ಬೆಣ್ಣೆಯ ಮುದ್ದೆ ಮಾಯವಾಗಿರುತ್ತದೆ. "ನನ್ನ ಬೆಣ್ಣೆ ಒಯ್ದವರು ಯಾರು?" ಎಂಬ ಪ್ರಶ್ನೆ ಅವರೆಲ್ಲರನ್ನೂ ಕಾಡುತ್ತದೆ.

ಆದರೆ ಕೆಲವು ಕ್ಷಣ ವಿಚಲಿತರಾದರೂ ಎರಡು ಇಲಿಗಳು 'ಹೊಸ ಬೆಣ್ಣೆ' ಮುದ್ದೆ ಹುಡುಕಿಕೊಂಡು ಓಡಾಡತೊಡಗಿದವು. ಆದರೆ ಈ 'ಸಣ್ಣ ಮನುಷ್ಯರು' ಯೋಚನೆ ಮಾಡಬಲ್ಲವರಾದ್ದರಿಂದ ಬೆಣ್ಣೆಯನ್ನು ಒಯ್ದವರು ಯಾರು? ಒಯ್ದವರು ಮತ್ತೆ ತಂದಿಟ್ಟಾರು ಎಂಬ ನಿರೀಕ್ಷೆಯಲ್ಲಿ ಸ್ಟೇಷನ್ ಸಿ ಯಲ್ಲೇ 'ಹಳೆ ಬೆಣ್ಣೆ'ಗಾಗಿ ಕಾದಿದ್ದೇ ಕಾದಿದ್ದು. ಕಾದು ಕಾದು ತಿನ್ನಲು ಏನೂ ಇಲ್ಲದೆ, ಇವರು ಕೃಶರಾಗುತ್ತಾರೆ. ಆದರೆ ತಮ್ಮ ನಂಬಿಕೆಗಳನ್ನು ಬಿಡದೆ ಕಾದಿರುತ್ತಾರೆ. ಆದರೆ ಇದರಲ್ಲೊಬ್ಬ ಕಾದು ಸುಸ್ತಾಗಿ, 'ಹೊಸ ಬೆಣ್ಣೆ' ಹುಡುಕಲು ತಾನು ಹೊರಡುತ್ತಾನೆ. ಈ ಹೊತ್ತಿಗೆ ಎರಡು ಇಲಿಗಳು 'ಹೊಸ ಬೆಣ್ಣೆ' ಹುಡುಕಿ, ಕಳೆಕಳೆಯಾಗಿ ಓಡಾಡುತ್ತಿರುವುದು ನೋಡುತ್ತಾನೆ. ಇನ್ನೂ 'ಸ್ಟೇಷನ್ ಸಿ' ಬಿಟ್ಟು ಕದಲದ ತನ್ನ ಮಿತ್ರನಿಗೆ 'ಹೊಸ ಬೆಣ್ಣೆ' ಹುಡುಕೋಣ ಎಂದು ಕರೆಯುತ್ತಾನೆ. ಆದರೆ ಆತ ಅಲ್ಲಿ ಕದಲುವುದಿಲ್ಲ. ಮುಂದಿನ ಹಲವು ದಿನಗಳ ಕಾಲ ಒಂಟಿಯಾಗಿ ಹುಡುಕಿದ ನಂತರ 'ಹೊಸಬೆಣ್ಣೆ' ಆತನಿಗೂ ಸಿಗುತ್ತದೆ. ಆದರೆ 'ಸ್ಟೇಷನ್ ಸಿ' ಬಿಟ್ಟು ಕದಲಲೂ ಒಪ್ಪದವ ಅಲ್ಲೇ ಇರುತ್ತಾನೆ. ಉಳಿದವರೆಲ್ಲಾ 'ಹೊಸ ಬೆಣ್ಣೆ' ತಿಂದುಕೊಂಡು ಸುಖವಾಗಿರುತ್ತಾರೆ.

'ಬದಲಾವಣೆ'ಯ ಜೊತೆ 'ಹೊಂದಾಣಿಕೆ'

ಪುಸ್ತಕದಲ್ಲಿರುವುದು ಬರಿಯ ಈ ಕಥೆ ಮಾತ್ರವಲ್ಲ. ಆ ಕಥೆಯ 'ಅರ್ಥ'ದ ಬಗ್ಗೆಯೂ ಇದೆ. ಈ ಕಥೆಯನ್ನು ಹೇಳುವುದೇ ಹೈಸ್ಕೂಲ್ ಹಳೆ ವಿದ್ಯಾರ್ಥಿಗಳ 'ಪಾರ್ಟಿ'ಯೊಂದರಲ್ಲಿ. ಕಥೆಯ ಮೊದಲು ಈ 'ಪಾರ್ಟಿ'ಯಲ್ಲಿ ಹಲವು ಸಾಮಾಜಿಕ ಪಾತ್ರಗಳನ್ನು ಪರಿಚಯಿಸಲಾಗುತ್ತದೆ. ಪುಸ್ತಕದ ಕೊನೆಯಲ್ಲಿ ಈ ಕಥೆಯ ಆಧಾರದ ಮೇಲೆ ಕಥೆಯ ನಾಲ್ಕು ಪಾತ್ರಗಳಲ್ಲಿ 'ತಾವು ಯಾರು?' ಕಥೆಯಿಂದ ಏನು ಕಲಿಯ ಬಹುದು? ಎಂಬ ಜಿಜ್ಞಾಸೆ ನಡೆಯುತ್ತದೆ.

ಬದಲಾವಣೆ ಅನಿವಾರ್ಯ. ಏನು ಯಾಕೆ ಬದಲಾವಣೆಯಾಗತ್ತದೆ ಎಂಬುದು ನಮ್ಮ ಕೈಯಲ್ಲಿಲ್ಲ. **ಬದಲಾವಣೆ ಜತೆ ಹೊಂದಾಣಿಕೆ ಮಾಡುವುದಷ್ಟೇ ನಮ್ಮ ಕೈಯಲ್ಲಿರುವುದು. ಪ್ರತಿ ಬದಲಾವಣೆ ಜತೆ ಹೊಸ ಅವಕಾಶಗಳೂ ಇರಬಹುದು. ಏನು ಬದಲಾವಣೆ ಆಗುತ್ತಿದೆ ಎಂಬುದರ ಬಗ್ಗೆ ಎಚ್ಚರದಿಂದ ಇರಬೇಕು. ಆದರ ಜತೆ ಹೊಂದಾಣಿಕೆ ಮಾಡಿಕೊಳ್ಳಬೇಕು. ಹೊಂದಾಣಿಕೆ ಮಾಡುವುದೇ 'ಜಾಣತನ'. ಬದಲಾವಣೆಗೆ ಪ್ರತಿರೋಧ ಒಡ್ಡುವುದು ಮೂರ್ಖತನ. ಇದು ಈ ಕಥೆ ಸಾರುವ 'ನೀತಿ'.**

'ಬೆಣ್ಣೆ'ಯ ಯಶಸ್ಸು

ಇದರಲ್ಲೇನಿದೆ ವಿಶೇಷ? ಇಂತಹ ಸರಳ ಕಥೆಯನ್ನು ಒಂದೂವರೆ ಕೋಟಿ ಜನ ಓದಿದರೆ? ಎಂದು ಯಾರಿಗಾದರೂ ಆಶ್ಚರ್ಯವಾಗುವುದು ಸಹಜ. ಪುಸ್ತಕ ಪ್ರಕಟವಾದ ವರ್ಷ (1998 ರಲ್ಲಿ) ಅಂತಹ ವಿಶೇಷ ಜನಪ್ರಿಯತೆ ಕಾಣಲಿಲ್ಲ. 2000 ದ ಹೊತ್ತಿಗೆ ಅದರ ಜನಪ್ರಿಯತೆ ಗಗನಕ್ಕೇರಿತ್ತು. ಆದರ ಸಾಮಾನ್ಯ ಓದುಗರು ಪುಸ್ತಕವನ್ನು ಮೆಚ್ಚಿದ್ದು ಮಾತ್ರ ಇದಕ್ಕೆ ಕಾರಣವಲ್ಲ. ಹೊಸ ಆರ್ಥಿಕತೆ, 'ಶೇರು ಮಾರುಕಟ್ಟೆ ಸುಗ್ಗಿ' ಮುಗಿದು ಬೀಳುವ ಕಾಲಘಟ್ಟ ಅದು. ಭಾರಿ ಲೇ-ಆಫ್‌ಗಳು ನಡೆಯಲಾರಂಭಿಸಿದ್ದ ಘಟ್ಟ. ಈ ಸಾಮಾಜಿಕ ಸಂದರ್ಭದಲ್ಲಿ ಈ ಪುಸ್ತಕ ಸಾರುವ ನೀತಿ ಅಮೆರಿಕದ ಕಂಪನಿಗಳ ಮ್ಯಾನೇಜ್‌ಮೆಂಟಿಗೆ 'ಸುಮಧುರ' ಸಂಗೀತವಾಗಿತ್ತು. ನೂರಾರು ದೈತ್ಯ ಕಂಪನಿಗಳು ಈ ಪುಸ್ತಕವನ್ನು ಸಾವಿರಾರು ಸಂಖ್ಯೆಯಲ್ಲಿ ತಮ್ಮ (ಮುಂದೆ ಕೆಲಸ ಕಳೆದುಕೊಳ್ಳುವ!) ಉದ್ಯೋಗಿಗಳಿಗೆ ಹಂಚಿದರು. ಸೌತ್‌ವೆಸ್ಟ್ ಏರ್‌ಲೈನ್ಸ್ (27 ಸಾವಿರ), ಆವ..ವೆ(15 ಸಾವಿರ), ಕೊಡಕ್ (12 ಸಾವಿರ), ಮರ್ಸಿಡೆಸ್-ಬೆಂಜ್(8.5 ಸಾವಿರ) ಮುಂತಾದವು ತಮ್ಮ ಉದ್ಯೋಗಿಗಳಿಗೆ 'ಪಿಂಕ್‌ಸ್ಲೀಪ್'(ಕೆಲಸ ವಜಾದ ನೋಟೀಸ್) ಕೊಡುವ ಮೊದಲು ಈ ಪುಸ್ತಕದ ಉಡುಗೊರೆ ಕೊಟ್ಟ ಕಂಪನಿಗಳು.

ಬರಿಯ ಇದೇ ಈ ಪುಸ್ತಕದ ಯಶಸ್ಸಿಗೆ ಕಾರಣ ಎಂದು ಇದರ ಅರ್ಥವಲ್ಲ. ಜಾಹೀರಾತು ಮತ್ತು ಇತರ ಸಾಮೂಹಿಕ ಯೋಚನೆ ನಿಯಂತ್ರಿಸುವ ಸಾಧನಗಳಲ್ಲಿ ಪರಿಣಿತಿ ಮುಗಿಲು ಮುಟ್ಟಿರುವ ಅಮೆರಿಕದಲ್ಲಿ 'ಯಶಸ್ಸು ಇನ್ನಷ್ಟು ಯಶಸ್ಸಿಗೆ ಕಾರಣ'ವಾಗಿ, ನಾಗಾಲೋಟದ ಯಶಸ್ಸು ಕಾಣುವುದು ಅಪರೂಪವಲ್ಲ. ಪುಸ್ತಕದ ಪ್ರಕಾಶಕರು, ಅಮೆರಿಕದ ಕಂಪನಿಗಳ ಬತ್ತಳಿಕೆಯಲ್ಲಿರುವ ಎಲ್ಲಾ ಬಾಣಗಳನ್ನು ಇದಕ್ಕಾಗಿ ಬಳಸಿದರು. 'ಬೆಣ್ಣೆ' ಪೋಸ್ಟರುಗಳು, ಬನಿಯನ್‌ಗಳು, ಬಟನ್‌ಗಳು, ಪೆನ್, ಪೆನ್ಸಿಲ್‌ಗಳಲ್ಲಿ ಕಾಣಿಸಿಕೊಂಡಿತು. ಹದಿಹರೆಯದವರ 'ಬೆಣ್ಣೆ', 'ಬೆಣ್ಣೆ'ಫಿಲಂ, 'ಬೆಣ್ಣೆ' ಸೆಮಿನಾರುಗಳು - ದಂಡಿಯಾಗಿ ಹೊರಬಂದವು. ಇದಕ್ಕೆಲ್ಲಾ ಕಂಪನಿಗಳ ಬೆಂಬಲಕ್ಕೆ ಕೊರತೆಯೇ ಇರಲಿಲ್ಲ. ಭಾರತದಲ್ಲೂ ಇದು ಕಂಡಿತು. ಮುಂಬಯಿಯ ಈ ಪುಸ್ತಕದ ಬಗ್ಗೆ ದೊಡ್ಡ ಸೆಮಿನಾರು, ಬೆಂಗಳೂರಿನಲ್ಲಿ 'ಚೌಡಯ್ಯ ಹಾಲ್ 'ನಲ್ಲಿ ಈ ಬಗ್ಗೆ ಭಾಷಣ ಏರ್ಪಟ್ಟಿತ್ತು.

ಪುಸ್ತಕ 35 ಪುನರಚ್ಚು ಕಂಡಿತು. ಒಂದೂವರೆ ಕೋಟಿ ಪುಸ್ತಕ ಮಾರಾಟವಾಯಿತು. 40 ಭಾಷೆಗಳಲ್ಲಿ ಭಾಷಾಂತರವಾಯಿತು. ಆದರೆ ಅಮೆರಿಕದಲ್ಲಿ ಈ ಪುಸ್ತಕ ಕಂಡ ಯಶ್ಸಸು ಇತರ ದೇಶಗಳಲ್ಲಿ ಕಾಣಲಿಲ್ಲ.

'ಬದಲಾವಣೆ' ಬಗ್ಗೆ ಗೊಂದಲ

ಹಾಗಾದರೆ ಈ ಪುಸ್ತಕದ ಯಶಸ್ಸಿಗೆ ಬರಿಯ 'ಕಂಪನಿ ಸ್ಪಾನ್ಸರ್ ಶಿಪ್' ಕಾರಣವೇ? ಖಂಡಿ... ಅಲ್ಲ. 90 ರ ದಶಕ ತಂದ ಭ... ಬದಲಾವಣೆಗಳನ್ನು ಅರ್ಥಮಾಡಿಕೊಳ್ಳುವುದರ... ಎಲ್ಲಾ ದೇಶಗಳಂತೆ ಅಮೆರಿಕದಲ್ಲಿ ... ಸಾಮಾನ್ಯರಲ್ಲಿ ಭಾರಿ ಗೊಂದಲ, ಅಜ್ಞಾನವಿ... ಬದಲಾವಣೆ ಬಗ್ಗೆ ವ್ಯಾಪಕವಾಗಿರುವ ಉಳ್ಳ... ದೃಷ್ಟಿಕೋನವನ್ನು, ಅತ್ಯಂತ ಸಮರ್ಥ... ಅತ್ಯಂತ ನವಿರಾಗಿ, ಎಲ್ಲರನ್ನು ಮೋಡಿ ಮಾ... ಒಪ್ಪಿಸುವ ಈ ಪುಸ್ತಕ-ಎಲ್ಲರಿಗೂ ಆಕರ್ಷಕವಾ... ಕಂಡಿದ್ದರೆ ಆಶ್ಚರ್ಯವಿಲ್ಲ. ವರ್ತಮಾನ ಪರಿ... ಬದಲಾವಣೆ, ಯಾವ ಬದಲಾವಣೆ ಒಳ್ಳೆಯ... ಯಾವುದರ ಜತೆ ಹೊಂದಾಣಿಕೆ ಮಾಡಬೇ... ಯಾವ ಬದಲಾವಣೆ ವಿರೋಧಿಸಬೇಕು ಎ... ಬಗ್ಗೆ ಇರುವ ಸಂಕೀರ್ಣತೆಯನ್ನು 'ಬೈಪಾ... ಮಾಡಿ, ಅತ್ಯಂತ ಸರಳ, ಪೆದ್ದು ಮತ್ತು ಮೋ... 'ಫಾರ್ಮುಲಾ' ಕೊಡುವ ಈ ಪುಸ್ತಕ ಬ... ಜನರಿಗೆ, ಅವರ ಗೊಂದಲಕ್ಕೆ 'ಆಕಷ... ಪರಿಹಾರ' ವಾಗಿ ಕಂಡಿರಬೇಕು.

'ಬೆಣ್ಣೆ' ಉಳ್ಳವರ ಮ್ಯಾನಿಫೆಸ್ಟೋ

ನೀವು ಇಲಿಗಳ ಹಾಗೆ. ನಿಮ್ಮ 'ಬೆಣ್ಣೆ' ಕದ್ದ... ಬಗ್ಗೆ ಪ್ರಶ್ನಿಸಬೇಡಿ. ಮನುಷ್ಯರಂತೆ ಪ್ರಶ್ನಿಸಿ... ಕಷ್ಟಕ್ಕೊಳಗಾಗುತ್ತೀರಿ. ನಾವು ಬೇಕಾದ ಹ... 'ಬದಲಾವಣೆ' ಮಾಡುತ್ತೇವೆ. ಅದರ ... ಹೊಂದಾಣಿಕೆ ಮಾಡುವುದಷ್ಟೇ ನಿಮ್ಮ ಕೆ... ಎಂದು ಈ 'ಮ್ಯಾನಿಫೆಸ್ಟೋ' ಸಾರುತ್ತದೆ.

'ಬೆಣ್ಣೆ....' ದುರಂತದ ನೀತಿ


ಡಾಟ್ ಕಾಮ್ ಕಂಪನಿಗಳ 'ಹೊ... ಆರ್ಥಿಕತೆ' ಗುಳ್ಳೆ ಒಡೆದದ್ದು, ಎನ್ರೋ... ವರ್ಲ್ಡ್.ಕಾಂಗಳ ಹಗರಣ ಬಯ... ಲೇ-ಆಫ್‌ಗಳ, ಉದ್ಯೋಗ ನಾಶಗಳ ಹತ್ಯಾಕಾ... - ಇವೆಲ್ಲಾ 'ಬೆಣ್ಣೆ' ಯ ಕಥೆಯ... ಬಯಲುಗೊಳಿಸಿದೆ. ಬೆಣ್ಣೆ ಒಯ್ದದ್ದು ... ಕದ್ದದ್ದು. 'ಬೆಣ್ಣೆ ಕದ್ದವರು ಯಾರು?' ಎಂ... ಹಲವರಿಗೆ ಗೊತ್ತಾಗಿದೆ.

ಆದರೆ ಎಲ್ಲಾ ಬದಲಾವಣೆ ಒಳ್ಳೆಯದಾ... ಬೇಕಲ್ಲ. ನಮಗೆ ಬೇಕಾದ ಬದಲಾವಣೆ ಮ... ಬೇಕು. ಇತರರು ತರುವ ಬದಲಾವಣೆಗ... ನಮಗೆ ಒಳ್ಳೆಯದೇ ಎಂದು ವಿಮರ್ಶಿಸಬೇ... ಸರಿಯಲ್ಲದ ಬದಲಾವಣೆಗಳನ್ನು ಪ್ರತಿರೋ... ಬೇಕು. ಸರಿಯಾದ ಬದಲಾವಣೆಗೆ ಪ್ರಯ... ಬೇಕು. ಎಲ್ಲರಿಗೂ 'ಬೆಣ್ಣೆ' ಸಿಗುವ ಬದಲಾ... ಸಾಧ್ಯವಿದೆ - 'ಬದಲಾವಣೆ' ಬಗ್ಗೆ ಸರಿಯ... ಈ ಕಣ್ಣೋಟ ಸಾಧ್ಯವಾಗಿದೆಯೇ? ... 'ಬೆಣ್ಣೆ'ಯ ನೀತಿ ಕಥೆಯ ಪ್ರಚಂಡ ಯಶ... ದುರಂತ ಪುನರಾವರ್ತನೆಯಾಗದಿರುವ ... ಇದೆಯೇ? ಅದಕ್ಕಾಗಿ ವರ್ತಮಾನ ಪರಿ... ಅದನ್ನು ಬದಲಾಯಿಸುವ ಅಗತ್ಯ, ... ಬದಲಾಯಿಸುವುದು - ಈ ಬಗ್ಗೆ ವಿಶ್ಲೇಷ... ಪ್ರಚಾರ ಪ್ರಕ್ಷೋಭೆ ಅಗತ್ಯ. ಆಗ ಮಾತ್ರ '... ಕಥೆಗಳ ದುರಂತ ತಡೆಯಲು ಸಾಧ್ಯ.

- ಶರತ್‌ಚ...

ನನ್ನ ಬೆಣ್ಣೆ ಕದ್ದವರು ಯಾರು?"

ಈ 'ಬೆಣ್ಣೆ' ಗೆ ಅಷ್ಟೇ ತೀವ್ರ ಟೀಕೆ, ಪ್ರತಿರೋಧವೂ ಕಂಡು ಬಂದಿದೆ. ಎಡ, ಪ್ರಗತಿಪರರು ಮಾತ್ರವಲ್ಲ, ಎಲ್ಲಾ ಪ್ರಜ್ಞಾವಂತ ವಿಮರ್ಶಕರು ಈ ಪುಸ್ತಕವನ್ನು ಟೀಕಿಸಿದ್ದಾರೆ. "ಬೆಣ್ಣೆಯ ಕಥೆಯನ್ನು, ಅದರ ಹಿಂದಿರುವ 'ನೀತಿ'ಯನ್ನು ಅಣಕಿಸುವ ಹಲವಾರು ಪುಸ್ತಕಗಳು ಬಂದು ಅವೂ ಜನಪ್ರಿಯವಾಗಿವೆ. `WHO CUT MU CHEES?(ನನ್ನ ಬೆಣ್ಣೆ ಕತ್ತರಿಸಿದವರು ಯಾರು?), `WHO STORE MYU CHEES?(ನನ್ನ ಬೆಣ್ಣೆ ಕದ್ದವರು ಯಾರು?), `WHO MOBVED MYU SOAP'(ನನ್ನ ಸೋಪು ಒಯ್ದವರು ಯಾರು?) `NOBODY MOVED YOUR CHEES(ನಿನ್ನ ಬೆಣ್ಣೆ ಯಾರೂ ಒಯ್ಯಲಿಲ್ಲ) - ಇವು ಅಂತಹ ಯಶಸ್ಸು ಕಂಡ ಅಣಕಗಳು. ಇವುಗಳಲ್ಲೆಲ್ಲಾ 'ಬೆಣ್ಣೆ' 'ದುರ್ಗಮ ವ್ಯವಸ್ಥೆ' ಎರಡು ಇಲಿ, ಎರಡು ಮನುಷ್ಯರು ಪ್ರತೀಕ ಗಳನ್ನು ಬಳಸಿಕೊಂಡು, ವ್ಯವಸ್ಥೆಯನ್ನು ಅಣಕಿಸಲಾಗಿದೆ.



'ಬೆಣ್ಣೆ' ಬದಲಾವಣೆಯ ಸಂಕೀರ್ಣ ಸಮಸ್ಯೆಯನ್ನು ಬೇಕೆಂತಲೇ 'ಸರಳೀಕರಿಸಿ', ಅದಕ್ಕೆ 'ಸರಳ ಪೆದ್ದು' ಪರಿಹಾ... ಕೊಟ್ಟಿದೆ. ಕಳೆದ ಎರಡು ವರ್ಷಗ... ಸಾಮೂಹಿಕ ಲೇ-ಆಫ್‌ಗಳಿಗೆ ಜನಮಾ... ತಯಾರು ಮಾಡಿದೆ. ಇದನ್ನು ಒಂದೂವ... ಕೋಟಿ ಜನ ಪ್ರಶ್ನಿಸದೆ 'ಇಲಿ'ಗಳ ಹಾ... ಕೊಂಡರು ಎನ್ನುವುದೇ ದೊಡ್ಡ ದುರಂತ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ). ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12. 1ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH